# ಕೇರಳ ಪಾಠಾವಳಿ
# KERALA READER

## ಕನ್ನಡ - I
## KANNADA - I

## ಮುಂದುವರಿದ ಪಠ್ಯ
## ADVANCED TEXT

ತರಗತಿ

X

ಭಾಗ 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - X (Advanced Text) - Part 1

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
## KANNADA - X - AT

**Advisor**

| | |
|---|---|
| Shivashankara P. | Asst. Professor, GPM College, Manjeshwar |

**Chairman**

| | |
|---|---|
| Dr. Shrikrishna Bhat | Rtd. Professor, Government College, Kasaragod |

**Experts**

| | |
|---|---|
| Dr. Radhakrishna N. Bellur | Professor, Government College, Kasaragod |
| Dr. Shridhara N | Professor, Government College, Kasaragod |
| Ramanna D | Rtd. Headmaster, GVHSS Delampady |

**Participants**

| | |
|---|---|
| Rajarama Rao T. | Rtd. Headmaster, SVVHSS Meeyapadavu |
| Veena K. | Rtd. Headmistress, GHSS Bandadka |
| Harisha G. | HSST, SVVHSS Meeyapadavu |
| Ravikumar | HSST, GHSS Kumbla |
| Sarvamangala P. | HST, NHSS Peradala |
| Dr. Satheesha Punchithaya | HST, SNHS Perla |
| Geethasavithri K. | HST, GVHSS Mulleria |
| Parameshwari H. | HST, SATHSS Manjeshawara |
| Shrilatha K. | HST, SGKHS Kudlu |
| Prashanth Kumar S. | HST, SSHS Sheni |

**Artists**

| | |
|---|---|
| Satheesh K. | Special Teacher, BRC Kumbla |
| Jayaprakash Shetty | Drawing Teacher, SATHSS Manjeshwar |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| | | | |
|---|---|---|---|
| **ಘಟಕ 1 : ಪರಿಸರ ಪ್ರೇಮ** | | | **7 - 37** |
| ● | ಚಿತ್ತಿಯ ಮಳೆಯ ಸಂಜೆ | ಕವನ | ದ. ರಾ. ಬೇಂದ್ರೆ |
| ● | ಒಂದು ಝರಿಯ ಜಾಡಿನಲ್ಲಿ | ಅನುಭವ ಕಥನ | ಪೂರ್ಣಚಂದ್ರ ತೇಜಸ್ವಿ |
| ● | ಮುದುಕ ಸೆಟ್ಟಿಯೂ ಮೂವರು ಮಕ್ಕಳೂ | ನಾಟಕ | ಐ. ಕೆ. ಬೊಳುವಾರು |
| **ಘಟಕ 2 : ನುಡಿಗಂಪು** | | | **38 - 58** |
| ● | ಕನ್ನಡ ಭಾಷೆ | ಲೇಖನ | ಡಾ. ಪಿ. ಶ್ರೀಕೃಷ್ಣ ಭಟ್ |
| ● | ಭ್ರಾತೃಪ್ರೇಮ | ಯಕ್ಷಗಾನ ಪ್ರಸಂಗ | ಪಾರ್ತಿಸುಬ್ಬ |
| ● | ಅಭಯದಾನ | ಗದ್ಯ | ಕೆಂಪು ನಾರಾಯಣ |
| **ಘಟಕ 3 : ಜೀವನಾದರ್ಶ** | | | **59 - 81** |
| ● | ತಥಾಗತನಾ ಮಹರ್ದ್ಧಿಕತೆ | ಖಂಡಕಾವ್ಯ | ಗೋವಿಂದ ಪೈ |
| ● | ಆಗು ನೀ ಅನಿಕೇತನ | ಕತೆ | ಡಾ. ನಾ. ಮೊಗಸಾಲೆ |
| ● | ಅಘಂ ಪೋಗಿ ಬಾಳ್ದಪೆ | ಕಾವ್ಯ | ಲಕ್ಷ್ಮೀಶ |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;<br>
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;<br>
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 1. ಪರಿಸರ ಪ್ರೇಮ

ಉಸಿರಿಗೆ ಹಸಿರು ಬೇಕು. ಆದ್ದರಿಂದ ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಈ ಭೂಮಿಯ ಮೇಲೆ ಮನುಷ್ಯಮಾತ್ರವಲ್ಲದೆ ಅನೇಕ ಜೀವಸಂಕುಲಗಳು ವಾಸಿಸುತ್ತವೆ. ಎಲ್ಲ ಜೀವಿಗಳಿಗೂ ವಾಸಿಸಲು ಮುಖ್ಯವಾಗಿ ಬೇಕಾಗಿರುವುದು ಪರಿಸರ. ನಾವು ಗಿಡ ಮರಗಳನ್ನು ನೆಟ್ಟು ಬೆಳೆಸಿದರೆ, ಪರಿಸರವೂ ಶುದ್ಧವಾಗಿರುವುದರ ಜೊತೆಗೆ ನಮ್ಮ ಆರೋಗ್ಯವೂ ಉತ್ತಮವಾಗಿರುತ್ತದೆ.

ಪ್ರಕೃತಿಯ ವರದಾನಗಳಲ್ಲಿ ಮಳೆಗೆ ಪ್ರಧಾನ ಸ್ಥಾನವಿದೆ. ಮಳೆಯ ಸೌಂದರ್ಯ, ತಾಳಗಳು ಅನೇಕ ಕವಿಗಳ ಸಾಹಿತ್ಯ ರಚನೆಗೆ ವಸ್ತುವಾಗಿವೆ. ಅತಿವೃಷ್ಟಿ, ಅನಾವೃಷ್ಟಿ ಮತ್ತು ವರ್ತಮಾನ ಜಗತ್ತಿನ ವಿದ್ಯಮಾನಗಳಿಗೆ ಕಾರಣವಾದ ಅಂಶಗಳನ್ನು ವಿವೇಚಿಸಬೇಕಾಗಿದೆ. ಮನುಷ್ಯನ ಸ್ವಾರ್ಥದಿಂದ, ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರುವ ನಗರೀಕರಣವು ಪರಿಸರ ನಾಶಕ್ಕೆ ಹೇಗೆ ಕಾರಣವಾಗುತ್ತದೆ ಎನ್ನುವುದನ್ನು ಆಲೋಚಿಸಬೇಕಾಗಿದೆ. ಈ ವಿಚಾರಗಳನ್ನು ‘ಚಿತ್ತಿಯ ಮಳೆಯ ಸಂಜೆ’, ‘ಒಂದು ಝರಿಯ ಜಾಡಿನಲ್ಲಿ’, ‘ಮುದುಕ ಸೆಟ್ಟಿಯೂ ಮೂವರು ಮಕ್ಕಳೂ’ ಪಾಠಗಳ ಮೂಲಕ ಮನನ ಮಾಡಬೇಕಾಗಿದೆ.










- ಮೇಲಿನ ಚಿತ್ರಗಳನ್ನು ಗಮನಿಸಿದಿರಲ್ಲವೇ? ನಿಮ್ಮ ಅಭಿಪ್ರಾಯಗಳನ್ನು ಬಾಯ್ದೆರೆಯಾಗಿ ತರಗತಿಯಲ್ಲಿ ಮಂಡಿಸಿರಿ.

# ಚಿತ್ತಿಯ ಮಳೆಯ ಸಂಜೆ

**ದ.ರಾ. ಬೇಂದ್ರೆ**



ಕುರುಡು ಪ್ರೀತಿಯ ಹಾಂಗ
ಕುರುಡು ಚಿತ್ತಿಯ ಮಳೆಯೆ
ಮುಗುಳು ನಗಿ ಸುತ್ತುರುಳಿಸಿ
ಸುರದಽತ್ತ ಸುರದಾವ

ಎತ್ತೇನೋ ಬಿತ್ತೇನೊ
ಮಿಂಚಿನ ಮುತ್ತೇನೊ
ಕಣ್ಮುಚ್ಚಿ ತೆರೆವುದರಾಗ
ಹರದಾಽರಿಗೆ ಹರದಾವ

ಇದಿರು ಗುಡ್ಡದ ತಲೆಗೆ
ಮೋಡ ಮುಸುಕೆಳೆವಾಗ
ಬದಿಯ ಗುಡ್ಡದ ಮ್ಯಾಲೆ
ಬಿಸಿಲು ಮೈಚಾಚ್ಯಾವ

ತೋಪು ತೋಟದ ಗಾಳಿ
ನುಗ್ಗಿ ನುಸುಳಿ ಬಂದು
ಹುಲ್ಲುಗಾವಲಾ ಸವರಿ
ಬೈತಲಾ ಬಾಚ್ಯಾವ

ಗಿಡಬಳ್ಳಿ ಎಲಿ ಎಲಿ
ತೊಯ್ದ ತೆಂಗಿನ ಗರಿ
ಬೆಳ್ಳಿಸುಳಿ ಬರೆಧಾಂಗ
ಮಿತಿಮೀsರಿ ಮಿಂಚ್ಯಾವ

ಪಡುವಲಕ ಮುಗಿದ ಕಿರಣ
ಮೂಡಲಕ ಚಿಮ್ಮಿಕೊಂಡು
ಅರಿಷಿಣ ಕುಂಕುಮ ತಂದು
ಮರದ್ಹಣಿಗೆ ಹಂಚ್ಯಾವ

ಸಂಜಿಸೂರ್ಯಾನ ಹೆಗಲ
ಜರದ ಸೆಲ್ಲೇದ ಸೋಗಿ
ನವಿಲಗೊರಳಿನ ಮುಗಿಲ
ಸೆರಿಗ್ಗೆ ಬೀಸ್ಯಾವ

ಹೊಲದಂಚಿನ ಹಸಿರ ಬಯಲು
ಮುತ್ತಿನ ಸೇಸೆ ತಳೆದು
ದುಡಿದವರ ಪಾದಕ್ಕಂತ
ಹಡದಿ ಹಾಸ್ಯಾವ

ದಿನಗೂಲಿಗೆ ದುಡಿದು ದಣಿದು
ತಣಿದು ಹೊರಟವರ ಮಾರಿ
ಎದಿಯೆತ್ತರ ಬೆಳೆಗೆ ಕಳಸ
ಇಟ್ಟಾಂsಗ ಮೆರೆದಾವ

ಸಿಂಗಾರಿಲ್ಲದೀ ಸೊಬಗು
ಸೊಗಸಿ-ಜೀವಕೆ ಮುದ್ದು;
ಸೋತ ದಾರಿಗರ ಕಣ್ಣು
ಮನಸು ಕದ್ದಾವ

ಚವರಿ-ಜೋಳದ ತೆನೆಯೆ
ಎರಡು ಬದಿಗೆ ಸರಿದು
ಅವರ ಮುಖರೇದ ಮುಖಕೆ
ಚವರ ಹಿಡಿದಾವ

ಹಗಲು ಮಲ್ಲಾಡಕೆ ಕಳೆದು
ಇರುಳು ವಸತಿಗಂತ
ಬೆಳ್ಳಕ್ಕಿ ತೋರಣಗಟ್ಟಿ
ಬೆಳವಲಕ್ಕೆ ನಡೆದಾವ



## ಕವಿ ಪರಿಚಯ



ಕನ್ನಡದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ೩೧.೦೧.೧೮೯೬ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರ ತಂದೆ ರಾಮಚಂದ್ರ ಬೇಂದ್ರೆ. ತಾಯಿ ಅಂಬವ್ವ. ಧಾರವಾಡದಲ್ಲಿ ಮೆಟ್ರಿಕ್ ಮುಗಿಸಿದ ಮೇಲೆ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ. ಎ. ಪದವಿಯನ್ನು ಗಳಿಸಿದರು. ಕೆಲವು ಕಾಲ ಅಧ್ಯಾಪಕ ವೃತ್ತಿ ಮಾಡಿದ ಮೇಲೆ ೧೯೩೫ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದಿಂದ ಎಂ. ಎ. ಪದವಿ ಗಳಿಸಿದರು. ೧೯೪೪ರಲ್ಲಿ ಸೊಲ್ಲಾಪುರದ ಡಿ. ಎ. ವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡರು. ೧೯೫೬ರಲ್ಲಿ ನಿವೃತ್ತರಾದ ಮೇಲೆ ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದರು. ಪದ್ಮಶ್ರೀ ಪ್ರಶಸ್ತಿ, 'ಅರಳು ಮರಳು' ಕವನಸಂಗ್ರಹಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ನಾಕುತಂತಿ'ಗೆ ಜ್ಞಾನಪೀಠ ಪ್ರಶಸ್ತಿ ಮೊದಲಾದವು ಬೇಂದ್ರೆಯವರ ಸಾಹಿತ್ಯಕೃಷಿಗೆ ಸಂದ ಗೌರವಗಳು. ಶಿವಮೊಗ್ಗದಲ್ಲಿ ನಡೆದ ೨೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದ ಗೌರವವೂ ಇವರಿಗೆ ದೊರಕಿದೆ. ಕೃಷ್ಣಾಕುಮಾರಿ, ಸಖೀಗೀತ, ಉಯ್ಯಾಲೆ, ಗರಿ, ನಾದಲೀಲೆ, ಅರುಳುಮರುಳು, ಸಾಹಿತ್ಯ ಮತ್ತು ವಿಮರ್ಶೆ, ಕಾವ್ಯೋದ್ಯೋಗ, ಸಾಹಿತ್ಯದ ವಿರಾಟ್ ಸ್ವರೂಪ, ನಾಕುತಂತಿ, ನಿರಾಭರಣ ಸುಂದರಿ, ಶಾಂತಲಾ ಇವುಗಳು ಬೇಂದ್ರೆಯವರ ಪ್ರಮುಖ ಕೃತಿಗಳಾಗಿವೆ. 'ಅಂಬಿಕಾತನಯದತ್ತ' ಇವರ ಕಾವ್ಯನಾಮ. ದ. ರಾ. ಬೇಂದ್ರೆಯವರು ೨೬-೧೦-೧೯೮೧ರಲ್ಲಿ ಮುಂಬಯಿಯಲ್ಲಿ ನಿಧನರಾದರು.

ಪ್ರಸ್ತುತ 'ಚಿತ್ತಿಯ ಮಳೆಯ ಸಂಜೆ' ಕವನವನ್ನು 'ಸಖೀಗೀತ' ಎನ್ನುವ ಕವನ ಸಂಕಲನದಿಂದ ಆರಿಸಲಾಗಿದೆ.

## ವಿಶದೀಕರಣ

**ಚಿತ್ತಿಯ ಮಳೆ :** ಚಿತ್ರಾ ನಕ್ಷತ್ರದಲ್ಲಿ ಸುರಿಯುವ ಮಳೆ. ಭಾರತೀಯ ಪದ್ಧತಿಯಂತೆ ೨೭ ನಕ್ಷತ್ರಗಳಿದ್ದು, ಅವುಗಳನ್ನು ನಿತ್ಯನಕ್ಷತ್ರಗಳಾಗಿಯೂ ಮಹಾನಕ್ಷತ್ರಗಳಾಗಿಯೂ ಗುರುತಿಸಲಾಗುತ್ತದೆ. ಅಶ್ವಿನಿಯಿಂದ ಮೊದಲ್ಗೊಂಡು ರೇವತಿಯ ತನಕದ ೨೭ ನಕ್ಷತ್ರಗಳಲ್ಲಿ ಒಂದೊಂದು ನಕ್ಷತ್ರವೂ ಪ್ರತಿನಿತ್ಯ ಬರುವುದನ್ನು ನಿತ್ಯನಕ್ಷತ್ರವೆನ್ನುವರು. ಆ ನಕ್ಷತ್ರಗಳು ವಾರ್ಷಿಕವಾಗಿಯೂ ಹಂಚಲ್ಪಟ್ಟು ಸುಮಾರು ಹನ್ನೆರಡರಿಂದ ಹದಿಮೂರು ದಿನಗಳಿಗೆ ಒಂದು ನಕ್ಷತ್ರವೆಂದು ಗುರುತಿಸಲಾಗುತ್ತದೆ. ಅವುಗಳನ್ನು ಮಹಾನಕ್ಷತ್ರಗಳೆನ್ನುವರು. ಅವುಗಳಲ್ಲಿ ಚಿತ್ರಾ ನಕ್ಷತ್ರವೂ ಒಂದು.

ಸುಮಾರು ಅಕ್ಟೋಬರ್ ತಿಂಗಳಲ್ಲಿ ಈ ಮಹಾ ನಕ್ಷತ್ರದ ಕಾಲಾವಧಿ ಇರುತ್ತದೆ. ಈ ಸಮಯದಲ್ಲಿ ಹಿಂಗಾರು ಮಳೆ ಸುರಿಯುವುದು. ಚಿತ್ರಾ (ಸಂಸ್ಕೃತ), ಚಿತ್ತೆ (ತದ್ಭವ), ಚಿತ್ತಿ (ಧಾರವಾಡ ಪ್ರಯೋಗ)

**ಬೆಳ್ಳಿಸುಳಿ (ಬೆಳ್ಳಿಯ ಗೋಲ) :** ಮಳೆಯ ಒಂದು ಝುಳಕು ಬಂದು ಹೋದ ಬಳಿಕ, ವಾತಾವರಣದಲ್ಲಿರುವ ಧೂಳೆಲ್ಲ ಕರಗಿ, ಹರಿದು ಹೋಗುತ್ತದೆ. ತೋಟದಲ್ಲಿರುವ ತೆಂಗು, ಅಡಕೆ, ಮಾವು ಮುಂತಾದ ಮರಗಳ ಎಲೆಗಳ ಮೇಲೆ ಸೂರ್ಯನ ನೇರವಾದ ಕಿರಣಸ್ಪರ್ಶವಾಗುತ್ತದೆ. ಆಗ ಈ ಎಲೆಗಳ ಮೇಲಿರುವ ಮಳೆಯ ಹನಿಗಳು ಸೂರ್ಯಕಿರಣಗಳನ್ನು ಪ್ರತಿಫಲಿಸುತ್ತ ಹೊಳೆಯುತ್ತವೆ. ತೆಂಗಿನ ಗರಿಗಳ ಅಂಚಿನಲ್ಲಿ ಪೋಣಿಸಿದ ಹನಿಗಳ ಮೇಲೆ ಬಿದ್ದ ಕಿರಣಗಳು ಬೆಳ್ಳಿಗೋಲವನ್ನು ಬರೆದಂತೆ ಕಾಣಿಸುತ್ತವೆ.

**ಬೈತಲೆ :** ತಲೆಯ ಮೇಲ್ಭಾಗದಲ್ಲಿ ಕೂದಲನ್ನು ಎರಡು ಕಡೆಗೂ ಬಾಚಿದಾಗ ಮಧ್ಯೆ ಗೆರೆಯಂತೆ ಕಾಣುವ ನೇರವಾದ ಜಾಗ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. 'ಕುರುಡು ಪ್ರೀತಿಯಂತೆ ಚಿತ್ತಿಯ ಮಳೆಯು' ಎಂದು ಕವಿ ಹೇಳಿರುವುದೇಕೆ?
2. ಮುಸ್ಸಂಜೆಯ ಆಕಾಶವನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ?
3. ಗಿಡ ಬಳ್ಳಿಗಳ ಮೇಲೆ, ತೆಂಗಿನ ಗರಿಗಳ ಮೇಲೆ ಮಳೆಯ ಹನಿಗಳು ಹೇಗೆ ಶೋಭಿಸಿದವು?
4. ಹೊಲದಂಚಿನ ಹಸಿರ ಬಯಲು ಕವಿಯ ಕಣ್ಣಿಗೆ ಹೇಗೆ ಗೋಚರಿಸಿತು?

## ಸಾರಾಂಶ ಬರೆಯಿರಿ

'ಚಿತ್ತಿಯ ಮಳೆಯ ಸಂಜೆ' ಕವನದ ಸಾರಾಂಶವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಿರುವ ಪದ್ಯದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಪಡುವಲಕ ಮುಗಿದ ಕಿರಣ
ಮೂಡಲಕ ಚಿಮ್ಮಿಕೊಂಡು
ಅರಿಷಿಣ ಕುಂಕುಮ ತಂದು
ಮರದ್ವಣಿಗೆ ಹಂಚ್ಯಾವ

## ಆಸ್ವಾದನ ಟಿಪ್ಪಣಿ ಬರೆಯಿರಿ

ಕೆಳಗೆ ನೀಡಿರುವ ಪದ್ಯದ ಸಾಲುಗಳ ಆಸ್ವಾದನ ಟಿಪ್ಪಣಿ ಬರೆಯಿರಿ.

ಇದಿರು ಗುಡ್ಡದ ತಲೆಗೆ
ಮೋಡ ಮುಸುಕೆಳೆವಾಗ
ಬದಿಯ ಗುಡ್ಡದ ಮ್ಯಾಲೆ
ಬಿಸಿಲು ಮೈಚಾಚ್ಯಾವ

ತೋಪು ತೋಟದ ಗಾಳಿ
ನುಗ್ಗಿ ನುಸುಳಿ ಬಂದು
ಹುಲ್ಲುಗಾವಲಾ ಸವರಿ
ಬೈತಲಾ ಬಾಚ್ಯಾವ

ಗಿಡಬಳ್ಳಿ ಎಲಿ ಎಲಿ
ತೊಯ್ದ ತೆಂಗಿನ ಗರಿ
ಬೆಳ್ಳಿಸುಳಿ ಬರೆಧಾಂಗ
ಮಿತಿಮೀಽರಿ ಮಿಂಚ್ಯಾವ

## ವರ್ಣನೆ ಬರೆಯಿರಿ

ದ. ರಾ. ಬೇಂದ್ರೆಯವರು ಚಿತ್ತಿಯ ಮಳೆಯ ಸಂಜೆಯ ಸೊಬಗನ್ನು ಈ ಕವನದಲ್ಲಿ ವರ್ಣಿಸಿದ್ದಾರೆ. ಅದೇ ರೀತಿ ನೀವು ಕಂಡ ಮಳೆಗಾಲದ ಸೊಬಗನ್ನು ವರ್ಣಿಸಿ ಬರೆಯಿರಿ.

## ವಾಕ್ಯ ರಚಿಸಿರಿ

ಕೆಳಗೆ ಕೊಡಲಾದ ವಾಕ್ಯಗಳಲ್ಲಿರುವ ಅಡಿಗೆರೆ ಎಳೆದ ಪದಗಳ ಪರ್ಯಾಯ ಪದಗಳನ್ನು ಬಳಸಿ ಬೇರೆ ವಾಕ್ಯಗಳನ್ನು ರಚಿಸಿರಿ.

- ನಗರದ ವಿದ್ಯುತ್ ಅಲಂಕಾರ ಕಣ್ಣು ಕೋರೈಸುವಂತಿತ್ತು.
- ಸೂರ್ಯನು ಮೂಡಲಲ್ಲಿ ಮೂಡುತ್ತಾನೆ.
- ಹೊತ್ತು ಮುಳುಗಿದಂತೆ ಇರುಳು ದಟ್ಟವಾಗತೊಡಗಿತು.
- ಗಾಳಿ ಮಳೆಯ ಅಬ್ಬರಕ್ಕೆ ಗುಡಿಸಲೊಂದು ನಾಶವಾಯಿತು.

## ಪದ ವಿಂಗಡಿಸಿ ಸಂಧಿ ಹೆಸರಿಸಿರಿ

ಕೆಳಗೆ ನೀಡಲಾದ ಪದಗಳನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.

- ಸುತ್ತುರುಳಿಸಿ
- ನವಿಲಗೊರಳು
- ಹೊಲದಂಚು
- ದಿನಗೂಲಿ

## ಸಂಚಿಕೆ ತಯಾರಿಸಿರಿ

ಪ್ರಕೃತಿಯ ಸೌಂದರ್ಯವನ್ನು ವರ್ಣಿಸುವ ಕವನಗಳನ್ನು ರಚಿಸಿರಿ. ಅವುಗಳನ್ನು ಸಂಗ್ರಹಿಸಿ ಸಂಚಿಕೆಯೊಂದನ್ನು ತಯಾರಿಸಿರಿ.

* * *

# ಒಂದು ಝರಿಯ ಜಾಡಿನಲ್ಲಿ

**ಪೂರ್ಣಚಂದ್ರ ತೇಜಸ್ವಿ**

ನಮ್ಮ ಮನೆಯ ಪಕ್ಕ ಒಂದು ಚಿಕ್ಕ ಝರಿ ಹರಿಯುತ್ತದೆ. ಅದು ನಮ್ಮ ತೋಟದೊಳಗೇ ಅಲ್ಲೆಲ್ಲೋ ಕಾಡಿನ ಜಿಗ್ಗಿನೊಳಗಿರುವ ಕೊರಕಲೊಳಗಿಂದ ಹರಿದು ಬರುತ್ತದೆ. ಅದೊಂದು ಹಳ್ಳ ಇಲ್ಲದಿದ್ದರೆ ಬೇಸಗೆಯಲ್ಲಿ ಕುಡಿಯಲು ಸಹ ನೀರಿಲ್ಲದೆ ಬೋರ್‌ವೆಲ್ ತೋಡಿಸಿಕೊಂಡು ಅದರ ಚೌಳು ನೀರನ್ನು ಹರಳೆಣ್ಣೆ ಕುಡಿದ ಹಾಗೆ ಕುಡಿಯುತ್ತ ಕಾಲ ಹಾಕಬೇಕಿತ್ತು. ಬಟ್ಟ ಬೇಸಿಗೆಯಲ್ಲಿ ಇಂಥ ಮಲೆನಾಡಿನಲ್ಲಿ ಸಹ ಕುಡಿಯುವ ನೀರಿಗಾಗಿ ಜನ ಹಾಹಾಕಾರ ಅನುಭವಿಸುವಂತಾಗಿದೆ. ಆದರೆ ನಮ್ಮ ಝರಿ ಮಾತ್ರ ಯಾವತ್ತೂ ಬತ್ತಿಲ್ಲ. ಬೇಸಿಗೆಯ ಉರಿಬಿಸಿಲಿಗೆ ಜಗತ್ತೆಲ್ಲ ಬೆಂಕಿಯಾಗಿದ್ದಾಗಲೂ ಹೋಗಿ ನೋಡಿದ್ದೇನೆ. ತೆಳ್ಳಗೆ ನೀರು ಹರಿಯುತ್ತಲೇ ಇರುತ್ತದೆ. ಒಂದು ವರ್ಷ ಮಳೆ ಅರ್ಧಕ್ಕರ್ಧ ಕಡಿಮೆಯಾಯ್ತು. ನಾನಂತೂ ಈ ಸಾರಿ ಈ ಝರಿ ಖಂಡಿತ ಬತ್ತಿಹೋಗುತ್ತದೆ; ಕುಡಿಯುವ ನೀರಿಗೆ ಏನಪ್ಪಾ ಮಾಡುವುದು ಎಂದು ಚಿಂತಾಕ್ರಾಂತನಾಗಿದ್ದೆ. ಆದರೆ ಆಶ್ಚರ್ಯ! ಪ್ರತಿವರ್ಷ ಹೇಗೆ ಹರಿಯುತ್ತಿತ್ತೋ ಹಾಗೇ ಆ ವರ್ಷವೂ ಈ ಝರಿ ಹರಿಯುತ್ತಲೇ ಇತ್ತು. ಈ ಝರಿಗೆ ನೀರು ಎಲ್ಲಿಂದ ನಿರಂತರವಾಗಿ ಸರಬರಾಜಾಗುತ್ತೋ ಯಾರಿಗೆ ಗೊತ್ತು!



ಈ ಝರಿಯ ನೀರು ಸ್ಫಟಿಕದಷ್ಟು ಶುಭ್ರವಾಗಿರುತ್ತದೆ. ಗಾಜಿನ ಲೋಟದಲ್ಲಿ ನೀರಿಟ್ಟರೆ ನೀರು ಕಾಣುವುದೇ ಇಲ್ಲ. ಅಷ್ಟೊಂದು ಪಾರದರ್ಶಕ. ಆದರೆ ಹಳ್ಳ ಹರಿದು ಬರುವ ಪಾತ್ರ ನೋಡಿದರೆ ನೀವು ಗಾಬರಿಯಾಗುತ್ತೀರಿ. ನೀರು ಕುಡಿಯಲು ಅಂಜಿಕೆಯಾಗುತ್ತದೆ. ಅಷ್ಟೊಂದು ಕಸ, ಕಡ್ಡಿ, ತರಗೆಲೆಗಳು ಹಳ್ಳದೊಳಗೆ ಬಿದ್ದು ಕೊಳೆಯುತ್ತಾ ಇರುತ್ತವೆ. ಆದರೆ ನೀರು ಮಾತ್ರ ತಣ್ಣಗೆ ಸ್ಫಟಿಕ ಶುಭ್ರವಾಗಿ ಎಲೆಗಳ ನಡುವಿನಿಂದ ಬೀಳುವ ಬಿಸಿಲಿಗೆ ಫಳಫಳ ಹೊಳೆಯುತ್ತಾ ಹರಿಯುತ್ತಲೇ ಇರುತ್ತದೆ. ಹಳ್ಳದ ಪಾತ್ರದಲ್ಲಿ ಒಂದೇ ಒಂದು ಗೇಣು ಗುಂಡಿ ಇರುವಲ್ಲಿ ಕಪ್ಪೆ, ಏಡಿ, ಚಿಕ್ಕಚಿಕ್ಕ ಪುಡಿಮೀನುಗಳು ನೀರಿನಲ್ಲಿ ಕುಳಿತುಕೊಂಡು ಏನೇನೋ ಕಾರುಬಾರು ನಡೆಸುತ್ತವೆ. ಒಂದು ದಿನ ನಾವು ಕುಡಿಯಲು ನೀರಿಡುವ ಹೂಜಿಯಲ್ಲಿ ಒಂದು ಅತಿ ಚಿಕ್ಕ ಸಿಗಡಿ ಈಜಾಡುತ್ತಾ ಇತ್ತು. ನಮ್ಮ ವಿಜ್ಞಾನಿ ಮಿತ್ರ ಮಲ್ಲಿಕ್‌ರಿಗೆ ಬೇಸರವಾಗಬಹುದೆಂದು ಬಗೆದು ಹೂಜಿ ನೀರು ಚೆಲ್ಲುತ್ತಾ, ಹಳ್ಳ ಒಂದು ಸಾರಿ ಕ್ಲೀನ್ ಮಾಡಬೇಕೆಂದು ಗೊಣಗಿದೆ. ಆದರೆ ನನ್ನ ಊಹೆಗೆ ವ್ಯತಿರಿಕ್ತವಾಗಿ ಅವರು ಹೇಳಿದರು, "ಖಂಡಿತ ಕ್ಲೀನ್ ಮಾಡಬೇಡಿ. ನಿಮ್ಮ ಝರಿಯಲ್ಲಿ ಇವೆಲ್ಲಾ ಮಾಯವಾದ ದಿನ ನೀವು ಈ ನೀರು ಕುಡಿಯಲು ಯೋಗ್ಯವೆ ಎಂದು ಪರೀಕ್ಷಿಸಬೇಕಾಗುತ್ತದೆ. ಇವೆಲ್ಲಾ ಇರುವವರೆಗೆ ಇದನ್ನು ಕುಡಿಯುವುದರಿಂದ ಪ್ರಾಣಾಪಾಯವಂತೂ ಖಂಡಿತ ಇಲ್ಲ" ಎಂದು.

ಹೋದ ಬೇಸಿಗೆಯಲ್ಲಿ ಈ ತೆಳ್ಳನೆಯ ಝರಿಯಲ್ಲಿ ನಿಜಕ್ಕೂ ಎಷ್ಟು ನೀರು ಬರುತ್ತದೆ ನೋಡಬೇಕೆಂದು ಯೋಚಿಸಿದೆ. ಅದಕ್ಕೊಂದು ಅಡ್ಡಗಟ್ಟೆ ಕಟ್ಟಿ ಬರುವ ನೀರೆಲ್ಲ ಒಂದು ಪೈಪಿನೊಳಗಿಂದ ಹರಿಯುವಂತೆ ಮಾಡಿದೆ. ಪೈಪಿನಲ್ಲಿ ಬೀಳುವ ನೀರು ನೋಡಿದರೆ ಅಯ್ಯೋ ಇಷ್ಟೇನಾ! ಎನ್ನುವಂತಿತ್ತು. ಇರಲಿ ಎಂದು ಬಕೆಟ್ ತಂದು ಒಂದು ನಿಮಿಷದ ಕಾಲಾವಧಿಯಲ್ಲಿ ಎಷ್ಟು ನೀರು ಬರುತ್ತದೆ ನೋಡಿದೆ. ನೋಡಲು ಹಾಗಿದ್ದ ಆ ಝರಿಯ ನೀರು ನನಗೆ ಅಚ್ಚರಿಯಾಗುವಂತೆ ಒಂದು ನಿಮಿಷಕ್ಕೆ ಮೂವತ್ತು ಲೀಟರು ಬರುತ್ತಿತ್ತು. ಎಂದರೆ ಒಂದುದಿನಕ್ಕೆ ಹೆಚ್ಚುಕಡಿಮೆ ನಲ್ವತ್ತಮೂರು ಸಾವಿರ ಲೀಟರು! ಆಶ್ಚರ್ಯವಾಯ್ತು!! ಝರಿ ನೆಲಕ್ಕೆ ಹತ್ತಿಕೊಂಡು ತೆಳ್ಳಗೆ ಹರಿಯುವಂತೆ ಕಾಣುವುದರಿಂದ ಅದರಲ್ಲಿ ನಿರಂತರವಾಗಿ ಬರುವ ನೀರಿನ ಪ್ರಮಾಣ ಅಂದಾಜಾಗುವುದಿಲ್ಲ. ಅಳೆದು ಲೆಕ್ಕಾಚಾರ ಹಾಕಿದಾಗಲೇ ಗೊತ್ತಾಗುವುದು.

ಒಂದು ದಿನ ಗೆಳೆಯ ಗಾಂಗೇಯ ಬಂದು ಇದು ಎಲ್ಲಿಂದ ಹುಟ್ಟುತ್ತದೆ ನೋಡಬೇಕು ಎಂದ. ಅದು ಬರುವ ಜಾಗದಲ್ಲಿ ಕಾಡು, ಲಂಟಾನ ಜಿಗ್ಗು, ಗುರುಗಿ ಹಳು ಎಲ್ಲ ಬೆಳೆದು ತಲೆ ಹಾಕಲು ಸಾಧ್ಯವಿರಲಿಲ್ಲ. ಗಾಂಗೇಯನಿಗೆ "ಆ ಕೊರಕಲೊಳಗಿಂದ ಬರುತ್ತದೆ ಕಣೋ" ಎಂದೆ. ಅದರಿಂದ ಅವನಿಗೇನೂ ಸಮಾಧಾನ ಆಗಲಿಲ್ಲ. ಅದು ನೆಲದೊಳಗಿಂದ ಹುಟ್ಟಿ ಹೊರಬರುವ ಜಾಗ ನೋಡಬೇಕೆಂದು ಹೇಳಿದ. ನನಗೂ ನಮ್ಮ ತೋಟದೊಳಗೇ ಹುಟ್ಟಿ ಹರಿಯುವ ಈ ನದೀ ಮೂಲ ಹಾಗೇ ನೋಡದೆ ಬಿಡುವುದು ಸರಿ ಎನ್ನಿಸಲಿಲ್ಲ. ಸರಿ, ನಾನೂ ಗಾಂಗೇಯ ಕತ್ತಿ ಹಿಡಿದು ಹಳ್ಳದ ಪಾತ್ರದಲ್ಲಿ ಅದೂ ಇದೂ ಹರಟೆ ಹೊಡೆಯುತ್ತಾ, ಹಳ್ಳದ ತಂಪು ನೀರಿನಲ್ಲಿ ಕಾಲು ತೋಯಿಸುತ್ತಾ ಹೊರಟೆವು.

ಮೇಲೆ ಮೇಲೆ ಹೋದ ಹಾಗೆ ಹಳ್ಳ ಚಿಕ್ಕದಾಗುತ್ತಾ ನೀರಿನ ಪ್ರಮಾಣ ಕಡಿಮೆಯಾಗುತ್ತಾ ಹೋಯ್ತು. ಹಳ್ಳದ ಮೂಲಕ ಹತ್ತಿರ ಇದ್ದ ಹಳುವಿನ ಜಿಗ್ಗನ್ನೆಲ್ಲಾ ಮುಂಗಾಲಿನಿಂದ ಪಕ್ಕಕ್ಕೆ ಒತ್ತಿ, ಕತ್ತಿಯಿಂದ ಸವರಿ ಕೊರಕಲಿನ ಒಳಗೆ ನುಗ್ಗಿದೆವು. ನಾವು ಆ ಜಿಗ್ಗಿನೊಳಗೆ ಗಲಾಟೆ ಮಾಡಿಕೊಂಡು ನುಗ್ಗಿದ ಕೂಡಲೆ ಆ ಕೊರಕಲಿನೊಳಗಿಂದ ಹಕ್ಕಿಗಳು ಕೂಗಿಕೊಂಡು ಹಾರಿ ಮೇಲೆ ಮರದಲ್ಲಿ ಕುಳಿತವು. ಬಹುಶಃ ಸುತ್ತಮುತ್ತಲಿನ ಎಲ್ಲಾ ಹಕ್ಕಿ ಪ್ರಾಣಿಗಳೂ ಅಲ್ಲಿಗೇ ನೀರು ಕುಡಿಯಲು ಬರುತ್ತಿದ್ದವೋ ಏನೋ! ಒಂದು ಉಡ ಓಡಿಹೋಗಲು ಕೊರಕಲಿನಲ್ಲಿ ಬೇರೆಕಡೆ ಜಾಗ ಇಲ್ಲದ್ದರಿಂದಲೋ ಏನೋ ಧಡಧಡ ಓಡಿಬಂದು ನಮ್ಮ ಮೇಲೇ ನುಗ್ಗಿ ಕಾಡುಬಿದ್ದು ಪರಾರಿಯಾಯ್ತು. ಕಾಲ ಕೆಳಗೆ ಮೊಣಕಾಲಿನವರೆಗೆ ಬಿದ್ದಿದ್ದ ತರಗೆಲೆಗಳ ಹಾಸಿನೊಳಗೆ ಹಳ್ಳ ಎಲ್ಲಿದೆ ಎನ್ನುವುದೇ ಗೊತ್ತಾಗುತ್ತಿರಲಿಲ್ಲ. ನೀರು ಹುಟ್ಟುವ ಜಾಗವಾದ್ದರಿಂದ ಸುರುಳಿಗಿಡಗಳೂ, ರಾಕ್ಷಸಾಕಾರದ ಫರ್ನ್‌ಗಳೂ ಉದ್ದಕ್ಕೂ ಬೆಳೆದಿದ್ದವು. ಫರ್ನ್ ಎಲೆಗಳ ಸುಳಿಗಳಂತೂ ನಾಗರಹಾವು ಹೆಡೆಯಾಡಿಸುತ್ತಿರುವಂತೆ ಕಾಣುತ್ತಿತ್ತು. ಸುತ್ತ ಚಳಿಯಾಗುವಷ್ಟು ತಂಪು. ಕರಿ ನೆರಳಿನ ಕತ್ತಲೆ. ನಡುರಾತ್ರಿಯಂತೆ ಭಾಸವಾಗುತ್ತಿತ್ತು.

ನಾವು ಕೊರಕಲಿನ ತುದಿ ತಲುಪಿದಾಗ ನೋಡಿದರೆ ಹರಿಯವ ಝರಿ ಪತ್ತೆಯೇ ಇಲ್ಲ! ಎಲ ಇದರ! ದಿನಕ್ಕೆ ನಲ್ವತ್ತಮೂರು ಸಾವಿರ ಲೀಟರು ನೀರು ಕೊಡುವ ಹಳ್ಳ ಕಣ್ಣಿಗೆ ಕಾಣದ ಹಾಗೆ ಮಾಯವಾಗುವುದೆಂದರೇನು? ನಾನು ತರಗೆಲೆಗಳನ್ನು ಅಂಗೈಯಿಂದ ಅತ್ತಿತ್ತ ಸರಿಸಿ ಹಳ್ಳದ ಪಾತ್ರ ಪತ್ತೆ ಮಾಡಲು ಯತ್ನಿಸುತ್ತಿರಬೇಕಾದರೆ ಗಾಂಗೇಯನಿಗೆ ಮುಂದೆ ಒಂದು ಪುಟ್ಟ ನೀರಿನ ಹೊಂಡ ಕಾಣಿಸಿತು. ಹಕ್ಕಿಗಳೆಲ್ಲಾ ನೀರು ಕುಡಿಯಲು ತರಗೆಲೆ ಎತ್ತಿ ಹಾಕಿ ಜಾಗ ಮಾಡಿಕೊಂಡಿದ್ದುವು. ಅಲ್ಲಿಂದ ಮುಂದೆ ಒಂದು ಚಿಕ್ಕ ಗುಹೆಯಂಥ ಜಾಗ. ಸುತ್ತ ಫರ್ನ್‌ಗಳು ಬೆಳೆದು ಗುಹೆ ಕಾಣುತ್ತಲೇ ಇರಲಿಲ್ಲ. ಅದರೊಳಗೆ ಒಂದು ಬೆಂಕಿಗಡ್ಡಿ ಗಾತ್ರಕ್ಕೆ ನೀರು ಹರಿದು ಬಂದು ಹಕ್ಕಿಗಳು ನೀರು ಕುಡಿಯುವ ಹಳ್ಳ ತಲುಪುತ್ತಿತ್ತು. ನಾವು ಸದ್ದು ಮಾಡಿದರೆ ಹಳ್ಳ ಇನ್ನೆಲ್ಲಿ ಓಡಿಹೋಗುತ್ತೋ ಎನ್ನುವಂತೆ ಮೆಲ್ಲಗೆ ಫರ್ನ್ ಎಲೆಗಳನ್ನು ಸರಿಸಿ ಒಳಗಿಣುಕಿದೆವು. ಅಲ್ಲಿ ನೇತುಕೊಂಡಿದ್ದ ಚಿಕ್ಕ ಬಾವಲಿಗಳು ಪಟಪಟ ರೆಕ್ಕೆ ಬಡಿಯುತ್ತಾ ಮುಖದೆದುರೇ ಗಾಳಿ ಬೀಸಿ ಹಾರಿಹೋದವು.

ಝರಿ ಹುಟ್ಟುವ ಜಾಗ ಎಲ್ಲೂ ಕಾಣಲಿಲ್ಲ. ಹಳ್ಳ ಗಾಳಿಯಿಂದ, ಶೂನ್ಯದಿಂದ ಸೃಷ್ಟಿಯಾಗುವ ತರ ಕಾಣುತ್ತಿತ್ತು. ನಾವು ಮೈಕೈ ತರಚಿಕೊಂಡು ಇಲ್ಲಿಗೆ ಬಂದು ಮೂರ್ಖರಂತೆ ಹಿಂದಿರುಗುವುದು ಸಾಧ್ಯವಿರಲಿಲ್ಲ. ನಿಂತು ತುಂಬ ಹೊತ್ತು ನೋಡಿದೆವು. ಗುಹೆಯ ಮೇಲೆ ಅಕ್ಕಪಕ್ಕಗಳಲ್ಲಿ ಫರ್ನ್‌ಗಳ, ಮರಗಳ, ಬೇರುಗಳು ಹೊರಚಾಚಿದ್ದವು. ಅನೇಕವಕ್ಕೆ ಪಾಚಿ ನೇತುಬಿದ್ದಿತ್ತು. ಮೆಲ್ಲಗೆ ಅವುಗಳಿಂದ ನೀರಿನ ಒಂದೊಂದೇ ತೊಟ್ಟು ಮೂಡುತ್ತಿತ್ತು. ಹನಿ ನಿಧಾನ ದೊಡ್ಡದಾಗಿ ಟುಮುಕ್ ಟುಮುಕ್ ಸದ್ದಿನೊಂದಿಗೆ ಕೆಳಗೆ ಬೀಳುತ್ತಿತ್ತು. ನಾವು ಉಸಿರಾಟದ ಸದ್ದನ್ನೂ ನಿಧಾನ ಮಾಡಿಕೊಂಡು ಮೌನವಾಗಿ ನಿಂತ ಕೆಲವು ಹೊತ್ತಿನ ತರುವಾಯ ಹನಿಗಳ ಸದ್ದು ಗಡಿಯಾರದ ಸದ್ದಿನಂತೆ ಗಮನಕ್ಕೆ ಬಂತು. ಸುತ್ತಮುತ್ತಲ ಗುಹೆಯ ಗೋಡೆ ಬೆವರಿದಂತೆ ನೀರು ಒಸರಿ ಹೊರಚಾಚಿಕೊಂಡಿದ್ದ ತುದಿಬೇರುಗಳ ಮುಖಾಂತರ ಹನಿಯಾಗಿ ನೆಲಕ್ಕೆ ಬಿದ್ದು ನಿಧಾನವಾಗಿ ಝರಿ ಹರಿಯಲಾರಂಭಿಸುತ್ತಿತ್ತು.

ದಿನಕ್ಕೆ ನಲ್ವತ್ತಮೂರು ಸಾವಿರ ಲೀಟರು ಕೊಡುವ ಹಳ್ಳದ ಮೂಲ ದಿನಕ್ಕೆ ನಲ್ವತ್ತಮೂರು ಲೀಟರು ಸಹ ಕೊಡುವಂತಿರಲಿಲ್ಲ. ಹಾಗಾದರೆ ಮಿಕ್ಕ ನೀರೆಲ್ಲ ಎಲ್ಲಿಂದ ಬರುತ್ತದೆ ಇದಕ್ಕೆ? ಹಳ್ಳದ ಪಾತ್ರದಲ್ಲೇ ನಡೆದು ಬಂದ ನಮಗೆ ಬೇರೆಲ್ಲೂ ಯಾವ ಝರಿಯೂ ಇದಕ್ಕೆ ಬಂದು ಸೇರಿದ್ದು ಕಾಣಲಿಲ್ಲ. ಆದರೂ ಸದ್ಯಕ್ಕೆ ಇದೇ ಹಳ್ಳದ ಅಧಿಕೃತ ಮೂಲವೆಂದು ತೀರ್ಮಾನಿಸಿ ಅಲ್ಲಿಂದ ಹೊರಬಿದ್ದೆವು. ಬರುತ್ತ ಹಳ್ಳದ ದಂಡೆಯನ್ನು ನೋಡುತ್ತಾ ಬಂದಾಗ ಅನೇಕ ಕಡೆಗಳಲ್ಲಿ ಗುಹೆಯಲ್ಲಿ ಕಂಡಂತೆಯೇ ನೀರು ತೊಟ್ಟಿಕ್ಕುತ್ತಿರುವುದನ್ನು ಕಂಡೆವು. ನಾವು ಇಳಿದಿಳಿದು ಮನೆಯ ಕಡೆ ನಡೆದಂತೆ ಮಾರುಮಾರಿಗೂ ಹಳ್ಳದ ನೀರಿನ ಪ್ರಮಾಣ ಹೆಚ್ಚುತ್ತಾ ಹೋಯ್ತು. ಮನೆ ಪಕ್ಕಕ್ಕೆ ಬರುವ ವೇಳೆಗಾಗಲೇ ದಿನಕ್ಕೆ ನಲ್ವತ್ತಮೂರು ಸಾವಿರ ಲೀಟರು ಪ್ರಮಾಣಕ್ಕೆ ಬಂದಿತ್ತು.

ನನ್ನ ಹತ್ತಿರ ಹಿಂದೆ ಇದ್ದ ಹಳೆಯ ತೋಟದಲ್ಲಿ ಸಹ ಒಂದು ಇದೇ ರೀತಿ ಝರಿ ಇತ್ತು. ನಮ್ಮ ಕುಡಿಯುವ ನೀರಿನ ಮೂಲ ಅದೇ. ಆದರೆ ಅದರ ಮೂಲ ಈ ರೀತಿ ಇರಲಿಲ್ಲ. ತೋಟದಲ್ಲಿ ಒಂದು ಕಡೆ ಹುನಾಲು, ತಾರೆ ಮರಗಳು ದಟ್ಟವಾಗಿ ಬೆಳೆದಿದ್ದುವು. ಅದರ ಬುಡದಲ್ಲಿ ಬೆಳೆದಿದ್ದ ಸುರುಳಿ ಗಿಡಗಳ ಪಕ್ಕದಿಂದ ನೀರು ಉದ್ಭವವಾಗುತ್ತಿತ್ತು. ನಾವು ಅಲ್ಲಿ ಇದ್ದಷ್ಟು ದಿನವೂ ಯಾವತ್ತೂ ನಮಗೆ ನೀರಿನ ತೊಂದರೆ ಇರಲಿಲ್ಲ. ಆದರೆ ಒಮ್ಮೆ ಆ ಸ್ಥಳ ನೋಡಿದಾಗ ಈ ನೀರಿನ ಧಾರೆಗೆ ದಾರಿ ಸರಿಮಾಡಿ ಕೊಟ್ಟರೆ ನೀರು ಸರಾಗವಾಗಿ ಹರಿಯುವುದರಿಂದ ನೀರಿನ ಪ್ರಮಾಣ ಹೆಚ್ಚಿಸಬಹುದು ಎನ್ನಿಸಿತು. ಸರಿ ನೀರು ಅಭಿವೃದ್ಧಿಪಡಿಸುವ ಕಾರ್ಯಕ್ರಮ ಯೋಚಿಸಿದೆ.

ಇಬ್ಬರನ್ನು ಕರೆದುಕೊಂಡು ಹಾರೆ, ಗುದ್ದಲಿ ಸಮೇತ ಹೋಗಿ ಅಲ್ಲಿದ್ದ ಸುರುಳಿಗಳನ್ನೂ ಫರ್ನ್‌ಗಳನ್ನೂ ಕಡಿದು ಕೊಚ್ಚಿ, ಚರಂಡಿ ತೋಡಿ ನೀರು ಸರಾಗವಾಗಿ ಹರಿಯಲು ಏರ್ಪಾಡು ಮಾಡತೊಡಗಿದೆವು. ಮಾರ, ತೋಟ ಕಾವಲು ಕಾಯುತ್ತಿದ್ದವ ಇಣುಕಿದ. ನಾವು ಚರಂಡಿ ತೋಡುತ್ತಿರುವುದನ್ನು ನೋಡಿ "ಆ ಫರ್ನ್‌ಗಳನ್ನೂ ಸುರುಳಿಗಿಡಗಳನ್ನೂ ಖಂಡಿತಾ ಕಡಿದು ನೀರು ಬಿಡಿಸಬೇಡಿ. ಅವನ್ನೆಲ್ಲಾ ತೆಗೆದರೆ ಜಲದ ಕಣ್ಣು ಕಟ್ಟುತ್ತೆ. ಜಲದ ಮೂಲ ಮುಟ್ಟಲೇಬಾರದು" ಎಂದ. ನಾವು ಯಾರೂ ಅವನ ಬುದ್ಧಿವಾದ ಕೇಳಲು ತಯಾರಿರಲಿಲ್ಲ. ಜೊತೆಗೆ ಒಳ್ಳೇ ಕೆಲಸದ ಹುರುಪಿನಲ್ಲಿದ್ದೆವು. "ಕೆಲಸ ಮಾಡ್ತಿರಬೇಕಾದರೆ ಇಲ್ಲಿ ಬಂದು ಅಬದ್ಧ ಹೇಳಬೇಡ. ನಿನ್ನ ಕೆಲಸ ನೀನು ನೋಡು" ಎಂದು ಒಬ್ಬ ಜೋರು ಮಾಡಿದ.

ಯಾವಾಗ ಬಿಡಿಸಿ ಚರಂಡಿ ಮಾಡಿದೆವೋ, ಮೊದಲೇನೋ ಅಲ್ಲಲ್ಲಿ ನಿಂತಿದ್ದ ನೀರು ಹರಿಯಿತು. ಅನಂತರ ನಮ್ಮ ಕಣ್ಣೆದುರೇ ನೀರು ಇಂಗತೊಡಗಿತು. ನಾವು ಮತ್ತೂ ಆಳ ಚರಂಡಿ ಹೊಡೆದೆವು. ನೀರು ಮತ್ತೂ ಅಡಿ ಹೋಯ್ತು. ಕೊನೆಗೆ ಕೆಲಸ ಮುಗಿಯುವ ಹೊತ್ತಿಗೆ ಬರುತ್ತಿದ್ದ ನೀರೆಲ್ಲ ನಿಂತೇ ಹೋಯ್ತು. ಆಮೇಲೆ ಕೇವಲ ರಾತ್ರಿಮಾತ್ರ ಜಲ ಬಂದು ನೀರು ಹರಿಯುತ್ತಿತ್ತು. ಬಿಸಿಲೇರುತ್ತಿದ್ದಂತೆ ಇಂಗಿಬಿಡುತ್ತಿತ್ತು. ಮಾರನೆ ಮಳೆಗಾಲದಲ್ಲಿ ಮತ್ತೆ ಆ ಜಾಗದಲ್ಲೆಲ್ಲ ಸುರುಳಿಗಳೂ ಫರ್ನ್‌ಗಳೂ ಬೆಳೆದು ಮೊದಲಿನಂತಾಗುವವರೆಗೂ ನಮಗೆ ನೀರಿನ ತೊಂದರೆ ಇದ್ದೇ ಇತ್ತು.

ಹನಿ ಹನಿ ಬೀಳುವ ಈ ಝರಿಯ ಮೂಲ ಕೊನೆಗೆ ಮನೆ ಬಳಿ ಬರುವ ವೇಳೆಗೆ ದಿನಕ್ಕೆ ನಲ್ವತ್ತಮೂರು ಸಾವಿರ ಲೀಟರ್ ಹೇಗೆ ಆಗುತ್ತದೆ ಎಂದು ಸಮಗ್ರವಾಗಿ ಸಂಶೋಧಿಸಲು ಹೋಗಲೇ ಇಲ್ಲ. ಹಳ್ಳದ ಮೂಲಸ್ಥಾನವನ್ನು ನೋಡಲು ತುದಿಗಾಲಲ್ಲಿ ಇದ್ದ ನಾವು ಆಗ ದಂಡೆಯಲ್ಲಿ ಅಲ್ಲಲ್ಲಿ ಜಿನುಗುವ ಹನಿಗಳನ್ನು ನೋಡಿ ಒಂದು ಸ್ಥೂಲ ಅಂದಾಜು ಮಾಡಿ ಆಶ್ಚರ್ಯಪಡುತ್ತ ಹಿಂದಿರುಗಿದೆವು. ಕುಡಿಯುವ ನೀರಿನ ಒರತೆ ವಿಷಯಕ್ಕೆ ಮಾತ್ರ ನಾನು ಸಂಶೋಧನೆ, ಪ್ರಯೋಗ, ಅಭಿವೃದ್ಧಿ ಇವ್ಯಾವಕ್ಕೂ ಕೈಹಾಕುವುದಿಲ್ಲ. ಕಸಕಡ್ಡಿಗಳ ನಡುವೆ ಕೊರಕಲಿನ ಅಗೋಚರದಿಂದೆಲ್ಲಿಂದಲೋ ಫಳಫಳ ಹೊಳೆಯುತ್ತಾ ಇಳಿದು ಬರುವ ಈ ನೀರು ನಿಂತರೆ ನಮ್ಮ ಕತೆಯೇನು?

## ಲೇಖಕರ ಪರಿಚಯ



ಕನ್ನಡದ ಪ್ರಮುಖ ಬರಹಗಾರರಲ್ಲಿ ಒಬ್ಬರಾದ ಪೂರ್ಣಚಂದ್ರ ತೇಜಸ್ವಿಯವರು ಸೆಪ್ಟೆಂಬರ್ ೮, ೧೯೩೮ರಂದು ಶಿವಮೊಗ್ಗದ ಕುಪ್ಪಳ್ಳಿಯಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದ ಮೇಲೆ ಓರಗೆಯ ಇತರ ಬರಹಗಾರರಂತೆ ಅಧ್ಯಾಪಕ ವೃತ್ತಿಯನ್ನು ಬಯಸದೆ ಮಲೆನಾಡಿನ ಮೂಡಿಗೆರೆಯಲ್ಲಿ ಕೃಷಿಯನ್ನು ಮಾಡುವ ಮಹತ್ವದ ನಿರ್ಧಾರವನ್ನು ಮಾಡಿದರು. ಕೃಷಿಯ ಜತೆಜತೆಗೆ ಅಗಾಧವಾದ ಸಾಹಿತ್ಯದ ಕೃಷಿ ಮಾಡಿದರು. ಸಾಹಿತ್ಯದ ಜೊತೆಗೆ ಇವರಿಗೆ ಛಾಯಾಚಿತ್ರಗ್ರಹಣ, ಸಂಗೀತ, ಚಿತ್ರಕಲೆಯಲ್ಲಿ ಆಸಕ್ತಿಯಿತ್ತು. ಇವರ ಸಾಹಿತ್ಯ ಕೃಷಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿವೆ. ಕರ್ವಾಲೋ, ಜುಗಾರಿ ಕ್ರಾಸ್, ಚಿದಂಬರ ರಹಸ್ಯ, ಸ್ವರೂಪ, ಹುಲಿಯೂರಿನ ಸರಹದ್ದು, ಕಿರಗೂರಿನ ಗಯ್ಯಾಳಿಗಳು, ಯಮಳ ಪ್ರಶ್ನೆ, ಅಣ್ಣನ ನೆನಪು ಮೊದಲಾದುವು ಇವರ ಪ್ರಮುಖ ಕೃತಿಗಳಾಗಿವೆ. ೨೦೦೭ ಏಪ್ರಿಲ್ ೫ ರಂದು ತೇಜಸ್ವಿಯವರು ನಿಧನರಾದರು.

'ಒಂದು ಝರಿಯ ಜಾಡಿನಲ್ಲಿ' ಎನ್ನುವ ಪಾಠವನ್ನು 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು' ಎನ್ನುವ ಕೃತಿಯಿಂದ ಆರಿಸಲಾಗಿದೆ.

## ವಿಶದೀಕರಣ

**ಲಂಟಾನ:** ಇದು ಹೂ ಬಿಡುವ ಕಳೆಗಿಡ. ಇದರ ಮೂಲ ಮೆಕ್ಸಿಕೋ ಆಗಿದ್ದು ೧೫೨೦ರ ಸುಮಾರಿಗೆ ಆಲಂಕಾರಿಕ ಹೂವಿನ ಗಿಡದ ರೂಪದಲ್ಲಿ ಭಾರತಕ್ಕೆ ಕಾಲಿಟ್ಟಿತು. ದಕ್ಷಿಣ ಭಾರತದಲ್ಲಿ ಅತಿ ಹೆಚ್ಚಾಗಿ ಕಾಣಿಸಿಕೊಳ್ಳುವ ಇದು ಕೃಷಿಭೂಮಿಯನ್ನು ಕೂಡಾ ಆವರಿಸಿಕೊಂಡಿದೆ. ಗ್ರಾಮೀಣ ಭಾಗದಲ್ಲಿ ಇದನ್ನು ಜಿಡ್ಡಿಗಿಡ, ರೋಜವಾಳ ಎಂದು ಕರೆಯುತ್ತಾರೆ.

**ಗುರುಗಿ:** ಇದೊಂದು ಮರ. ಇದಕ್ಕೆ ಅರದಾಳ, ಕಣ್ಕುಟಿಗ, ದೇವನಹುಳಿ ಎಂಬ ಹೆಸರುಗಳೂ ಇವೆ. ಇದು ಪಶ್ಚಿಮ ಘಟ್ಟಪ್ರದೇಶದಲ್ಲಿ ಬೆಳೆಯುತ್ತದೆ. ಇದರ ಅಂಟು ಔಷಧಿಗೂ ಬಣ್ಣಕ್ಕೂ ಉಪಯುಕ್ತವಾಗಿದೆ; ಕ್ರಿಮಿನಾಶಕವೂ ಹೌದು. ಇದರ ವಿಶೇಷ ವ್ಯವಸಾಯ ಥೈಲೆಂಡ್ ಪ್ರದೇಶಗಳಲ್ಲಿದೆ. ಮಳೆಗಾಲದಲ್ಲಿ ಕಾಂಡವನ್ನು ಗೀರಿ ಅಂಟನ್ನು ಶೇಖರಿಸುತ್ತಾರೆ. ಒಣಗಿದ ಅಂಟನ್ನು ನೀರಿಗೆ ಹಾಕಿದರೆ ಹಳದಿ ಬಣ್ಣದ ಜಿಡ್ಡುದ್ರವ ಬರುತ್ತದೆ.

**ಉಡ:** ಇದು ಹಲ್ಲಿಯ ಜಾತಿಗೆ ಸೇರಿದ ಒಂದು ಬಗೆಯ ಕಾಡುಪ್ರಾಣಿ. ಸುಮಾರು ೧.೭೫ ಮೀ. ಉದ್ದ ಬೆಳೆಯುತ್ತದೆ. ಹಸಿರು ಅಥವಾ ಕಂದು ಬಣ್ಣದಿಂದ ಕೂಡಿದ್ದು ಅಲ್ಲಲ್ಲಿ ಕಪ್ಪು ಚುಕ್ಕೆಗಳಿರುತ್ತವೆ.

**ಫರ್ನ್:** ಫರ್ನ್ ಅಥವಾ ಜರೀಗಿಡಗಳು ಬೀಜಕಣಗಳ ಮೂಲಕ ಸಂತಾನೋತ್ಪತ್ತಿ ಮಾಡುವ ಅಥವಾ ಹೂವುಗಳನ್ನು ಹೊಂದಿರದ ನಾಳೀಯ ಸಸ್ಯ ಗುಂಪಿಗೆ ಸೇರಿವೆ. ಇವು ಪಾಚಿಗಳಿಗಿಂತ ಭಿನ್ನವಾಗಿದ್ದು ನೀರು ಮತ್ತು ಪೋಷಕಾಂಶಗಳನ್ನು ಪಡೆಯಲು ಬೇಕಾದ ವಿಶಿಷ್ಟವಾದ ಅಂಗಾಂಶಗಳನ್ನು ಹೊಂದಿರುತ್ತವೆ. ಇತರ ನಾಳೀಯ ಸಸ್ಯಗಳಂತೆ ಜರೀಗಿಡಗಳು ಸಂಕೀರ್ಣವಾದ ಎಲೆಗಳನ್ನು ಹೊಂದಿರುತ್ತವೆ.

**ಹುನಾಲು ಮರ:** ಒಂದು ವಿಧದ ಮರ. ಕಂದರಗಳಲ್ಲಿ, ಇಳುಕಲಿನಲ್ಲಿ, ತೇವಮಯ ಆದರೆ ಜೌಗಿಲ್ಲದ ಪ್ರದೇಶಗಳಲ್ಲಿ ಸು. ೩೦ಮೀ ಎತ್ತರದವರೆಗೂ ಬೆಳೆಯುವುದುಂಟು.

**ತಾರೆ ಮರ:** ಶಾಂತಿಮರ (ತಾರೆ, ಗೋಟಿಂಗ). ದೊಡ್ಡ ಗಾತ್ರದಮರ. ಶುಷ್ಕ ಹಾಗೂ ತೇವಪರ್ಣಪಾತಿ ಕಾಡುಗಳಲ್ಲಿ ಕಂಡು ಬರುವುದು.

**ಸಿಗಡಿ:** ಒಂದು ಜಾತಿಯ ಮೀನು

**ಹೂಜಿ:** ಮಣ್ಣಿನ ಮರಿಗೆ, ನೀರು ತುಂಬಿಸಲು ಬಳಸುವ ಮಣ್ಣಿನ ಪಾತ್ರೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ತಮ್ಮ ಮನೆಯ ಪಕ್ಕ ಹರಿಯುವ ಝರಿಯ ಬಗ್ಗೆ ಲೇಖಕರು ಹೇಳಿದ ವಿಶೇಷತೆಗಳೇನು?
2. ಹಳ್ಳವನ್ನು ಶುಚಿ ಮಾಡಬೇಕೆಂದಿದ್ದ ಲೇಖಕರಿಗೆ ಸ್ನೇಹಿತ ಮಲ್ಲಿಕ್ ರಿಂದ ಬಂದ ಪ್ರತಿಕ್ರಿಯೆ ಏನಾಗಿತ್ತು?
3. ಝರಿಯ ಮೂಲವನ್ನು ಹುಡುಕಿ ಹೊರಟ ಲೇಖಕರಿಗೆ ಕಂಡುಬಂದ ಆಶ್ಚರ್ಯಕರ ಸಂಗತಿ ಯಾವುದು?
4. ತೋಟದ ಝರಿಯ ಮೂಲವನ್ನು ಹದ ಮಾಡಿ ನೀರು ಸರಾಗವಾಗಿ ಹರಿಯುವಂತೆ ಮಾಡಲು ಹೊರಟ ಲೇಖಕರು ಮತ್ತಿತರರಿಗೆ ತೋಟದ ಕಾವಲುಗಾರನು ನೀಡಿದ ಎಚ್ಚರಿಕೆ ಯಾವುದು? ಅದಕ್ಕೆ ಲೇಖಕರ ಪ್ರತಿಕ್ರಿಯೆ ಏನಾಗಿತ್ತು?
5. ಜಲ ಮೂಲಗಳ ಸಂಶೋಧನೆಯ ವಿಷಯಕ್ಕೆ ಇನ್ನು ಎಂದಿಗೂ ಕೈ ಹಾಕುವುದಿಲ್ಲ ಎಂದು ಲೇಖಕರು ತೀರ್ಮಾನಿಸಲು ಕಾರಣವೇನು?

## ಔಚಿತ್ಯ ಬರೆಯಿರಿ

'ಒಂದು ಝರಿಯ ಜಾಡಿನಲ್ಲಿ' ಪಾಠಕ್ಕೆ ಈ ಶೀರ್ಷಿಕೆ ಹೇಗೆ ಒಪ್ಪುತ್ತದೆ ಎಂಬುದನ್ನು ಸ್ಪಷ್ಟಪಡಿಸಿರಿ.

## ಕಿರುಟಿಪ್ಪಣಿ ಬರೆಯಿರಿ

'ಪ್ರಕೃತಿದತ್ತವಾದ ನೀರಿನ ಮೂಲಗಳ ಸಂರಕ್ಷಣೆ ಹೇಗೆ ಸಾಧ್ಯ' ಎನ್ನುವ ವಿಚಾರದ ಕುರಿತು 'ಒಂದು ಝರಿಯ ಜಾಡಿನಲ್ಲಿ' ಪಾಠದ ಹಿನ್ನೆಲೆಯಲ್ಲಿ ಕಿರುಟಿಪ್ಪಣಿ ಬರೆಯಿರಿ.

## ಕರಪತ್ರ ಬರೆಯಿರಿ

ಕೊಳವೆ ಬಾವಿಗಳ ಅತಿಯಾದ ನಿರ್ಮಾಣದಿಂದ ಭೂಮಿಯ ಅಂತರ್ಜಲ ಮಟ್ಟ ಕುಸಿದು ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತಿದೆ. ಕೆರೆ, ಬಾವಿ, ಕಟ್ಟ, ಮದಕವೇ ಮೊದಲಾದ ಪರಂಪರಾಗತ ಜಲಮೂಲಗಳನ್ನು ಸಂರಕ್ಷಿಸುವಂತೆ ಜನರಲ್ಲಿ ಜಾಗೃತಿ ಮೂಡಿಸಲು ಕರಪತ್ರವೊಂದನ್ನು ತಯಾರಿಸಿರಿ.

## ಪ್ರಬಂಧ ಬರೆಯಿರಿ

‘ಒಂದು ಝರಿಯ ಜಾಡಿನಲ್ಲಿ’ ಎನ್ನುವ ಅನುಭವ ಕಥನ ಮತ್ತು ಕೆಳಗೆ ನೀಡಲಾದ ‘ಸಂಕ್ರಮಣ’ ಕವನದ ಆಧಾರದಲ್ಲಿ ‘ಹಳ್ಳಿಯ ಪ್ರಶಾಂತತೆ ಮತ್ತು ನಗರ ಜೀವನದ ಜಂಜಾಟ’ ಎನ್ನುವ ವಿಷಯದ ಕುರಿತು ಪ್ರಬಂಧ ಬರೆಯಿರಿ.

# ಸಂಕ್ರಮಣ

ಹಸಿರು ಮಾಯವಾದ ನೆಲದಲ್ಲಿ
ಉಸಿರು ಬಿಗಿಹಿಡಿದು ಕುಳಿತಿದ್ದೇನೆ
ಉರಿ ಬಿಸಿಲು – ನೆರಳಿಲ್ಲ ಮರವಿಲ್ಲ
ಕಾಂಕ್ರೀಟು ಕಾಡು

ಗಗನ ಚುಂಬಿಸುವ ಮಹಲುಗಳು
ಕೆಳಗೆ ವಿಲವಿಲನೆ ಒದ್ದಾಡುವ ಜೀವಗಳು
ಶ್ರಮದ ಉಸಿರು ಬಸಿದ ಬೆವರು
ಅರ್ಥವಾಗದ ಭಾವಗಳು

ಇದು ಕಾಂಕ್ರೀಟಿನ ದಟ್ಟಾರಣ್ಯ
ನಗರೀಕರಣದ ಭರಾಟೆಯಲ್ಲಿ ಬದಲಾಗಿದೆ
ಸಂಸ್ಕೃತಿ ಪ್ರಕೃತಿ ಪ್ರೀತಿ

ಕಾರ್ಖಾನೆಯ ಸದ್ದಿನಲಿ ಎದ್ದ ಧೂಳು
ಬಿರುಗಾಳಿಯಾಗಿ ಬೀಸುತ್ತಿದೆ
ರಸ್ತೆಬದಿ ಮಾಲಿನ್ಯದ ಕೊಂಪೆ

ಗಬ್ಬುವಾಸನೆ ಬಡಿಯುತ್ತಿದೆ
ಅನ್ನದ ಅಗುಳು ಹೆಕ್ಕುವ ಅಲೆಮಾರಿಗಳು
ನಗುಮರೆತ ಮಕ್ಕಳು
ಬಿತ್ತಿದ ನೆಲ... ಬತ್ತಿದ ಹೊಳೆ
ಬೆತ್ತಲೆಯಾದ ಅಹವಾಲುಗಳು
ಕುಳಿತಿದ್ದೇನೆ ಕಾಂಕ್ರೀಟು ಕಾಡಿನ ಮಧ್ಯೆ
ಬಯಲು ಗದ್ದೆ ನದಿ ನದ
ಮಳೆ ಬೆಳೆ ನೆನಪನ್ನು ಹೊದ್ದು
ನನ್ನನ್ನು ನಾನೇ ಪ್ರಶ್ನಿಸುತ್ತೇನೆ
ಉತ್ತರಗಳ ಮೂಟೆ ಹೊತ್ತು

ಇದು ಸಂಕ್ರಮಣ ಕಾಲ
ಭೂತ-ಭವಿಷ್ಯದ ನಡುವೆ
ವರ್ತಮಾನದ ಮಾಯಾಜಾಲ!

**ರಾಧಾಕೃಷ್ಣ ಕೆ. ಉಳಿಯತ್ತಡ್ಕ**

## ಅನುಕರಣ ವಾಚಕಗಳನ್ನು ಬಳಸಿ ವಾಕ್ಯ ರಚಿಸಿರಿ

ನಮಗೆ ಕೇಳಿಸಿದ ಧ್ವನಿಗಳನ್ನು ಪುನಃ ಅನುಕರಿಸಿ ಹೇಳುವ ಪದಗಳನ್ನು ಅನುಕರಣ ವಾಚಕಗಳು ಎಂದು ಕರೆಯುತ್ತಾರೆ. ಉದಾ: ಧಗಧಗ, ಥಣಥಣ ಇತ್ಯಾದಿ. ಇಂತಹ ಪದಗಳನ್ನು ಪಾಠದಿಂದ ಹುಡುಕಿ ಅವುಗಳನ್ನು ವಾಕ್ಯಗಳಲ್ಲಿ ಪ್ರಯೋಗಿಸಿರಿ.

## ಸಂಧಿಯನ್ನು ಗುರುತಿಸಿರಿ

ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.

- ಬಿಸಿಲೇರು
- ಕಾಲಾವಧಿ
- ಹಾಸಿನೊಳಗೆ
- ರಾಕ್ಷಸಾಕಾರ
- ಬೆಂಕಿಗಡ್ಡಿ
- ಮುಖದೆದುರು
- ಸೃಷ್ಟಿಯಾಗು
- ಇಳಿದಿಳಿದು
- ಮೂಲವೆಂದು

## ಸಮಾಸವನ್ನು ತಿಳಿಯಿರಿ

ಕೆಳಗೆ ಕೊಟ್ಟಿರುವ ಪದಗಳ ವಿಗ್ರಹ ವಾಕ್ಯವನ್ನು ಗಮನಿಸಿರಿ.

| | | |
|---|---|---|
| ಹಿಂಗಾಲು | - | ಕಾಲಿನ ಹಿಂದು |
| ಮುಂಗೈ | - | ಕೈಯ ಮುಂದು |
| ತುದಿಮೂಗು | - | ಮೂಗಿನ ತುದಿ |
| ಮಧ್ಯರಾತ್ರಿ | - | ರಾತ್ರಿಯ ಮಧ್ಯ |

ಮೇಲಿನ ಪದಗಳ ವಿಗ್ರಹ ವಾಕ್ಯದಲ್ಲಿ ಪೂರ್ವಪದವು ನಾಮವಾಚಕವಾಗಿದ್ದು ಉತ್ತರ ಪದವು ಅದರ ಒಂದು ಭಾಗ ಅಥವಾ ಅಂಶವನ್ನು ಹೇಳುತ್ತದೆ. ಇದನ್ನು ಅಂಶೀ ಸಮಾಸ ಎಂದು ಕರೆಯಲಾಗುತ್ತದೆ. ಅಂಶೀ ಸಮಾಸಕ್ಕೆ ಉದಾಹರಣೆಯಾಗುವ ಇನ್ನೂ ಕೆಲವು ಪದಗಳನ್ನು ಪಾಠದಿಂದ ಹುಡುಕಿ ಬರೆಯಿರಿ.

* * *

# ಮುದುಕ ಸೆಟ್ಟಿಯೂ ಮೂವರು ಮಕ್ಕಳೂ

**ಐ. ಕೆ. ಬೊಳುವಾರು**

ಪಾತ್ರವರ್ಗ:

| | |
|---|---|
| ಮುದುಕ ಸೆಟ್ಟಿ | ಹೆಡ್ಡ |
| ದಡ್ಡ | ಒಡ್ಡ |
| ಒಬ್ಬ | ಇನ್ನೊಬ್ಬ |
| ಮತ್ತೊಬ್ಬ | ಮರ - ೧ |
| ಮರ - ೨ | ಮರ - ೩ |
| ಮರ - ೪ | ನದಿ |
| ಸೈನಿಕ - ೧ | ಸೈನಿಕ - ೨ |
| ಸೈನಿಕ - ೩ | ಅರಸ |
| ಡಂಗುರದವನು | |

(ಪಂಜ ಎಂಬ ಊರಿನಲ್ಲಿ ಒಬ್ಬ ಮುದುಕ ಸೆಟ್ಟಿ ಇದ್ದ. ಅವನಿಗೆ ಮೂವರು ಮೊಮ್ಮಕ್ಕಳಿದ್ದರು. ಹೆಡ್ಡ, ದಡ್ಡ, ಒಡ್ಡ ಎನ್ನುವುದು ಅವರ ಹೆಸರು. ಅದು ಅವರ ಅನ್ವರ್ಥನಾಮವಾಗಿರಲಿಲ್ಲ. ಬರಿಯ ಅಂಕಿತನಾಮವಷ್ಟೇ. ಒಂದು ದಿನ ಮುದುಕ ಸೆಟ್ಟಿ ಮೂವರನ್ನೂ ತನ್ನ ಬಳಿಗೆ ಕರೆಯುತ್ತಾನೆ.)

ಮುದುಕ ಸೆಟ್ಟಿ : (ಮಕ್ಕಳನ್ನು ಕರೆದು) ಏಯ್ ಹೆಡ್ಡಾ, ಓ ದಡ್ಡಾ, ಲೇ ಒಡ್ಡಾ, ಬನ್ರೋ ಇಲ್ಲಿ... (ಮೂವರೂ ಬರುತ್ತಾರೆ) ಬನ್ರೋ... ನೋಡಿ ಮಕ್ಕಳೇ, ನಾನೀಗ ಮುದುಕನಾಗಿದ್ದೇನೆ. ಹಿಂದಿನ ಹಾಗೆ ಕೆಲಸ ಮಾಡಲಿಕ್ಕೆ ಆಗ್ತಾ ಇಲ್ಲ. ಇನ್ನು ನೀವು ನಿಮ್ಮಿಂದಾಗುವ ಕೆಲಸ ಮಾಡಬೇಕು. ಕೆಲಸ ಮಾಡಿ ಹಣ ಸಂಪಾದನೆ ಮಾಡಿ. ದುಡಿಮೆ ಯಾವುದೇ ಆಗಿರಲಿ. ಅದರಲ್ಲಿ ಪ್ರೀತಿಯಿಟ್ಟು ಕೆಲಸ ಮಾಡಿರಿ.

ಮೂವರೂ : ಹಾಗೇ ಆಗಲಿ ಅಜ್ಜಾ...

ಹೆಡ್ಡ : ಅಜ್ಜ ಹೇಳಿದ ಹಾಗೆ ನಾವೇನಾದ್ರೂ ಕೆಲಸ ಹುಡುಕಬೇಕಾಗಿದೆ. ನಾವು ಎಲ್ಲಿಗೆ ಹೋಗೋಣ?

ದಡ್ಡ : ಎಲ್ಲಿಗಾದರೂ ಹೋಗಲೇಬೇಕಲ್ಲ. ಯಾರಿಗೆ ಗೊತ್ತು. ಎಲ್ಲಾದರೂ ಹೋದರಾಯಿತು.

ಒಡ್ಡ : ನಾನು ಅರಸರ ಮನೆಗೆ ಹೋಗುತ್ತೇನೆ.

ಹೆಡ್ಡ : ಏನು? ಅರಸರ ಮನೆಗೆ! ಎಲಾ ಒಡ್ಡ! ಅರಸರು ಅಂದರೆ ಏನೆಂದು ತಿಳಿದಿದೆಯೇ?

ದಡ್ಡ : ಅರಸರು ಎಂದರೆ ಏನೆಂದು ತಿಳಿಯಲಾರದ ಒಡ್ಡ ಅರಮನೆಗೆ ಹೋಗ್ತಾನಂತೆ... (ನಗುತ್ತಾರೆ.)

ಒಡ್ಡ : ಯಾಕೆ ನಗ್ತೀರಿ? ಅರಮನೆ ಬಹಳ ದೊಡ್ಡದು. ಅಲ್ಲಿ ಹೋದರೆ ನಮಗೆ ಖಂಡಿತವಾಗಿಯೂ ಕೆಲಸ ದೊರಕುತ್ತದೆ. ಆ ಮನೆ ನಮ್ಮ ಮನೆಯ ಹಾಗೆ ಬಿದಿರು ಕಂಬದ, ಹುಲ್ಲು ಚಾವಣಿಯ, ಸಗಣಿ ಸಾರಣೆಯ ಗುಡಿಸಲು ಅಲ್ಲ... ಅರಮನೆ ಅಂದರೆ ಬಹಳ ದೊಡ್ಡದಾಗಿರುತ್ತದೆ. ಹತ್ತು ಹದಿನೆಂಟು ಬಾಗಿಲು, ನೂರಾರು ಕಿಟಕಿ, ಹವಳದ ಕಂಬ, ಚಿನ್ನದ ಗೋಡೆ, ಬೆಳ್ಳಿಯ ಮಾಡು, ರತ್ನದ ಕಲಶ ಎಲ್ಲ ಇರುತ್ತದೆ. ನಾನು ಅಲ್ಲಿಗೆ ಹೋಗಿಯೇ ಹೋಗುತ್ತೇನೆ.

ದಡ್ಡ : ನೀನು ಅಲ್ಲಿಗೆ ಹೋಗಿ ಯಾವ ಕೆಲಸ ಮಾಡುತ್ತೀಯ?

ಒಡ್ಡ : ನಮ್ಮ ನಾಡಿನ ಅರಸರ ಅರಮನೆಯ ಮುಂಭಾಗದಲ್ಲಿ ಒಂದು ದೊಡ್ಡ ಆಲದ ಮರ ಇದೆಯಂತೆ. ಅದು ಬೆಳೆದು ಬೆಳೆದು ಬಹಳ ಎತ್ತರಕ್ಕೆ ಏರಿ ಚಾವಡಿಯ ಮೇಲೆ ತುಂಬಾ ಕತ್ತಲಾಗಿದೆಯಂತೆ. ಯಾರು ಅದನ್ನು ಕಡಿದು ಬೀಳಿಸುತ್ತಾರೋ ಅವರಿಗೆ ಮೂರು ಚೀಲ ಬಂಗಾರದ ನಾಣ್ಯಗಳನ್ನು ಕೊಡುತ್ತಾರಂತೆ.

ಹೆಡ್ಡ, ದಡ್ಡ : ಏನು? ಮೂರು ಚೀಲ ಬಂಗಾರದ ನಾಣ್ಯಗಳು!

ಒಡ್ಡ : ಹೌದು, ಬನ್ನಿ, ನಾವು ಮೂವರೂ ಒಟ್ಟಾಗಿಯೇ ಅಲ್ಲಿಗೆ ಹೋಗೋಣ, ಬನ್ನಿ...

(ಮೂವರೂ ಪಯಣ ಹೊರಡುತ್ತಾರೆ. ರಸ್ತೆಯಲ್ಲಿ ಬಗೆಬಗೆಯ ಜನರು, ವಾಹನಗಳು, ಕಟ್ಟಡಗಳು ಸಿಗುತ್ತವೆ. ಒಡ್ಡ ಅವರೆಲ್ಲರನ್ನೂ ಪ್ರಶ್ನಿಸಿ ವಿಚಾರಗಳನ್ನು ತಿಳಿದುಕೊಳ್ಳುತ್ತಾನೆ. ಹೆಡ್ಡ, ದಡ್ಡರು ಬೇಕೋ ಬೇಡವೋ ಅನ್ನುವವರಂತೆ ಹ್ಞೂ ಗುಟ್ಟುತ್ತಿದ್ದಾರೆ. ಊರು ಮುಗಿದು ಕಾಡುದಾರಿ ಬಂದಿದೆ. ಕೊಡಲಿಯಿಂದ ಮರ ಕಡಿಯುವವರ ಸದ್ದು ಕೇಳಿಸುತ್ತದೆ.)

ಒಡ್ಡ : ಅಣ್ಣಂದಿರೇ...ಏನದು ಸದ್ದು? ಯಾಕೆ ಆ ಸದ್ದು ಬರ್ತಾ ಇದೆ? ಎಲ್ಲಿಂದ ಆ ಸದ್ದು ಕೇಳ್ತಿರೋದು? ಈ ಸದ್ದು ಯಾರು ಮಾಡ್ತಿರಬಹುದು?

ಹೆಡ್ಡ : ಅದೆಲ್ಲಾ ನಮಗೆ ಗೊತ್ತಿಲ್ಲ. ಕೊಡಲಿಯ ಶಬ್ದ ಕೇಳ್ತಾ ಇಲ್ಲವೇ..?

ದಡ್ಡ : ನಿನಗೆಷ್ಟು ಕೇಳ್ತಾ ಇದೆಯೋ ಅಷ್ಟೇ ನಮಗೂ ಕೇಳಿಸೋದು...

ಒಡ್ಡ : ಯಾವುದನ್ನೂ ಪ್ರಶ್ನಿಸಿ ಉತ್ತರ ಪಡೆದು ನಿಜ ತಿಳಿಯುವುದು ನನ್ನ ಹವ್ಯಾಸ. ಆ ಸದ್ದು ಏನು? ಅದು ಏಕೆ ಉಂಟಾಗುತ್ತಿದೆ? ಅದು ಹೇಗೆ ಉಂಟಾಗುತ್ತಿದೆ?

| | | |
|---|---|---|
| | | ಅದು ಎಲ್ಲಿ ಉಂಟಾಗುತ್ತಿದೆ? ಇದನ್ನೆಲ್ಲಾ ತಿಳಿಯದೆ ನಾನು ಮುಂದಕ್ಕೆ ಬರುವುದಿಲ್ಲ... |
| ದಡ್ಡ | : | ನೀನು ನಿಧಾನಕ್ಕೆ ನೋಡಿ ಬಾ... ನಾವು ನಮ್ಮಷ್ಟಕ್ಕೆ ಹೋಗುತ್ತೇವೆ. |

(ಒಡ್ಡ ಚಲಿಸಿ ಕಾಡಿನ ಒಳ ಪ್ರವೇಶಿಸುತ್ತಾನೆ. ಹಲವು ಮಂದಿ ಮರಕಟುಕರು ಮರ ಕಡಿಯುತ್ತಿದ್ದಾರೆ.)

| | | |
|---|---|---|
| ಒಡ್ಡ | : | ಅಯ್ಯೋ ಕಡಿಯಬೇಡಿ ಕಡಿಯಬೇಡಿ... ಅರಣ್ಯನಾಶ ಅಂದರೆ ಮನ್ವಂತರದ ಅಂತ್ಯ. ದಯವಿಟ್ಟು ಕಡಿಯಬೇಡಿ... |
| ಒಬ್ಬ | : | ಹೇಯ್ ಯಾವನಯ್ಯ ನೀನು... ಏನು ಹೇಳ್ತಾ ಇದೀಯ... |
| ಒಡ್ಡ | : | ನಾನು ಒಡ್ಡ. ಇದೇ ಕಾಡಿನ ಸಮೀಪದಲ್ಲಿರುವ ಪಂಜದವನು. ದಯವಿಟ್ಟು ಈ ಮರಗಳನ್ನು ಕಡಿಯಬೇಡಿ. |
| ಮರ- ೧ | : | (ಪ್ರೇಕ್ಷಕರೊಂದಿಗೆ) ನಿಮಗೆ ಗೊತ್ತಿದೆಯೇ..? ತಮ್ಮ ಸ್ವಾರ್ಥಗಳಿಗಾಗಿ ಬೃಹತ್ ಉದ್ದಿಮೆದಾರರು ಬಡ ಆದಿವಾಸಿಗಳಿಂದ ಕೂಲಿಯಾಳುಗಳಿಂದ ಅರಣ್ಯಗಳನ್ನು ನಾಶಪಡಿಸುತ್ತಿದ್ದಾರೆ. ಈಗ ಈ ಆದಿವಾಸಿಗಳಿಗೆ ಬದುಕಲು ಉರುವಲು ಯಾವುದಕ್ಕೂ ಗತ್ಯಂತರವಿಲ್ಲದೆ ಬದುಕು ಸಾಗಿಸುತ್ತಿದ್ದಾರೆ. |
| ಒಡ್ಡ | : | ದಯವಿಟ್ಟು ಕಾಡು ಕಡಿಯಬೇಡಿ. ಯಾಕೆ ನೀವು ಹೀಗೆ ಕಾಡುಗಳನ್ನು ಕಡಿಯುತ್ತಿದ್ದೀರಿ? |
| ಇನ್ನೊಬ್ಬ | : | ಹೋಗಯ್ಯ ಆಚೆ...ಈ ತನಕ ಯಾರೂ ನಮ್ಮನ್ನು ಕೇಳಿಲ್ಲ. ಇವನೊಬ್ಬ ಬಂದ ಮಾತನಾಡೋದಕ್ಕೆ. |
| ಒಡ್ಡ | : | ಸ್ವಾಮೀ, ಹಾಗೆ ಹೇಳಬೇಡಿ...ಕಾಡು ನಾಶವಾದರೆ ಭೂಮಿ ಬಂಜರು ಬೀಳುತ್ತದೆ. ಮಳೆ ಇಲ್ಲದೆ ಬರಗಾಲ ಬರುತ್ತದೆ. ಎಲ್ಲರೂ ನಾಶವಾಗುತ್ತಾರೆ. |
| ಮರ - ೨ | : | ಕಾಡುಗಳನ್ನು ವಿಪರೀತ ಧ್ವಂಸ ಮಾಡಿರುವುದರಿಂದಲೇ ವಾತಾವರಣದಲ್ಲಿ ಸಮತೋಲನವಿಲ್ಲದೆ ವೈಪರೀತ್ಯ ಉಂಟಾಗಿದೆ. ಇದೇ ಕಾರಣದಿಂದಾಗಿ ಅತಿವೃಷ್ಟಿಯೂ ಅನಾವೃಷ್ಟಿಯೂ ಉಂಟಾಗಿದೆ. |
| ಮತ್ತೊಬ್ಬ | : | ನಮಗೆಲ್ಲ ಗೊತ್ತಿದೆ. ನೀನೇನೂ ಹೇಳ್ಬೇಕಾಗಿಲ್ಲ. |
| ಒಡ್ಡ | : | ಹೀಗೆಲ್ಲ ಮಾತನಾಡಬೇಡಿ. ಕಾಡು ಕಡಿದು ಬೆಟ್ಟಗಳು ಬೋಳಾಗಿವೆ. ಸಸ್ಯಶ್ಯಾಮಲೆ ಎಂದು ಕರೆಸಿಕೊಳ್ಳುವ ಈ ಭೂಮಿ ಇಂದು ಮರಳುಗಾಡಾಗುತ್ತಿದೆ. |
| ಮರ-೩ | : | ಮರಗಳು ಜಲಕ್ಷಾಮವನ್ನು ತಡೆಗಟ್ಟುತ್ತವೆ. ಹರಿಯುವ ನೀರನ್ನು ತಡೆದು ನೆಲದಲ್ಲಿಯೇ ಇಂಗುವಂತೆ ಮಾಡುತ್ತವೆ. ಹಳ್ಳಕೊಳ್ಳಗಳಲ್ಲಿ ನೀರು ತುಂಬಿ |

ಹರಿಯುವಂತೆ ಮಾಡುತ್ತವೆ. ಅರಣ್ಯ ನಾಶದಿಂದಾಗಿ ಇವತ್ತು ಭೂಮಿ ಮೇಲೆ ಇರಬೇಕಾದ ಕೊಳೆತ ಸಸ್ಯಾಂಶ  ಮಾಯವಾಗುತ್ತಿದೆ. ಹೀಗಾಗಿ ನೆಲಕ್ಕೆ ಮಳೆ ನೀರು ಹೀರುವ ಕವಚ ಇಲ್ಲದಾಗಿದೆ. ಮಳೆನೀರು ಇಂಗದೆ ಸರಾಗವಾಗಿ ಹರಿಯುವುದರಿಂದಲೇ ನೆರೆ ಮಹಾಪೂರಗಳ ಸಂಖ್ಯೆ ಅಧಿಕವಾಗುತ್ತಿದೆ.



ಮರ-೪ : ಜಗತ್ತಿನಲ್ಲಿಯೇ ಅತ್ಯಧಿಕ ಮಳೆ ಬೀಳುವ ಪ್ರದೇಶವೆಂದು ಹೆಸರಾಗಿರುವ ಚಿರಾಪುಂಜಿ  ಇವತ್ತು ಸಸ್ಯಶೂನ್ಯವಾಗಿದೆ. ಕರ್ನಾಟಕದಲ್ಲಿಯೇ ಅತ್ಯಂತ ಮಳೆ ಬೀಳುವ ಸ್ಥಳವೆಂದು ಹೆಸರಾದ ಆಗುಂಬೆಯಲ್ಲಿ ಕುಡಿಯುವ ನೀರಿಗೆ ಜನ ಕಷ್ಟಪಡುತ್ತಿದ್ದಾರೆ.

ಇನ್ನೊಬ್ಬ : ಹೋಗಯ್ಯಾ.... ಎಷ್ಟು ಸಾರಿ ಹೇಳಬೇಕು ನಿನಗೆ... ಹೋಗ್ತಿಯೋ ಇಲ್ಲವೋ.

(ಎಲ್ಲ ಮರಕಟುಕರೂ ಒಡ್ಡನನ್ನು ಓಡಿಸಲು ಪ್ರಯತ್ನಿಸುತ್ತಾರೆ. ಒಡ್ಡ, ಮರಗಳನ್ನು ಅಪ್ಪಿ ಹಿಡಿಯುತ್ತಾನೆ. ವನಪಾಲಕರ ಕೂಗು ಕೇಳಿಸುತ್ತದೆ. ಮರಕಟುಕರೆಲ್ಲರೂ ಒಡ್ಡನನ್ನು ಬಿಟ್ಟು ಓಡಿ ಹೋಗುತ್ತಾರೆ.)



ಆಲದ ಮರ : ಅಯ್ಯಾ ಗೆಳೆಯ, ನೀನು ನಮ್ಮ ಮೇಲೆ ತೋರಿಸಿರುವ ಪ್ರೀತಿ, ಕಳಕಳಿಗಳಿಗೆ ನಾವು ಕೃತಜ್ಞರಾಗಿದ್ದೇವೆ. ಮರಗಿಡಗಳು, ಅರಣ್ಯಗಳು ಇರುವುದು ಜನರ ಉಪಯೋಗಕ್ಕಾಗಿಯೇ ಹೊರತು ವಿನಾಶಕ್ಕಲ್ಲ... ಹೋಗಿ ಬಾ ಗೆಳೆಯ ಶುಭವಾಗಲಿ. (ಒಡ್ಡ ಓಡುತ್ತಾ ತನ್ನ ಅಣ್ಣಂದಿರನ್ನು ಸಮೀಪಿಸುತ್ತಾನೆ. ರಂಗದಲ್ಲಿ



ಹೊಳೆಯೊಂದು ನಿರ್ಮಾಣವಾಗಿದೆ. ಹೆಡ್ಡ, ದಡ್ಡ ನೀರು ತೆಗೆದು ಕುಡಿಯುತ್ತಿದ್ದಾರೆ.)

| | | |
|---|---|---|
| ಹೆಡ್ಡ | : | ಹ್ಹಾ... ಬಂದೆಯಾ... ಬಾ... ನೀರು ಬೇಕಿದ್ರೆ ಕುಡಿ... |
| ಒಡ್ಡ | : | ಇದೇನು? ಇದು ಯಾಕೆ ಹೀಗೆ ಹರಿಯುತ್ತಿದೆ? ಇದು ಎಲ್ಲಿಂದ ಹೊರಡುತ್ತಿದೆ? |

ದಡ್ಡ : ಅದೆಲ್ಲಾ ನಮಗೆ ಗೊತ್ತಿಲ್ಲ... ಹರಿಯುವ ಹೊಳೆಯ ಬಗ್ಗೆ ಯಾರಾದರೂ ಹೀಗೆ ಪ್ರಶ್ನಿಸುತ್ತಾರೆಯೇ?

ಒಡ್ಡ : ನಾನು ಪ್ರಶ್ನಿಸಿ ಉತ್ತರ ಪಡೆಯುತ್ತೇನೆ. ಪ್ರತ್ಯುತ್ತರ ಸಿಗದೆ ನಾನು ಇಲ್ಲಿಂದ ಹೊರಡುವುದಿಲ್ಲ.

ಹೆಡ್ಡ : ಹೋಗಪ್ಪಾ ಹೋಗು... ಬೇಕಾದದ್ದನ್ನೆಲ್ಲ ನೋಡಿ ಬರುವಿಯಂತೆ... ನದೀಮೂಲ ಋಷಿಮೂಲ ಯಾರೂ ಹುಡುಕಬಾರದಂತೆ... ನಮಗೇನು?
(ನಿರ್ಗಮಿಸುತ್ತಾರೆ.)

ಒಡ್ಡ : ಯಾಕೆ ಹುಡುಕಬಾರದು? ನಾನು ಇದು ಎಲ್ಲಿಂದ ಹೊರಟು ಬರುತ್ತದೆ ಎಂಬುದನ್ನು ತಿಳಿದೇ ಬರುತ್ತೇನೆ.

ಒಡ್ಡ : ಎಲ್ಲಿಂದ ಬರುತೀಯೆ ನೀರನ್ನು ತರುತೀಯೆ
ಒಳ್ಳೇದಾಗಿರುತೀಯೆ ನೀನು
ಎಲ್ಲಿಗೆ ಹೋಗುವೆ ನೀರನ್ನು ಸಾಗುವೆ
ಕಡೆಗೆ ಏನಾಗುವೆ ನೀನು?

ನದಿ : ಬೆಟ್ಟದಾ ಹೊಡೆಯಲ್ಲಿ ಹುಟ್ಟಿದೆ ಹನಿಯಾಗಿ
ತೊಟ್ಟಾದೆ ತಟುಕಾದೆ ನಾನು
ಬೆಟ್ಟಾದೆ ಬೆರಳಾದೆ ತೋಳಾದೆ ತೊಡೆಯಾದೆ
ಪುಟ್ಟ ತೋಡಾದೆನು ನಾನು
ಆಡುತ್ತ ಸುತ್ತಲು ನೋಡುತ್ತ ತೊರೆಯನ್ನು
ಕೂಡುತ್ತ ಓಡುತ್ತ ಮೈಚಾಚಿ ಬಂದೆ
ದೂಡುತ್ತ ಕಲ್ಲನ್ನು ಮಾಡುತ್ತ ಗುಲ್ಲನ್ನು
ಹಾಡುತ್ತ ನೀಡುತ್ತ ಬಂದೆ.
ಆದರೆ ಗೆಳೆಯಾ, ಇವತ್ತು ನನ್ನ ಪರಿಸ್ಥಿತಿಯನ್ನು ಯಾರೂ ಕೇಳುವವರೇ ಇಲ್ಲವಾಗಿದೆ. ಎಲ್ಲರಿಗೂ ಉಪಯೋಗಕ್ಕೆ ಅತ್ಯಗತ್ಯವಾಗಿ ಬೇಕಾದ ನೀರು ಕೇವಲ ಕೆಲವೇ ಸ್ವಾರ್ಥಿಗಳ ಪಾಲಾಗುತ್ತಿದೆ. ಉಳಿದ ಮಂದಿ ನೀರಿಗಾಗಿ ಬಹಳ ಕಷ್ಟ ಪಡುತ್ತಿದ್ದಾರೆ.

ಒಡ್ಡ : ಇದೆಲ್ಲಾ ಹೇಗಾಯಿತು? ಯಾಕಾಯಿತು?

ನದಿ : ಏನು ಹೇಳಲಿ ಗೆಳೆಯಾ... ನಗರಗಳಲ್ಲಿ ಇರುವ ಕಾರ್ಖಾನೆಗಳ ಕಲುಷಿತ ನೀರನ್ನು, ರಾಸಾಯನಿಕ, ವಿಷಮಿಶ್ರಿತ ತ್ಯಾಜ್ಯಗಳನ್ನು ನನ್ನೊಳಗೆ ಬೆರೆಸುತ್ತಿರುವುದರಿಂದ ನನ್ನನ್ನೇ ನಂಬಿರುವ ಎಷ್ಟೋ ಮಂದಿ ಗ್ರಾಮೀಣರು ನಿಧಾನ ವಿಷಕ್ಕೆ ಬಲಿಯಾಗುತ್ತಿದ್ದಾರೆ. ರೋಗ ರುಜಿನಗಳಿಗೆ ತುತ್ತಾಗುತ್ತಿದ್ದಾರೆ.

ಒಡ್ಡ : ಹಾಗಾದರೆ ನಾನೇನು ಮಾಡಬೇಕಾಗಿದೆ? ಹೇಳು.

ನದಿ : ನೀರಿನ ಹುಟ್ಟು, ಬೆಳವಣಿಗೆ, ಉಪಯೋಗಗಳ ಬಗ್ಗೆ ಎಲ್ಲ ಜನರಿಗೂ ನೀನು ತಿಳಿಸಿ ಹೇಳಬೇಕು.

ಒಡ್ಡ : ಅಂದರೆ...

ನದಿ : ಮಳೆಯ ನೀರನ್ನು ಹಿಡಿದು ನಿಲ್ಲಿಸುವುದು... ಆ ನೀರನ್ನು ಇಂಗುವಂತೆ ಮಾಡುವುದು ಎಲ್ಲರ ಕಾಯಕವಾಗಬೇಕು. ನೀನು ಮತ್ತು ನಿನ್ನ ಸ್ನೇಹಿತರು ಓಡುವ ನೀರನ್ನು ನಡೆಯುವಂತೆ ಮಾಡಬೇಕು... ನಡೆಯುವ ನೀರನ್ನು ತೆವಳುವಂತೆ ಮಾಡಬೇಕು... ತೆವಳುವ ನೀರನ್ನು ನಿಲ್ಲುವಂತೆ ಮಾಡಬೇಕು. ನಿಂತ ನೀರನ್ನು ಇಂಗುವಂತೆ ಮಾಡಬೇಕು... ಹಾಗೆ ಮಾಡಿದಲ್ಲಿ ನೀರು ಇಲ್ಲ ಎನ್ನುವುದೇ ಇಲ್ಲವಾಗುತ್ತದೆ. ಹೋಗಿ ಬಾ ಗೆಳೆಯ... ಹೋಗಿ ಬಾ...ಶುಭವಾಗಲಿ

(ಒಡ್ಡ ಹೊರಡುತ್ತಾನೆ. ನದಿ ನಿರ್ಗಮಿಸುತ್ತದೆ. ಹೆಡ್ಡ, ದಡ್ಡ, ನಿಧಾನಕ್ಕೆ ಚಲಿಸುತ್ತಿದ್ದಾರೆ, ಒಡ್ಡ ಓಡೋಡಿ ಬರುತ್ತಾನೆ.)

ಒಡ್ಡ : ಅಣ್ಣಂದಿರೇ, ಸ್ವಲ್ಪ ನಿಲ್ಲಿ, ನಾನೂ ಬರ್ತಾ ಇದ್ದೇನೆ.

(ಮೂವರೂ ಹೋಗುತ್ತಾರೆ. ರಂಗದಲ್ಲಿ ಮೂರು ಹೆಬ್ಬಾಗಿಲುಗಳು ನಿರ್ಮಾಣವಾಗುತ್ತವೆ. ಹೆಬ್ಬಾಗಿಲುಗಳಲ್ಲಿ ಅರಸರ ಆಜ್ಞೆಯ ಫಲಕಗಳನ್ನು ತೂಗುಹಾಕಲಾಗಿದೆ. ಸೈನಿಕರು ಫಲಕಗಳಲ್ಲಿ ಬರೆದುದನ್ನು ಓದಿ ಹೇಳುತ್ತಿದ್ದಾರೆ. ಹೆಡ್ಡ, ದಡ್ಡ, ಒಡ್ಡ ಅದನ್ನು ಗಮನಿಸುತ್ತಿದ್ದಾರೆ.)

ಸೈನಿಕ- ೧ : ಅರಸರ ಅಪ್ಪಣೆಯ ಪ್ರಕಾರ ಅರಮನೆಯ ಹೆಬ್ಬಾಗಿಲಿನ ಮುಂಭಾಗದಲ್ಲಿರುವ ಆಲದ ಮರವನ್ನು ಯಾರು ಕಡಿದು ಹಾಕುತ್ತಾರೋ ಅವರು ಅರ್ಧ ರಾಜ್ಯದ ಒಡೆಯರಾಗುತ್ತಾರೆ.

ಸೈನಿಕ- ೨ : ಅರಸರ ಅಪ್ಪಣೆ ಈ ರೀತಿಯಾಗಿದೆ... ಅರಮನೆಯ ಅಂಗಳದಲ್ಲಿ ಯಾರು ಬಾವಿಯೊಂದನ್ನು ತೋಡುತ್ತಾರೋ ಅವರು ಅರ್ಧ ರಾಜ್ಯದ ಒಡೆಯರಾಗುತ್ತಾರೆ.

ಹೆಡ್ಡ : ವಹವ್ವಾ...

ದಡ್ಡ : ಶಹಭಾಸ್...

ಒಡ್ಡ : (ಮೌನ)

ಹೆಡ್ಡ : ಈ ಕೆಲಸ ಒಡ್ಡನಿಂದ ಆದೀತೇ...?

ದಡ್ಡ : ಆಗಲಿಕ್ಕಿಲ್ಲ... ಏನು ಒಡ್ಡ, ಈ ಬಗ್ಗೆ ನಿನ್ನದು ಯಾವುದೇ ಪ್ರಶ್ನೆಗಳಿಲ್ಲವಲ್ಲ... ? ಏಕೆ?

ಒಡ್ಡ : (ಫಲಕ ತೋರಿಸಿ) ಉತ್ತರ ಸ್ಪಷ್ಟವಾಗಿ ನಮೂದಿಸಿರುವಾಗ ಪ್ರಶ್ನೆಯ ಅಗತ್ಯಗಳಿಲ್ಲ... ಪ್ರಶ್ನೆಗಳಿಗಾಗಿಯೇ ಪ್ರಶ್ನೆಗಳನ್ನು ಕೇಳಬಾರದು.

ಹೆಡ್ಡ : ಆಗಲಿ... ಅರ್ಧ ರಾಜ್ಯ ನನಗೆ.

ದಡ್ಡ : ಉಳಿದರ್ಧ ರಾಜ್ಯ ನನ್ನ ಪಾಲಿಗೆ.

(ಚಲಿಸುತ್ತಾರೆ. ಹೆಬ್ಬಾಗಿಲು ಚಲಿಸಿ ಇನ್ನೊಂದು ಫಲಕ ಕಾಣಿಸುತ್ತದೆ.)

ಸೈನಿಕ- ೩ : (ಓದುತ್ತಾನೆ) ಅರಸರ ಅಪ್ಪಣೆ ಈ ರೀತಿಯಾಗಿದೆ... ಈ ಆಲದ ಮರ ಕಡಿಯಲು ಬಂದವರು ಕಡಿಯಲಾರದೆ ಹೋದರೆ ಅವರ ಕಿವಿ ಕತ್ತರಿಸಲಾಗುವುದು. ಬಾವಿ ತೋಡಲು ಬಂದವರು ತೋಡಲಾರದೆ ಹೋದರೆ ಅವರ ಮೂಗು ಕತ್ತರಿಸಲಾಗುವುದು...

(ಹೆಡ್ಡ ಸೈನಿಕರಿಂದ ಕೊಡಲಿ ಪಡೆದುಕೊಂಡು ಮರ ಕಡಿಯಲು ಆರಂಭಿಸುತ್ತಾನೆ. ಒಂದು ಕೊಂಬೆ ತುಂಡಾದರೆ ಇನ್ನೆರಡು ಹುಟ್ಟಿಕೊಳ್ಳುತ್ತವೆ. ಒಂದು ಬೇರು ಕಡಿದಾಗ ಇನ್ನೆರಡು ಬೇರು ಕಾಣಿಸಿಕೊಳ್ಳುತ್ತವೆ. ಪುನಃ ಪ್ರಯತ್ನಿಸುತ್ತಾನೆ. ಕೊನೆಗೆ ಸೋತು ಹೋಗುತ್ತಾನೆ.)

ಹೆಡ್ಡ : ಅಬ್ಬಾ.... ಇನ್ನು ನನ್ನಿಂದ ಆಗಲಿಕ್ಕಿಲ್ಲ... (ಕೂಡಲೇ ಸೈನಿಕರು ಅವನನ್ನು ಬಂಧಿಸಿ ಒಳಗೆ ಒಯ್ಯುತ್ತಾರೆ.)

ದಡ್ಡ : ಈಗ ನನ್ನ ಸರದಿ, ನಾನು ಈ ಮರವನ್ನು ಬುಡದಿಂದಲೇ ಕತ್ತರಿಸುತ್ತೇನೆ.

(ದಡ್ಡ ಕೊಡಲಿ ಎತ್ತಿಕೊಂಡು ಕಡಿಯಲು ಪ್ರಯತ್ನಿಸುತ್ತಾನೆ. ಕೊನೆಗೆ ಅವನೂ ಸೋತು ಹೋಗುತ್ತಾನೆ.)

ದಡ್ಡ : ಅಬ್ಬಾ... ಎಷ್ಟು ಕಷ್ಟ ನನ್ನಿಂದ ಆಗಲಿಕ್ಕಿಲ್ಲ.

(ಸೈನಿಕರು ಅವನನ್ನೂ ಒಳಗೆ ಒಯ್ಯುತ್ತಾರೆ. ಇನ್ನೊಂದು ಮೂಲೆಯಲ್ಲಿ ಅರಸ ಕಾಣಿಸಿಕೊಳ್ಳುತ್ತಾನೆ.)

ಅರಸ : ಓಹೋ ಇವರೂ ಸೋತು ಹೋದರೇ... ನಾಳೆ ಬೆಳಿಗ್ಗೆ ಇವರಿಬ್ಬರ ಕಿವಿಗಳನ್ನೂ ಕತ್ತರಿಸಿ ಬಿಡಿ.

ಸೈನಿಕ : ಆಗಲಿ ಮಹಾಸ್ವಾಮೀ,

ಒಡ್ಡ : (ಪ್ರವೇಶಿಸಿ) ಅರಸರಿಗೆ ವಂದನೆಗಳು, ತಾವು ಅನುಮತಿ ನೀಡಿದರೆ ನಾನು ಈ ಕೆಲಸಗಳನ್ನು ಮಾಡಬಲ್ಲೆ.

ಅರಸ : ಎಲಾ ಚಿಣ್ಣಾ... ನಿನ್ನಿಂದಾಗಲಿಕ್ಕಿಲ್ಲ... ಸೈನಿಕರೇ, ಇವನ ಕಿವಿಗಳನ್ನೂ ಮೂಗನ್ನೂ ಈಗಲೇ ಕತ್ತರಿಸಿ ಬಿಡಿ.

ಒಡ್ಡ : ಮಹಾಸ್ವಾಮೀ, ನಾನು ಆ ಕೆಲಸಗಳನ್ನು ಮಾಡದಿದ್ದರಲ್ಲವೇ ನನ್ನ ಕಿವಿ ಮೂಗುಗಳನ್ನು ಕತ್ತರಿಸಿ ಬಿಡುವುದು? ಕೆಲಸಗಳನ್ನು ಮಾಡಲೇ ಮಹಾಸ್ವಾಮೀ?

ಅರಸ : ಆಗಲಿ ನೋಡೇ ಬಿಡೋಣವಂತೆ.

ಒಡ್ಡ : ಪ್ರಭುಗಳೇ, ಮರ ಕಡಿಯುವ ಮೊದಲು ನನ್ನಲ್ಲಿ ಕೆಲವು ಪ್ರಶ್ನೆಗಳಿವೆ. ಅವುಗಳಿಗೆ ನೀವು ಸಹನೆಯಿಂದ ಉತ್ತರಿಸುತ್ತೀರಲ್ಲ?

ಅರಸ : ಪ್ರಶ್ನೆಗಳೇ...? ಖಂಡಿತವಾಗಿಯೂ ಉತ್ತರಿಸುತ್ತೇವೆ.

ಒಡ್ಡ : ಈ ಆಲದ ಮರವನ್ನು ಯಾರೇ ಆಗಲಿ ಇಲ್ಲಿಂದ ಕಡಿಯತೊಡಗಿದ ಕೂಡಲೇ ಏನಾಗುತ್ತದೆ?

ಅರಸ : ಒಂದು ಬೇರು ಕಡಿದರೆ ಎರಡು ಬೇರು ಹುಟ್ಟಿಕೊಳ್ಳುತ್ತವೆ. ಒಂದು ಕೊಂಬೆ ಕಡಿದರೆ ಎರಡು ಕೊಂಬೆಗಳು ಚಿಗುರೊಡೆಯುತ್ತವೆ.

ಒಡ್ಡ : ಅರಸರೇ, ಅದು ಸರಿಯಾದದ್ದೇ ಆಗಿದೆ. ಪ್ರಕೃತಿಯಲ್ಲಿರುವ, ಕಾಡುಗಳಲ್ಲಿರುವ ಮರಗಳನ್ನು ಕಡಿದರೆ ಇನ್ನೆರಡು ಗಿಡಗಳು ಹುಟ್ಟಿ ಬರಬೇಕಾದದ್ದು ನ್ಯಾಯವೇ ಆಗಿದೆ. ಆದುದರಿಂದ ಅತ್ಯಂತ ಸರಳ ಮತ್ತು ಸುಲಭದ ವಿಧಾನವೊಂದಿದೆ. ನೀವು ಈಗಿಂದೀಗಲೇ ಎರಡು ಗಿಡಗಳನ್ನು ನೆಟ್ಟು ಬೆಳೆಸುವ ವ್ಯವಸ್ಥೆ ಮಾಡಿರಿ.
ಆಗ ಈ ಮರವನ್ನು ಕಡಿಸಲು ನಿಮಗೆ ಹಕ್ಕು ಬರುತ್ತದೆ. ಇಲ್ಲಿ ಬೇಕಾದದ್ದು, ನೆಟ್ಟು ಬೆಳೆಸುವ ಮನಸ್ಸೇ ಹೊರತು ಇದ್ದುದನ್ನು ನಾಶಪಡಿಸುವ ಕೆಟ್ಟ ಯೋಚನೆಗಳಲ್ಲ...

ಅರಸ : ಭಲೇ, ನಿನ್ನ ತರ್ಕ ಚೆನ್ನಾಗಿದೆ. ಸೈನಿಕರೇ, ಈಗಿಂದೀಗಲೇ ಡಂಗುರ ಸಾರಿಸಿರಿ.

ಡಂಗುರದವನು : ಇಂದಿನಿಂದ ನಮ್ಮ ನಾಡಿನಲ್ಲಿ ಮರ ಕಡಿಯುವ ಹಕ್ಕು ಅದನ್ನು ಬೆಳೆಸಬಲ್ಲವರಿಗೆ ಮಾತ್ರ ಇರುತ್ತದೆ. ಆದುದರಿಂದ ಎರಡು ಗಿಡಗಳನ್ನು ನೆಟ್ಟು ಬೆಳೆಸಿದ ಬಳಿಕವೇ ಒಂದು ಮರವನ್ನು ಕಡಿಯಬಹುದು... ಎಂದು ಅರಸರ ಆಜ್ಞೆಯಾಗಿದೆ...

ಅರಸ : (ಒಡ್ಡನಿಗೆ) ನಿನಗೆ ಅರ್ಧರಾಜ್ಯ ಕೊಡಬಹುದು... ಆದರೆ ಬಾವಿಯನ್ನು ತೋಡಲಿಲ್ಲವಲ್ಲ...

ಒಡ್ಡ : ಅರಸರೇ, ನೀವು ಎಲ್ಲಿ ಬಾವಿ ತೋಡಬೇಕೆಂದು ಬಯಸುತ್ತೀರಿ...?

ಅರಸ : ಅಲ್ಲಿಯೇ, ನೀನು ನಿಂತಲ್ಲಿ. ಒಂದು ಬಂಡೆಕಲ್ಲು ಹರಡಿಕೊಂಡಿದೆಯಲ್ಲ, ಅದೇ ಸ್ಥಳದಲ್ಲಿ...

ಒಡ್ಡ : ಬಾವಿಯನ್ನೇನೋ ತೋಡಬಹುದು, ಆದರೆ ಅದರಲ್ಲಿ ನೀರು ಸಿಗಲಿಕ್ಕಿಲ್ಲ...

ಅರಸ : ನೀರು ಸಿಗಲಿಕ್ಕಿಲ್ಲ ಎಂದರೇನು? ಬಾವಿ ತೋಡಿ ನೀರು ಸಿಗುವಂತಾದರೆ ನಿನಗೆ ನನ್ನ ಮಗಳನ್ನು ಕೊಟ್ಟು ಕಲ್ಯಾಣ ಮಾಡಿಸುತ್ತೇನೆ.

ಒಡ್ಡ : ಅರಸರೇ, ನೀವು ನನ್ನ ಕಲ್ಯಾಣಕ್ಕಿಂತಲೂ ಈ ನಾಡಿನ ಎಲ್ಲ ಜನರ ಕಲ್ಯಾಣದ ಬಗ್ಗೆ ಯೋಚಿಸಿ. ನಾನು ಹೇಳಿದ್ದು ಇಲ್ಲಿ ಬಾವಿ ತೋಡಿದರೆ ನೀರು ಸಿಗಲಿಕ್ಕಿಲ್ಲ ಎಂದು ಮಾತ್ರ...

ಅರಸ : ಚೆನ್ನಾಗಿ ಮಾತನಾಡುತ್ತೀಯ... ನೀರು ಯಾಕೆ ಸಿಗಲಿಕ್ಕಿಲ್ಲ...?

ಒಡ್ಡ : ಯಾಕೆಂದರೆ ನೀರು ಸಿಗಬೇಕಾದ ಪೂರಕ ಕೆಲಸಗಳನ್ನು ನಾವು ಯಾರೂ ಮಾಡುತ್ತಿಲ್ಲ. ಇರುವ ನೀರ ಸೆಲೆಗಳನ್ನೆಲ್ಲ ಅನಾವಶ್ಯಕ ದುರುಪಯೋಗದಿಂದ ನಾಶ ಮಾಡಿದ್ದೇವೆ...

ಅರಸ : ಹಾಗಾದರೆ ನಾವೇನು ಮಾಡೋಣ? ನೀರಂತೂ ನಮಗೆ ಅಗತ್ಯವಾಗಿ ಬೇಕೇ ಬೇಕಲ್ಲವೇ...?

ಒಡ್ಡ : ನಾವು ಪ್ರಕೃತಿಯಿಂದ ಎಷ್ಟು ನೀರನ್ನು ಪಡೆಯುತ್ತೇವೆಯೋ... ಅದಷ್ಟನ್ನೂ ಮರುಪೂರಣ ಮಾಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮ ಊರಲ್ಲಿ ತುಂಬಿ ಹರಿಯುವ ಹೊಳೆಯಿದೆ. ಆದರೆ ಅದರ ಸಮರ್ಪಕ ಬಳಕೆ ಆಗುತ್ತಿಲ್ಲ... ಅದರ ನೀರನ್ನು ಎಲ್ಲ ಜನರಿಗೂ ಸರಿಯಾದ ರೀತಿಯಲ್ಲಿ ಬಳಕೆಯಾಗುವಂತೆ ಯೋಜನೆ ರೂಪಿಸಬಹುದಲ್ಲ...?

ಅರಸ : ಒಳ್ಳೆಯ ಸಲಹೆ... ನೀರಿಗಾಗಿ ಕಷ್ಟಪಡುವ ಜನರನ್ನು ನೋಡಿದ್ದೇವೆ. ಹಾಗಾಗಿ...

ಒಡ್ಡ : ಹಾಗಾಗಿಯೇ ಮಳೆಕೊಯ್ಲಿನ ಕೆಲಸವನ್ನು ಎಲ್ಲರೂ ಮಾಡಬೇಕಾಗಿದೆ. ಮಳೆ ಕೊಯ್ಲು ಎಂದರೆ ಓಡುವ ನೀರನ್ನು ನಡೆಯುವಂತೆ ಮಾಡುವುದು... ನಡೆಯುವ ನೀರನ್ನು ತೆವಳುವಂತೆ ಮಾಡುವುದು... ತೆವಳುವ ನೀರನ್ನು ನಿಲ್ಲಿಸುವುದು... ನಿಂತ ನೀರನ್ನು ಇಂಗಿಸುವುದು. ಅರಸರೇ, ಮೊದಲು ನಾವು ನೀರಿಂಗಿಸೋಣ.

ಆಗ ತಾನಾಗಿಯೇ ನೀರು ಹರಿದು ಬರುತ್ತದೆ.

ಅರಸ : ಅಂದ ಹಾಗೆ ನಿನ್ನ ಹೆಸರೇನೆಂದು ಹೇಳಿದೆ...

ಒಡ್ಡ : ಒಡ್ಡ, ಮಹಾಸ್ವಾಮೀ.

ಅರಸ : ಒಡ್ಡ, ಕೆರೆ, ನದಿಗಳ ರಕ್ಷಣೆಯ ಬಗ್ಗೆ, ಜೀವಜಲದ ಬಗೆಗಿನ ನಿನ್ನ ಪ್ರೀತಿಯ ಬಗ್ಗೆ ನಮಗೆ ಬಹಳ ಮೆಚ್ಚುಗೆಯುಂಟಾಗಿದೆ. ನೀನು ನಮಗೆ ನೀರುಳಿತಾಯದ ಮೊದಲ ಪಾಠ ಹೇಳಿದ್ದೀಯ. ಅದಕ್ಕಾಗಿ ಕೃತಜ್ಞತೆಗಳು.

ಒಡ್ಡ : ಕೃತಜ್ಞತೆ ಸಲ್ಲಿಸಬೇಕಾದದ್ದು ಈ ನೆಲಕ್ಕೆ. ಈ ಜಲಕ್ಕೆ. ನಾವೆಲ್ಲರೂ ಈಗಾಗಲೇ ಈ ಭೂಮಿಯಿಂದ ಪಡೆದಿರುವ ನೀರಿನ ಪ್ರಮಾಣವನ್ನು ವಾಪಸು ಮಾಡದಷ್ಟು ಮುಂದಕ್ಕೆ ಹೋಗಿದ್ದೇವೆ. ಭೂಮಿತಾಯಿಯ ಆ ಋಣವನ್ನು ಸ್ವಲ್ಪವಾದರೂ ಸಂದಾಯ ಮಾಡೋಣ. ಅದು ಒಬ್ಬರಿಂದ ಇಬ್ಬರಿಂದ ಆಗುವ ಕೆಲಸವಲ್ಲ. ನಾವೆಲ್ಲರೂ, ಸಾಮೂಹಿಕ ಸಹಭಾಗಿತ್ವದೊಂದಿಗೆ ನಡೆಸಬೇಕಾದ ಕಾಯಕ. ನೀವು ಕೈಹಿಡಿದು ಮುನ್ನಡೆಸಬೇಕು.

ಅರಸ : ಹೌದು ನಾವೆಲ್ಲರೂ ಸೇರಿ ಜೀವಜಲದ ಉಳಿವಿನ ಕುರಿತು ಪ್ರಯತ್ನಿಸೋಣ. ಎಲ್ಲಿ ಸೈನಿಕರೇ, ಈಗಿಂದೀಗಲೇ ಡಂಗುರ ಸಾರಿಸಿರಿ.

ಡಂಗುರದವನು : ಈ ನಾಡಿನ ಎಲ್ಲ ಜನರಿಗೂ ಈ ಮೂಲಕ ತಿಳಿಸುವುದೇನೆಂದರೆ - ಪ್ರತಿಯೊಬ್ಬರೂ ನೀರುಳಿತಾಯ ಕಾಯಕದಲ್ಲಿ ಸ್ವಂತ ಆಸಕ್ತಿಯಿಂದ ಪಾಲ್ಗೊಳ್ಳಬೇಕು.

ಮಳೆ ನೀರು ಸಂಗ್ರಹ, ಕೆರೆ. ಒಡ್ಡು, ಇಂಗು ಗುಂಡಿಗಳ ನಿರ್ಮಾಣದಲ್ಲಿ ಪ್ರೀತಿಯಿಂದ ಭಾಗವಹಿಸಬೇಕು. ನೀರಿನ ನೆಮ್ಮದಿಯ ನೂರಾರು ದಾರಿಗಳಲ್ಲಿ ಯಾವ ದಾರಿಯನ್ನಾದರೂ ಕಂಡುಕೊಳ್ಳಬಹುದು... ಎಂದು ಅರಸರ ಕೋರಿಕೆಯಾಗಿದೆ... ಬನ್ನಿ ನೀರಿಂಗಿಸೋಣ...ಬನ್ನಿ...

## ಲೇಖಕರ ಪರಿಚಯ



ಉತ್ತಮ ರಂಗಕರ್ಮಿಯಾದ ಐ.ಕೆ. ಬೊಳುವಾರು ಅವರು ೧೯೫೭ರ ಜೂನ್ ೭ರಂದು ಜನಿಸಿದರು. ೨೦೦೪ರಿಂದ ೨೦೦೯ರ ತನಕ ರಂಗಾಯಣ ಮೈಸೂರು ಹಾಗೂ ಸ್ವೀಡಿಷ್ ಐ.ಟಿ.ಐ. ಸಹಕಾರದೊಂದಿಗೆ ಶಿಕ್ಷಣದಲ್ಲಿ ರಂಗಭೂಮಿ ಯೋಜನೆಯನ್ವಯ ಮಕ್ಕಳ ನಾಟಕಗಳನ್ನು ಸಿದ್ಧಪಡಿಸಿ ಕರ್ನಾಟಕದ ವಿವಿಧ ಶಾಲೆಗಳಲ್ಲಿ, ರಂಗಮಂದಿರಗಳಲ್ಲಿ ಹಾಗೂ ನಾಟಕೋತ್ಸವಗಳಲ್ಲಿ ಮಕ್ಕಳನಾಟಕ ಪ್ರದರ್ಶನ ನಡೆಯುವಂತೆ ಮಾಡಿದ್ದಾರೆ. ಇವರು ನಿರ್ದೇಶಿಸಿದ ಮಕ್ಕಳ ನಾಟಕಗಳು ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಮಾತ್ರವಲ್ಲದೆ ಕೇರಳ, ತಮಿಳುನಾಡು, ಪಾಂಡಿಚೇರಿ, ನವದೆಹಲಿಗಳಲ್ಲಿಯೂ ಯಶಸ್ವಿಯಾಗಿ ಪ್ರಯೋಗಗೊಂಡಿವೆ. ಇವರು ಗ್ರಹಣ, ಡೋಲು, ಮುದುಕ ಸೆಟ್ಟಿಯೂ ಮೂವರು ಮಕ್ಕಳೂ, ಮಾಯಾ ಕುದುರೆ ಮುಂತಾದ ನಾಟಕಗಳನ್ನು ಬರೆದಿದ್ದು ಚದುರಂಗ, ನಿರತ, ನಿರಂತ ಮುಂತಾದ ಸಂಸ್ಥೆಗಳನ್ನು ಸ್ಥಾಪಿಸಿ, ಆ ಮೂಲಕ ರಂಗಕ್ರಾಂತಿ ಮಾಡಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ರಂಗಭಾಸ್ಕರ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಇವರನ್ನರಸಿ ಬಂದಿವೆ.

ಪ್ರಸ್ತುತ 'ಮುದುಕ ಸೆಟ್ಟಿಯೂ ಮೂವರು ಮಕ್ಕಳೂ' ಎಂಬ ನಾಟಕವನ್ನು 'ಹನ್ನೆರಡು ಮಕ್ಕಳ ನಾಟಕಗಳು' ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಮುದುಕ ಸೆಟ್ಟಿಯ ಮಕ್ಕಳು ರಾಜನ ಅರಮನೆಗೆ ಹೋಗಲು ನಿರ್ಧರಿಸಿದ್ದೇಕೆ?
2. ಮರ ಕಡಿಯಲು ಮುಂದಾದ ಮಂದಿಯಲ್ಲಿ ಒಡ್ಡನು ಏನೆಂದು ಬಿನ್ನವಿಸಿಕೊಂಡನು?
3. ಮಳೆನೀರು ಭೂಮಿಗೆ ಇಂಗದಿರಲು ಕಾರಣವೇನು?
4. ಒಡ್ಡನೊಡನೆ ನದಿಯು ಏನೆಂದು ವಿನಂತಿಸಿಕೊಂಡಿತು?
5. ನೀರಿಗಾಗಿ ಕಷ್ಟಪಡುವ ಜನರ ಬವಣೆ ನೀಗಿಸಲು ಒಡ್ಡನು ಅರಸನಿಗೆ ನೀಡಿದ ಸಲಹೆ ಯಾವುದು?

## ಪಾತ್ರಚಿತ್ರಣ ಮಾಡಿರಿ

ನಾಟಕದ ಕೇಂದ್ರ ಪಾತ್ರವಾದ ಒಡ್ಡನ ಪಾತ್ರ ಚಿತ್ರಣ ಮಾಡಿರಿ.

## ಕಿರುಲೇಖನ ತಯಾರಿಸಿರಿ

ಜಲ ಸಂರಕ್ಷಣೆಯ ಪ್ರಧಾನ ವಿಧಾನಗಳಲ್ಲಿ ಒಂದಾದ ಮಳೆ ಕೊಯ್ಲಿನ ಬಗ್ಗೆ ಕಿರುಲೇಖನವೊಂದನ್ನು ಬರೆಯಿರಿ.

## ವಿಚಾರಗೋಷ್ಠಿ ಪ್ರಬಂಧ ಸಿದ್ಧಪಡಿಸಿರಿ

ಪರಿಸರ ದಿನಾಚರಣೆಯ ದಿನದಂದು ನಿಮ್ಮ ಶಾಲೆಯಲ್ಲಿ ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಪಾಠಭಾಗದ ಹಿನ್ನೆಲೆಯಲ್ಲಿ 'ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಕಾರಣಗಳು' ಎನ್ನುವ ವಿಷಯದ ಕುರಿತು ಪ್ರಬಂಧವನ್ನು ಸಿದ್ಧಪಡಿಸಿರಿ.

## ಸ್ವಾರಸ್ಯ ಬರೆಯಿರಿ

ಕೆಳಗಿನ ಮಾತುಗಳ ಸ್ವಾರಸ್ಯವನ್ನು ಬರೆಯಿರಿ.

- ಸಸ್ಯ ಶ್ಯಾಮಲೆ ಎಂದು ಕರೆಸಿಕೊಳ್ಳುವ ಈ ಭೂಮಿ ಇಂದು ಮರಳುಗಾಡಾಗುತ್ತಿದೆ.
- ನದೀಮೂಲ ಋಷಿಮೂಲ ಯಾರೂ ಹುಡುಕಬಾರದಂತೆ.
- ಉತ್ತರ ಸ್ಪಷ್ಟವಾಗಿ ನಮೂದಿಸಿರುವಾಗ ಪ್ರಶ್ನೆಯ ಅಗತ್ಯಗಳಿಲ್ಲ.
- ನನ್ನ ಕಲ್ಯಾಣಕ್ಕಿಂತಲೂ ಈ ನಾಡಿನ ಎಲ್ಲಾ ಜನರ ಕಲ್ಯಾಣದ ಬಗ್ಗೆ ಯೋಚಿಸಿ.

## ರೂಪಾಂತರಿಸಿರಿ

'ಮುದುಕ ಸೆಟ್ಟಿಯೂ ಮೂವರು ಮಕ್ಕಳೂ' ನಾಟಕವನ್ನು ಕತೆಯಾಗಿ ಪರಿವರ್ತಿಸಿ ಬರೆಯಿರಿ.

## ಸಮಾಸವನ್ನು ಗುರುತಿಸಿರಿ

ಕೆಳಗೆ ಕೊಟ್ಟಿರುವ ಪದಗಳ ವಿಗ್ರಹವಾಕ್ಯವನ್ನು ಬರೆದು ಸಮಾಸವನ್ನು ಹೆಸರಿಸಿರಿ.

- ಅರಮನೆ
- ಗಿಡಮರಗಳು
- ಹೆಬ್ಬಾಗಿಲು
- ಮೈಚಾಚು
- ರತ್ನಕಲಶ

## ಸಂಧಿಯನ್ನು ತಿಳಿಯಿರಿ

### ಯಣ್ ಸಂಧಿ :

ಕೆಳಗೆ ಕೊಡಲಾದ ಪಟ್ಟಿಯನ್ನು ಗಮನಿಸಿರಿ.

| ಸಂಧಿ ವಿಂಗಡಣೆ | ಸಂಧಿಯಾಗುವ ಅಕ್ಷರಗಳು | ಸಂಧಿಯಾದ ರೂಪ | ಬದಲಾವಣೆ |
|---|---|---|---|
| ಕೋಟಿ+ಅಂತರ | ಇ+ಅ | ಕೋಟ್ಯಂತರ | ಇ ಕಾರಕ್ಕೆ ಯ್ ಕಾರ ಆದೇಶ |
| ಅತಿ+ಅದ್ಭುತ | ಇ+ಅ | ಅತ್ಯದ್ಭುತ | ಇ ಕಾರಕ್ಕೆ ಯ್ ಕಾರ ಆದೇಶ |
| ಇತಿ+ಆದಿ | ಇ+ಆ | ಇತ್ಯಾದಿ | ಇ ಕಾರಕ್ಕೆ ಯ್ ಕಾರ ಆದೇಶ |
| ವಧೂ+ಆಗಮನ | ಊ+ಆ | ವಧ್ವಾಗಮನ | ಊ ಕಾರಕ್ಕೆ ವ್ ಕಾರ ಆದೇಶ |
| ಪಿತೃ+ಆರ್ಜಿತ | ಋ+ಆ | ಪಿತ್ರಾರ್ಜಿತ | ಋ ಕಾರಕ್ಕೆ ಅರ್ ಆದೇಶ |

ಸಂಸ್ಕೃತದಲ್ಲಿ ಯ್, ವ್, ರ್ ಎಂಬ ವರ್ಣಗಳಿಗೆ 'ಯಣ್' ಎಂಬ ಹೆಸರಿದೆ. ಸಂಧಿಯಗುವಾಗ ಈ ಯಣ್ ವರ್ಣಗಳು ಆದೇಶವಾಗಿ ಬಂದರೆ ಅಂಥ ಸಂಧಿಗೆ 'ಯಣ್ ಸಂಧಿ' ಎನ್ನುತ್ತಾರೆ. ಇ, ಈ, ಉ, ಊ ಅಥವಾ ಋ ವರ್ಣದ ಮುಂದೆ ಆಯಾ ವರ್ಣಗಳಿಗಿಂತ ಭಿನ್ನ(ಅಸವರ್ಣ)ವಾದ ಸ್ವರ ಬಂದಾಗ ಇ, ಈ ಗಳಿಗೆ ಯ್ ಕಾರವೂ ಉ ಊ ಗಳಿಗೆ ವ್ ಕಾರವೂ ಋ ಕಾರಕ್ಕೆ 'ರ್' ಎಂಬುದೂ ಆದೇಶವಾಗಿ ಬರುವ ಸಂಧಿಯೇ ಯಣ್ ಸಂಧಿ.

## ಅಭಿನಯಿಸಿರಿ

ಈ ನಾಟಕದ ಪಾತ್ರಗಳನ್ನು ಗುಂಪಿನಲ್ಲಿ ಹಂಚಿಕೊಂಡು ತರಗತಿಯಲ್ಲಿ ಅಭಿನಯಿಸಿರಿ. ವಿಡಿಯೋ ಮೂಲಕ ಚಿತ್ರೀಕರಿಸಿ ಶಾಲಾ ಬ್ಲಾಗ್ ನಲ್ಲಿ ಪ್ರಕಟಿಸಿರಿ.

# 2. ನುಡಿಗಂಪು

ಭರತಖಂಡವು ವಿವಿಧ ಸಂಸ್ಕೃತಿಗಳ ನೆಲೆವೀಡು. ವಿವಿಧತೆಯಲ್ಲಿ ಏಕತೆ ಮಾತ್ರವಲ್ಲದೆ, ವಿವಿಧ ವೇಷಭೂಷಣ ಮತ್ತು ಅನೇಕ ಭಾಷೆಗಳ ಸೌಂದರ್ಯ ನಮ್ಮ ದೇಶದ ಹಿರಿಮೆಯಾಗಿದೆ. ಭಾಷೆ ಎನ್ನುವುದು ಮಾನವನಿಗೆ ಮಾತ್ರ ಉಪಯೋಗಿಸಲು ಸಾಧ್ಯವಾದ ಒಂದು ಸಂಕೀರ್ಣ ಸಂವಹನ ಮಾಧ್ಯಮವಾಗಿದೆ. ಇದು ಕಾಲಕಾಲಕ್ಕೆ ಬದಲಾವಣೆಗೊಳ್ಳುತ್ತದೆ. ಭಾಷೆಯು ಸಂಸ್ಕೃತಿಯ ಪ್ರತಿಬಿಂಬವೂ ಆಗಿದೆ. 'ಸಾಹಿತ್ಯವಿಲ್ಲದೆ ಜೀವನವಿಲ್ಲ, ಜನಜೀವನವಿಲ್ಲದೆ ಸಾಹಿತ್ಯವಿಲ್ಲ' ಎನ್ನುವ ಮಾತಿನಂತೆ ಸಮಾಜದ ಸ್ವಾಸ್ಥ್ಯಕ್ಕೆ ಸಂಸ್ಕೃತಿಯುಕ್ತ ಸಾಹಿತ್ಯಬೇಕು. ಸೌಹಾರ್ದಯುತ ಸುಸಂಸ್ಕೃತ ಸಮಾಜ ನಿರ್ಮಾಣದಲ್ಲಿ ಸಾಹಿತ್ಯದ ಪಾತ್ರ ಮಹತ್ವವಾದುದು. ಇತರ ಭಾಷೆಗಳಂತೆ ಕನ್ನಡ ಭಾಷೆಯೂ ತನ್ನದೇ ಆದ ಭವ್ಯ ಇತಿಹಾಸ ಪರಂಪರೆಯನ್ನು ಹೊಂದಿದೆ. ಆ ಹಿರಿಮೆಯನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡುವುದೇ ಈ ಘಟಕದ ಉದ್ದೇಶವಾಗಿದೆ.

ಪ್ರೊ. ಶ್ರೀಕೃಷ್ಣ ಭಟ್ಟರು ಬರೆದ 'ಕನ್ನಡ ಭಾಷೆ' ಎಂಬ ಪಾಠಭಾಗವು ಕನ್ನಡ ಭಾಷೆಯ ಪ್ರಾಚೀನತೆ ಹಾಗೂ ಭವ್ಯ ಪರಂಪರೆಯನ್ನು ತಿಳಿಸುತ್ತದೆ. ಇದು ಕನ್ನಡ ಭಾಷೆಯ ಅವಸ್ಥಾಂತರಗಳು, ಪ್ರಾದೇಶಿಕ ಭಾಷಾ ವ್ಯತ್ಯಾಸಗಳು ಮತ್ತು ಭಾಷೆಯ ಮಹತ್ವವನ್ನು ವಿವರಿಸಿ ಕನ್ನಡ ಭಾಷೆಯು 'ಶ್ರೀಮಂತ ಭಾಷೆ' ಎಂಬುದನ್ನು ಪ್ರತಿಪಾದಿಸುತ್ತದೆ.

ಯಕ್ಷಗಾನ ಪಿತಾಮಹ ಕುಂಬಳೆ ಪಾರ್ತಿಸುಬ್ಬ ಕವಿಯು ಬರೆದ 'ಭರತನ ಭ್ರಾತೃಪ್ರೇಮ' ಎಂಬ ಪಾಠಭಾಗವು ಯಕ್ಷಗಾನ ಪ್ರಸಂಗಸಾಹಿತ್ಯವಾಗಿದೆ. ಯಕ್ಷಗಾನ ಪ್ರಸಂಗವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಈ ಪಾಠದ ಉದ್ದೇಶವಾಗಿದೆ. 'ಸೋದರ ಪ್ರೇಮ ಹಾಗೂ ತ್ಯಾಗದ ಪ್ರತೀಕವಾದ ಶ್ರೀರಾಮ - ಭರತರ ಅನ್ಯೋನ್ಯ ಪ್ರೀತಿ'ಯು ವಿದ್ಯಾರ್ಥಿಗಳಿಗೆ ಮಾದರಿ.

'ಅಭಯದಾನ' ಕೆಂಪು ನಾರಾಯಣ ಕವಿಯು ಬರೆದ ಮುದ್ರಾಮಂಜೂಷದಿಂದ ಆಯ್ದ ಭಾಗ. ೧೯ನೇ ಶತಮಾನದ ಕನ್ನಡ ಗದ್ಯ ಸಾಹಿತ್ಯವನ್ನು ಪರಿಚಯಿಸುವುದು, ಅತಿಥಿ ಸತ್ಕಾರ ನಮ್ಮ ಸಂಸ್ಕೃತಿಯ ಭಾಗವೆಂಬುದನ್ನು ತಿಳಿಸುವುದು ಈ ಗದ್ಯಭಾಗದ ಉದ್ದೇಶವಾಗಿದೆ.

ಕನ್ನಡವನುಳಿದೆನಗೆ । ಅನ್ಯ ಜೀವನವಿಲ್ಲ
ಕನ್ನಡವೆ ಎನ್ನುಸಿರು । ಪೆತ್ತೆನ್ನ ತಾಯಿ
ಕನ್ನಡವೆ ಧನಧಾನ್ಯ। ಕನ್ನಡವೆ ಮನೆಮಾನ್ಯ
ಕನ್ನಡವೆಯೆನಗಾಯ್ತು । ಕಣ್ಣು ಕಿವಿಬಾಯಿ॥

ಕನ್ನಡದ ಸವಿಮಾತು । ಮನ್ನಣೆಯ ಪಳಮಾತು
ಕನ್ನಡ  ಸರಸ್ವತಿಯು । ನವಕಲ್ಪಲತೆಯು
ಕನ್ನಡದ ವರಚರಿತೆ । ವಿಮಲ ಗಂಗಾ ಸರಿತೆ
ಕನ್ನಡದ ಸಿರಿಪೆಂಪು । ಎನಗೆ ನರುಗಂಪು॥

ಬೆನಗಲ್ ರಾಮರಾವ್

- ಮೇಲಿನ ಕವನದ ಸಾಲುಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ಕನ್ನಡ ಭಾಷೆ

**ಡಾ. ಪಿ. ಶ್ರೀಕೃಷ್ಣ ಭಟ್**

ಕಾಡುಮನುಷ್ಯನ ಸ್ಥಿತಿಯಲ್ಲಿದ್ದ ಮಾನವನನ್ನು ನಾಗರಿಕನನ್ನಾಗಿ ಪರಿವರ್ತಿಸುವಲ್ಲಿ ಪ್ರಧಾನ ಪಾತ್ರ ವಹಿಸಿದುದೇ ಭಾಷೆ. ಮನುಷ್ಯನು ತನ್ನ ಜೀವನವನ್ನು ಸುಂದರ ಹಾಗೂ ಸುಭದ್ರಗೊಳಿಸುವ ಸಲುವಾಗಿ ಪ್ರಾಚೀನ ಕಾಲದಿಂದಲೇ ಹಲವಾರು ಸಂಶೋಧನೆಗಳನ್ನು ಮಾಡುತ್ತಾ ಬಂದಿದ್ದಾನೆ. ಭಾಷೆಯು ಅಂತಹ ಸಂಶೋಧನೆಗಳಲ್ಲಿ ಶಿಖರಪ್ರಾಯವಾದುದು. ಭಾಷೆಯು ಉಸಿರಾಟದಂತೆ ಸಹಜವಾದುದೂ ಅಲ್ಲ; ಕರ್ಣನ ಕವಚಕುಂಡಲದಂತೆ ಸಹಜವಾಗಿ ಕಲೆತು ಬಂದುದೂ ಅಲ್ಲ. ಮನುಷ್ಯನ ಎತ್ತರ, ಮಾಟ, ಬಣ್ಣ ಇವೆಲ್ಲವೂ ಆನುವಂಶಿಕವಾದುವು. ಉಸಿರಾಟ, ಆಹಾರ, ನಿದ್ರೆ ಇವೆಲ್ಲವೂ ನೈಸರ್ಗಿಕವಾದುವು. ಭಾಷೆಯು ಹೀಗೆ ಅನುವಂಶಿಕವೂ ಅಲ್ಲ; ನೈಸರ್ಗಿಕವೂ ಅಲ್ಲ. ಭಾಷೆ ಅನುಕರಣೆಯಿಂದ ಕಲಿತು ಬರುವುದಾಗಿದೆ. ಹಾಗಾದರೆ ಒಂದು ಮಗು ಭಾಷೆಯನ್ನು ಕಲಿಯುವುದು ಹೇಗೆ?

ಒಂದು ಮಗು ತನ್ನ ಪರಿಸರದವರು ಬಳಸುವ ನಿಶ್ಚಿತವಾದ ಮೌಖಿಕ ಧ್ವನಿಗಳನ್ನು ತಾನೂ ಯಥಾವತ್ತಾಗಿ ಅನುಸರಿಸುತ್ತಾ ಹೋಗುವ ಮೂಲಕ ಭಾಷೆಯನ್ನು ಕಲಿಯುತ್ತದೆ. ಈ ಅನುಕರಣ ಕ್ರಿಯೆಯು ಒಂದು ಉದಾಹರಣೆಯಿಂದ ಸ್ಪಷ್ಟವಾಗಬಹುದು. ಉತ್ತರ ಭಾರತದ ಒಂದು ರಾಜ್ಯದಿಂದ ಚಿಕ್ಕದಾದ ಮಗುವನ್ನು ತಾಯ್ತಂದೆ, ಬಂಧುಬಳಗದಿಂದ ಬೇರ್ಪಡಿಸಿ ತಿರುವನಂತಪುರದಲ್ಲಿ ಮಲಯಾಳ ಭಾಷಾ ಪರಿಸರಕ್ಕೆ ತಂದು ಸಲಹುತ್ತಾರೆ ಎಂದು ಭಾವಿಸುವ. ಆ ಮಗುವಿಗೆ ಭಾಷೆಯನ್ನು ಕಲಿಯುವ ಶಕ್ತಿ ಬಂದೊಡನೆ ಅದು ಮಲಯಾಳವನ್ನು ಕಲಿಯುತ್ತದೆ, ಮಲೆಯಾಳವನ್ನೇ ಆಡುತ್ತದೆ. ಅಪ್ಪಿತಪ್ಪಿಯೂ ಅದು ತನ್ನ ತಾಯ್ತಂದೆಯರ ಭಾಷೆಯನ್ನು ಆಡಲಾರದು. ಕಾರಣ, ತಾನು ಬೆಳೆಯುತ್ತಿರುವ ಮನೆಯ ಮತ್ತು ಪರಿಸರದ ವ್ಯಕ್ತಿಗಳ ಭಾಷೆಯ ಅನುಕರಣೆಯನ್ನೇ ಅದು ಮಾಡುತ್ತದೆ. ಇದರಲ್ಲಿ ಅಚ್ಚರಿಯೇನೂ ಇಲ್ಲ.

ದೈನಂದಿನ ವ್ಯವಹಾರಗಳಲ್ಲಿ ಬಳಸಿಕೊಳ್ಳುವ ಭಾಷೆಯನ್ನು 'ಜೀವಂತ ಭಾಷೆ' ಎನ್ನುತ್ತಾರೆ. ಹಾಗೆ ವ್ಯವಹಾರದಲ್ಲಿ ಬಳಕೆಗೊಳ್ಳದ ಭಾಷೆಯನ್ನು 'ಮೃತ ಭಾಷೆ' ಎಂದು ಕರೆಯುತ್ತಾರೆ. ಈಗ ಮೃತ ಭಾಷೆ ಎನಿಸಿರುವ ಒಂದು ಭಾಷೆ ಹಿಂದೆ ದಿನದಿನದ ಬಳಕೆಯಲ್ಲಿ ಉಪಯೋಗದಲ್ಲಿದ್ದ ಜೀವಂತ ಭಾಷೆಯಾಗಿತ್ತು ಎಂಬುದನ್ನೂ ಗಮನಿಸಬಹುದು. ಪ್ರತಿಯೊಂದು ಜೀವಂತ ಭಾಷೆಯಲ್ಲಿಯೂ ಮುಖ್ಯವಾಗಿ ಎರಡು ವಿಷಯಗಳು ಗಮನಿಸತಕ್ಕವುಗಳಾಗಿವೆ.

೧. ಭಾಷೆಯ ಆಂತರಿಕ ಬೆಳವಣಿಗೆ.

೨. ಅನ್ಯ ಭಾಷಾ ಸಂಪರ್ಕ.

ಮೊದಲನೆಯದು ಭಾಷೆಯ ಇತಿಹಾಸಕ್ಕೆ ಸಂಬಂಧಿಸಿದುದಾದರೆ, ಎರಡನೆಯದು ಒಂದು ಭಾಷೆ ಮತ್ತೊಂದು ಭಾಷೆಗೆ ಏನನ್ನು ಕೊಟ್ಟಿದೆ ಮತ್ತು ಆ ಭಾಷೆಯಿಂದ ಏನನ್ನು ಸ್ವೀಕರಿಸಿದೆ ಎಂಬುದಕ್ಕೆ ಸಂಬಂಧಿಸಿದೆ. ಈ ಎರಡನೆಯದಕ್ಕೆ ಇರುವ ಮತ್ತೊಂದು ಪದವೇ ಭಾಷಾ ಸಾಮರಸ್ಯ.

ಕನ್ನಡ ಒಂದು ಜೀವಂತ ಭಾಷೆ. ಇದಕ್ಕೆ ಸುಮಾರು ೧೬೫೦ ವರ್ಷಗಳ ಬೆಳವಣಿಗೆ ಇದೆ. ಈ ದೀರ್ಘಾವಧಿಯ ಬೆಳವಣಿಗೆಯಲ್ಲಿ ಪ್ರಧಾನವಾಗಿ ಮೂರು ಹಂತಗಳನ್ನು ಹಾದು ನಾಲ್ಕನೆಯ ಅವಸ್ಥೆಗೆ ಬಂದಿದೆ. ಈ ಅವಸ್ಥೆಗಳನ್ನು ಕ್ರಮವಾಗಿ ಪೂರ್ವದ ಹಳೆಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ಕರೆಯಲಾಗಿದೆ. ಪ್ರಾಚೀನ ಕನ್ನಡ ಶಾಸನಗಳಲ್ಲಿ (ಕ್ರಿ.ಶ.೬,೭ನೇ ಶತಮಾನ)ಕಂಡುಬರುವ ಕನ್ನಡವನ್ನು ಪೂರ್ವದ ಹಳಗನ್ನಡವೆನ್ನುತ್ತಾರೆ. ಕ್ರಿ.ಶ ೮೦೦ ರಿಂದ ನಿರ್ದಿಷ್ಟ ರೂಪದ ಹಳಗನ್ನಡ ಯುಗ ಆರಂಭವಾಗುತ್ತದೆ. ಪಂಪ , ರನ್ನ ಮೊದಲಾದ ಕವಿಪುಂಗವರಿಂದ ಚಂಪೂ ಕಾವ್ಯಗಳಲ್ಲಿ ಬಳಕೆಗೊಂಡ ಭಾಷಾರೂಪವೇ ಹಳಗನ್ನಡ. ಕ್ರಿ.ಶ ಸುಮಾರು ಹನ್ನೆರಡನೆಯ ಶತಮಾನದಿಂದ ಹತ್ತೊಂಭತ್ತನೆಯ ಶತಮಾನದವರೆಗಿನ ಕನ್ನಡ ಭಾಷಾರೂಪಕ್ಕೆ ನಡುಗನ್ನಡವೆಂದು ಹೆಸರು. ವಚನ, ರಗಳೆ, ಷಟ್ಪದಿ, ಸಾಂಗತ್ಯ, ಕೀರ್ತನೆಗಳು ನಡುಗನ್ನಡದಲ್ಲಿ ರಚನೆಗೊಂಡಿವೆ. ಅನಂತರದ ಅವಸ್ಥೆಯೇ ಹೊಸಗನ್ನಡ.

ಭಾಷೆಯು ಅವಸ್ಥಾಂತರಗಳನ್ನು ಹೊಂದುವಾಗ ತಲೆದೋರುವ ವ್ಯತ್ಯಾಸವನ್ನು ಮುಖ್ಯವಾಗಿ ಧ್ವನಿವ್ಯತ್ಯಾಸವೆಂದೂ, ಅರ್ಥವ್ಯತ್ಯಾಸವೆಂದೂ ಗುರುತಿಸುತ್ತೇವೆ. ಒಂದು ಕಾಲದಲ್ಲಿದ್ದ ಧ್ವನಿ ಇನ್ನೊಂದು ಕಾಲಕ್ಕೆ ಬಿದ್ದು ಹೋಗಬಹುದು, ಇಲ್ಲವೇ ಬೇರೆಯಾಗಬಹುದು ಅಥವಾ ಹೊಸತೊಂದು ಧ್ವನಿ ಬಂದು ಸೇರಿಕೊಳ್ಳಲೂಬಹುದು. ಇದುವೇ ಧ್ವನಿ ವ್ಯತ್ಯಾಸ. ಕನ್ನಡದಲ್ಲಾದ ಧ್ವನಿ ವ್ಯತ್ಯಾಸಕ್ಕೆ ಕೆಲವು ಉದಾಹರಣೆಗಳು:

**೧. ಪೂರ್ವದ ಹಳಗನ್ನಡ ಪದಾದಿಯ 'ವ'ಕಾರವು 'ಬ'ಕಾರವಾಗಿದೆ.**

| ಪೂರ್ವದ ಹಳಗನ್ನಡ | ಹಳಗನ್ನಡ |
|---|---|
| ವೆರಲ್ | ಬೆರಳು |
| ವಾಯ್ | ಬಾಯಿ |
| ವೆಟ್ಟ | ಬೆಟ್ಟ |

**೨. ಹಳಗನ್ನಡದಲ್ಲಿ ಬಳಕೆಗೊಳ್ಳುತ್ತಿದ್ದ ಶಕಟರೇಫ (ಱ ) ಮತ್ತು (ೞ) ಹೊಸಗನ್ನಡದಲ್ಲಿಲ್ಲ.**

| ಹಳಗನ್ನಡ | ಹೊಸಗನ್ನಡ | ಅರ್ಥ |
|---|---|---|
| ಪೊಱೆ | ಹೊರೆ | ಭಾರ |
| ಅಱೆ | ಅರೆ | ಬಂಡೆ |
| ಮೞೆ | ಮಳೆ | ಮಳೆ |
| ಪಾೞ್ | ಹಾಳು | ಹಾಳು |

ಮೇಲಿನ ಉದಾಹರಣೆಗಳ 'ಐ'ಕಾರವು 'ರ' ಆಗಿಯೂ 'ಱ' ಕಾರವು 'ಳ' ಆಗಿಯೂ ಬದಲಾವಣೆಗೊಂಡುದನ್ನು ಗಮನಿಸಬಹುದು.

೩. ಹಳಗನ್ನಡದ ವ್ಯಂಜನಾಂತ ಪದಗಳು ಹೊಸಗನ್ನಡದಲ್ಲಿ ಸ್ವರಾಂತಗಳಾಗಿವೆ.

| ಹಳಗನ್ನಡ | ಹೊಸಗನ್ನಡ |
|---|---|
| ಕಣ್ | ಕಣ್ಣು |
| ಅವನ್ | ಅವನು |
| ಉಸಿರ್ | ಉಸಿರು |

೪ . ಹಳಗನ್ನಡದ ಪದಾದಿಯ 'ಪ'ಕಾರವು ಹೆಚ್ಚಿನ ಸಂದರ್ಭಗಳಲ್ಲಿ 'ಹ'ಕಾರವಾಗಿದೆ.

| ಹಳಗನ್ನಡ | ಹೊಸಗನ್ನಡ |
|---|---|
| ಪೆರ್ಮೆ | ಹೆಮ್ಮೆ |
| ಪೆಸರ್ | ಹೆಸರು |
| ಪುಲಿ | ಹುಲಿ |
| ಪಂದಿ | ಹಂದಿ |

೫. ಹಳಗನ್ನಡದ ಪದದಲ್ಲಿನ ವಿಜಾತೀಯ ಒತ್ತಕ್ಷರಗಳು ಸಜಾತೀಯ ಒತ್ತಕ್ಷರಗಳಾಗಿವೆ.

| ಹಳಗನ್ನಡ | ಹೊಸಗನ್ನಡ |
|---|---|
| ಪಱ್ತಿ | ಹತ್ತಿ |
| ಉರ್ದು | ಉದ್ದು |
| ಸೊರ್ಕು | ಸೊಕ್ಕು |

೬. ಕೆಲವೆಡೆಗಳಲ್ಲಿ ಒತ್ತಿನ ನಡುವೆ ಸ್ವರ ಸೇರುತ್ತದೆ.

| | |
|---|---|
| ಅಳ್ಕು | ಅಳುಕು |
| ಬಳ್ಕು | ಬಳುಕು |
| ಬೆಳ್ಪು | ಬಿಳುಪು |

೭. ಹಳಗನ್ನಡದಲ್ಲಿ ಪದಮಧ್ಯ ಬಿಂದುಗಳು ಕೆಲವೆಡೆಗಳಲ್ಲಿ ಲೋಪವಾಗಿವೆ.

| ಹಳಗನ್ನಡ | ಹೊಸಗನ್ನಡ |
|---|---|
| ನಾಂದು | ನಾದು |
| ಇಱುಂಪೆ | ಇರುವೆ |
| ಬೆಡಂಗು | ಬೆಡಗು |

೮. ಕ್ರಿಯಾಪದಗಳಲ್ಲಿಯೂ ಪದಾಂತದಲ್ಲಿ 'ಉ'ಕಾರವು ಸೇರುತ್ತದೆ.

| ಪೂರ್ವದ ಹಳಗನ್ನಡ | ಹಳಗನ್ನಡ | ಹೊಸಗನ್ನಡ |
|---|---|---|
| ಏಱಿದಾರ್ | ಏಱಿದರ್ | ಏರಿದರು |
| ಸಂದಾನ್ | ಸಂದನ್ | ಸಂದನು |
| ಮಾಡಿದೊನ್ | ಮಾಡಿದನ್ | ಮಾಡಿದನು |

ಒಂದು ಭಾಷೆಯ ವಿಕಾಸದಲ್ಲಿ ಕೆಲವು ಪದಗಳು ಬಳಕೆಯಿಂದ ಜಾರುತ್ತವೆ. ಕೆಲವು ಪದಗಳು ಹಿಂದಿನ ಅರ್ಥಕ್ಕಿಂತ ಬೇರೆಯಾದ ಅರ್ಥವನ್ನು ಕೊಡುತ್ತವೆ. ಈ ಪ್ರಕ್ರಿಯೆಗೆ ಅರ್ಥವ್ಯತ್ಯಾಸವೆಂದು ಹೆಸರು. ಹಳಗನ್ನಡದಲ್ಲಿ ಬಳಕೆಯಲ್ಲಿದ್ದ ನೇಸಱ್ (ಸೂರ್ಯ) ಅಱಿಲ್ (ನಕ್ಷತ್ರ) ಗುಡ್ಡ (ಶಿಷ್ಯ) ಲೆಂಕ (ಸೇವಕ) ಇತ್ಯಾದಿ ಪದಗಳು ಈಗ ಬಳಕೆಯಲ್ಲಿಲ್ಲ.

ಅರ್ಥ ವ್ಯತ್ಯಾಸಕ್ಕೆ ಉದಾಹರಣೆಗಳು :

| ಪದಗಳು | ಹಳಗನ್ನಡದಲ್ಲಿ ಅರ್ಥ | ಹೊಸಗನ್ನಡದಲ್ಲಿ ಅರ್ಥ |
|---|---|---|
| ಕೂಳ್ | ಅನ್ನ | ತಿರಸ್ಕಾರದಿಂದ ನೀಡುವ ಅನ್ನ |
| ಆಳ್ | ಮನುಷ್ಯ | ಸೇವಕ |
| ಪೊನ್ | ಲೋಹ | ಚಿನ್ನ |

## ಅನ್ಯಭಾಷಾ ಸಂಪರ್ಕ

ಒಂದು ವಿಸ್ತಾರವಾದ ರಾಜ್ಯದಲ್ಲಿ ಒಂದು ಭಾಷೆಯನ್ನು ಬಳಸುವ ಬಹು ಸಂಖ್ಯಾತರೊಂದಿಗೆ ಇತರ ಭಾಷಾಭಾಷಿಗಳಾದ ಅಲ್ಪಸಂಖ್ಯಾತರೂ ಇರುತ್ತಾರೆ. ಉರ್ದು, ಮರಾಠಿ, ತೆಲುಗು, ಮಲೆಯಾಳ, ಕೊಂಕಣಿ ಮೊದಲಾದುವು ಆಡುನುಡಿಯಾಗಿ ಉಳ್ಳವರು ಕರ್ನಾಟಕದೊಳಗಿನ ಅನ್ಯಭಾಷಾಭಾಷಿಗಳು. ಕರ್ನಾಟಕ ಪ್ರಾಂತ್ಯಕ್ಕೆ ತಾಗಿಕೊಂಡಿರುವ ವಿಭಿನ್ನ ರಾಜ್ಯಗಳಲ್ಲಿ ಉರ್ದು, ಮರಾಠಿ, ತೆಲುಗು, ಮಲೆಯಾಳ, ತಮಿಳು ಮೊದಲಾದ ಭಾಷೆಗಳನ್ನಾಡುತ್ತಾರೆ. ಇವರೊಂದಿಗೆ ಗಡಿಪ್ರದೇಶದ ಕನ್ನಡಿಗರು ಸದಾ ವ್ಯವಹಾರನಿರತರಾಗುತ್ತಾರೆ. ಇದರ ಒಟ್ಟು ಪರಿಣಾಮವೆಂದರೆ ಕನ್ನಡ ಭಾಷೆಯು ಬೇರೆಬೇರೆಡೆಗಳಲ್ಲಿ ಬೇರೆಬೇರೆಯಾಗಿಯೇ ಕಾಣುತ್ತದೆ. ಭಾಷಾ ವೈವಿಧ್ಯಗಳನ್ನು ಹೊಂದಿರುವ ವ್ಯವಹಾರದ ಭಾಷೆಯನ್ನು 'ಉಪಭಾಷೆ' ಎನ್ನುತ್ತಾರೆ. ಬೀದರ್ ಕನ್ನಡ, ಬೆಳಗಾವಿ ಕನ್ನಡ, ಮಂಗಳೂರು ಕನ್ನಡ, ಬಳ್ಳಾರಿ ಕನ್ನಡ, ರಾಯಚೂರು ಕನ್ನಡ ಮೊದಲಾದುವು ಕನ್ನಡದ ಪ್ರಾದೇಶಿಕ ಉಪಭಾಷೆಗಳೆನಿಸಿವೆ.

## ಭಾಷಾ ಸಾಮರಸ್ಯಕ್ಕೆ ಕೆಲವು ಉದಾಹರಣೆಗಳು

ಬೀದರ್, ಕುಲಬುರ್ಗಿ, ರಾಯಚೂರು ಮೊದಲಾದೆಡೆಗಳ ಕನ್ನಡದಲ್ಲಿ ಗಾಡಿದಿ (ಕತ್ತೆ), ನೀಳ್ಳು (ನೀರು), ಪಾಂಬು (ಹಾವು), ಎರಗಡ್ಡೆ (ನೀರುಳ್ಳಿ), ಒಕರುಪಾಯಿ (ಒಂದುರುಪಾಯಿ) ಮೊದಲಾದ ಬಳಕೆಗಳನ್ನು ಕಾಣಬಹುದು. ಇಲ್ಲಿ ತೆಲುಗು ಭಾಷಾ ಪ್ರಭಾವವನ್ನು ಗುರುತಿಸಬಹುದಾಗಿದೆ. ಬೀದರ್ ಕನ್ನಡದಲ್ಲಿ ಒಂದುಹಜಾರ್ (ಒಂದುಸಾವಿರ) ಯಡ್ ಹಜಾರ್ (ಎರಡುಸಾವಿರ), ಪಯಿಲಾದವ (ಮೊದಲಿನವ), ದೂಸ್ರಾದವ (ಎರಡನೆಯವ), ಕೊಲ್ಲಿಹಾಕು (ಕೊಂದುಹಾಕು-ಮಾರ್ಡಾಲೋ) ಮೊದಲಾದುವು ಉರ್ದು ಭಾಷಾ ಪ್ರಭಾವಕ್ಕೆ ದೃಷ್ಟಾಂತಗಳು. ಬೆಳಗಾವಿ ಕನ್ನಡದಲ್ಲಿ ಕಾಣುವ ಹೋಗಾಕ ಹತ್ತಿದ (ಹೋಗುತ್ತಿದ್ದನು), ಹೇಳಾಕ ಹತ್ತಿದ (ಹೇಳುತ್ತಿದ್ದಾನೆ)ಎಂಬಂಥ ಪ್ರಯೋಗಗಳು ಮರಾಠಿ ಭಾಷಾ ಪ್ರಭಾವಕ್ಕೆ ನಿದರ್ಶನಗಳು.

ಪ್ರಾದೇಶಿಕವಾಗಿ ಮಾತ್ರವಲ್ಲ ಸಾಮಾಜಿಕವಾಗಿಯೂ ಭಾಷೆಯಲ್ಲಿ ಉಪಭಾಷೆಗಳು ತಲೆದೋರುತ್ತವೆ. ಆಯಾ ಸಮಾಜದ ವಿಶಿಷ್ಟವಾದ ಉಪಭಾಷೆಗೆ ಸಾಮಾಜಿಕ ಉಪಭಾಷೆಯೆಂದು ಹೆಸರು. ಗೌಡ ಕನ್ನಡ, ಹಾಲಕ್ಕಿ ಕನ್ನಡ, ಬ್ಯಾರ ಕನ್ನಡ, ಹವ್ಯಕ ಕನ್ನಡ, ಕೋಟೆ ಕನ್ನಡ, ಕೋಟ ಕನ್ನಡ ಹೀಗೆ ಹತ್ತು ಹಲವು ಸಾಮಾಜಿಕ ಉಪಭಾಷೆಗಳು ಕನ್ನಡದಲ್ಲಿವೆ. ಈ ಉಪಭಾಷೆಗಳಲ್ಲಿ ಒಂದು ಮತ್ತೊಂದರಂತಿಲ್ಲ. ಇವುಗಳಲ್ಲಿ ಒಂದು ಮೇಲಲ್ಲ, ಇನ್ನೊಂದು ಕೀಳಲ್ಲ. ಭಾಷಾ ರಚನೆಯ ದೃಷ್ಟಿಯಿಂದ ಇವೆಲ್ಲವೂ ಒಂದೇ ಭಾಷೆ ಎನಿಸಿವೆ. ಆದುದರಿಂದ ಈ ಉಪಭಾಷೆಗಳನ್ನೆಲ್ಲ ಸೇರಿಸಿ ಮೊತ್ತದಲ್ಲಿ 'ಕನ್ನಡ' ಎಂದು ಕರೆಯುತ್ತೇವೆ. ಸಾಹಿತ್ಯರಚನೆ, ಆಡಳಿತ, ವಿದ್ಯಾಭ್ಯಾಸ, ಮುಂತಾದ ಕ್ಷೇತ್ರಗಳಲ್ಲಿ ಎಲ್ಲ ಉಪಭಾಷಾ ಪ್ರದೇಶದವರಿಗೂ ಅರ್ಥವಾಗುವ ಸಲುವಾಗಿ ಬಳಸುವ ಕನ್ನಡವನ್ನು 'ಶಿಷ್ಟ ಕನ್ನಡ' ಎನ್ನುತ್ತೇವೆ.

ಆಧುನಿಕ ಭಾರತೀಯ ಭಾಷೆಗಳಲ್ಲಿ ಕನ್ನಡಕ್ಕೆ ಗಣನೀಯ ಸ್ಥಾನವಿದೆ. ಅದು ಪ್ರಾಚೀನತೆಯ ದೃಷ್ಟಿಯಿಂದಲೂ ಮಹತ್ವದ ಸ್ಥಾನವನ್ನು ಹೊಂದಿದೆ. ಹಳಮೆಯ ದೃಷ್ಟಿಯಿಂದ ಭಾರತೀಯ ಭಾಷೆಗಳಲ್ಲಿ ಸಂಸ್ಕೃತಕ್ಕೆ ಮೊದಲ ಸ್ಥಾನ ಸಂದಿದೆ. ಎರಡನೇ ಸ್ಥಾನ ತಮಿಳಿಗೆ ಮತ್ತು ಮೂರನೇ ಸ್ಥಾನ ಕನ್ನಡಕ್ಕೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯೆಂಬ ಗೌರವದ ಸ್ಥಾನಮಾನವೂ ಸಂದಿದೆ. ಸುಮಾರು ೧೬೫೦ ವರ್ಷಗಳ ಭವ್ಯ ಸಾಹಿತ್ಯ ಪರಂಪರೆಗೆ ವಾಹಕವಾದ ಮತ, ತತ್ತ್ವ, ವ್ಯಾಕರಣ, ವೈದ್ಯ, ಜ್ಯೋತಿಷ್ಯ ಮುಂತಾದ ಶಾಸ್ತ್ರ ಗ್ರಂಥಗಳ ರಚನೆಗೆ ಬಳಕೆಗೊಂಡ ಕನ್ನಡ ಭಾಷೆ ಒಂದು ಸಮೃದ್ಧ ಭಾಷೆಯೇ ಸರಿ. ಆಧುನಿಕ ಯುಗದ ಅಗತ್ಯಕ್ಕನುಗುಣವಾಗಿ ಜ್ಞಾನ ಭಂಡಾರದ ವಿವಿಧ ಮುಖಗಳ ಅಭಿವ್ಯಕ್ತಿಗೂ ಕನ್ನಡ ಸಮರ್ಥವಾಗಿದೆಯೆನ್ನುವುದರಲ್ಲಿ ಅನುಮಾನವಿಲ್ಲ. ಬಹುಭಾಷಾ ಪರಿಸರದಲ್ಲಿ ಜೀವಂತವಾಗಿರುವ ಕನ್ನಡ ಭಾಷೆಯು ಭಾಷಾ ಸಾಮರಸ್ಯದ ವಿಷಯದಲ್ಲಿ ತೋರಿದ ನಿಲುಮೆ ಪ್ರಶಂಸನೀಯವಾಗಿದೆ.

## ಲೇಖಕರ ಪರಿಚಯ



'ಕನ್ನಡ ಭಾಷೆ' ಎಂಬ ಈ ಪಾಠಭಾಗದ ಲೇಖಕರು ಡಾ. ಪಿ. ಶ್ರೀಕೃಷ್ಣ ಭಟ್. ಇವರು ೨೩-೦೧-೧೯೪೩ ರಂದು ಕಾಸರಗೋಡು ಜಿಲ್ಲೆಯ ಕುಂಬ್ಡಾಜೆ ಗ್ರಾಮದ ಪುತ್ರೋಡಿ ಎಂಬಲ್ಲಿ ಜನಿಸಿದರು. ಕಾಸರಗೋಡು ಸರಕಾರಿ ಕಾಲೇಜಿನ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ, ವಿಭಾಗ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ತಮ್ಮ ಔದ್ಯೋಗಿಕ ನಿವೃತ್ತಿಯ ಬಳಿಕ ಕಣ್ಣೂರು ವಿಶ್ವವಿದ್ಯಾಲಯದ ಭಾರತೀಯ ಭಾಷಾ ಅಧ್ಯಯನಾಂಗದ ನಿರ್ದೇಶಕರಾಗಿ ದುಡಿದಿದ್ದಾರೆ. ಕೇರಳ ಮತ್ತು ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸಮಿತಿ ಹಾಗೂ ಪರೀಕ್ಷಾ ಮಂಡಳಿಗಳಲ್ಲಿ ದುಡಿದು ಅನುಭವವಿರುವ ಡಾ. ಶ್ರೀಕೃಷ್ಣ ಭಟ್ ಇವರು, ಕೇರಳ ರಾಜ್ಯದ ಶಾಲಾ ಕನ್ನಡ ಪಠ್ಯಪುಸ್ತಕ ರಚನೆ ಸಮಿತಿಯಲ್ಲಿ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ತೊಡಗಿಸಿಕೊಂಡವರು. ಹಳೆಗನ್ನಡ ಸಾಹಿತ್ಯ, ಛಂದಸ್ಸು, ಭಾಷಾಶಾಸ್ತ್ರ, ಸಂಶೋಧನೆ - ಈ ಮೊದಲಾದ ಕ್ಷೇತ್ರಗಳಲ್ಲಿ ಅಧ್ಯಯನ ನಡೆಸಿರುವವರು. ಕನ್ನಡ ವ್ಯಾಕರಣ ಪರಂಪರೆಯ ಮೇಲೆ ಸಂಸ್ಕೃತದ ಪ್ರಭಾವ, ಶಾಸ್ತ್ರ ಸಾಹಿತ್ಯ ವಿಹಾರ, ಅವಲೋಕನ, ಕಾಸರಗೋಡಿನ ಕಣ್ಮಣಿ ಕಳ್ಳಿಗೆ ಮಹಾಬಲ ಭಂಡಾರಿ, ಅಭಿಜಾತ ಕಾವ್ಯ ವ್ಯಾಖ್ಯಾನಕಾರ ಪ್ರೊ. ಪಿ. ಸುಬ್ರಾಯ ಭಟ್ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಹಲವು ಗ್ರಂಥಗಳ ಸಂಪಾದಕರಾಗಿ ದುಡಿದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಡಾ. ಟಿ ವಿ ವೆಂಕಟಾಚಲ ಶಾಸ್ತ್ರೀ ವಿದ್ವತ್ ದತ್ತಿ ಪ್ರಶಸ್ತಿ, ಸೇಡಿಯಾಪು ಪ್ರಶಸ್ತಿ, ಶಂಕರ ಸಾಹಿತ್ಯ ಪ್ರಶಸ್ತಿ, ಕೇಶವ ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಮಗು ಭಾಷೆಯನ್ನು ಹೇಗೆ ಕಲಿಯುತ್ತದೆ?
2. ಜೀವಂತ ಭಾಷೆ ಮತ್ತು ಮೃತ ಭಾಷೆಗಳೊಳಗಣ ವ್ಯತ್ಯಾಸವೇನು?
3. 'ಉಪಭಾಷೆ' ಎಂದು ಯಾವುದನ್ನು ಕರೆಯುತ್ತಾರೆ?
4. ಯಾವುದನ್ನು 'ಶಿಷ್ಟ ಕನ್ನಡ' ಎಂದು ಕರೆಯುತ್ತೇವೆ?

## ಟಿಪ್ಪಣಿ ಬರೆಯಿರಿ

ಪಾಠದ ಆಧಾರದಲ್ಲಿ ಕನ್ನಡದ ಭಾಷಾ ವೈವಿಧ್ಯಗಳ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

## ಭಾಷಣ ಸಿದ್ಧಪಡಿಸಿರಿ

"ಕನ್ನಡದಲ್ಲಿ ಭಾಷಾ ಸಾಮರಸ್ಯ" ಎಂಬ ವಿಷಯದ ಕುರಿತು ಒಂದು ಲಿಖಿತ ಭಾಷಣ ಸಿದ್ಧಪಡಿಸಿರಿ.

## ಘೋಷಣ ವಾಕ್ಯ ರಚಿಸಿರಿ

ಕನ್ನಡ ಭಾಷೆಯ ಮೇಲೆ ಅಭಿಮಾನ ಮೂಡಿಸುವ ಎರಡು ಘೋಷಣ ವಾಕ್ಯಗಳನ್ನು ಬರೆಯಿರಿ.

## ಭಾವನಾಮಗಳನ್ನು ಬರೆಯಿರಿ

ಮಾದರಿ : ಕರುಣೆ - ಕಾರುಣ್ಯ

ವಿವಿಧ -

ವಿಶಿಷ್ಟ -

ಲಲಿತ -

ಸಮರ್ಥ -

ಪ್ರಧಾನ -

ಸಮರಸ -

* * *

# ಭ್ರಾತೃಪ್ರೇಮ

**ಪಾರ್ತಿಸುಬ್ಬ**

**ಕಥಾ ಸಂದರ್ಭ:**

ಪಿತೃವಾಕ್ಯ ಪರಿಪಾಲನೆಗಾಗಿ ಕಾಡಿಗೆ ಹೊರಟ ಶ್ರೀರಾಮನನ್ನು ಪತ್ನಿ ಸೀತೆ ಹಾಗೂ ತಮ್ಮ ಲಕ್ಷ್ಮಣ ಅನುಸರಿಸುತ್ತಾರೆ. ಅವರು ವನವಾಸಕ್ಕೆ ತೆರಳಿದ ಸಂದರ್ಭದಲ್ಲಿ ತಮ್ಮನಾದ ಭರತನು ಅಯೋಧ್ಯೆಗೆ ಆಗಮಿಸಿ ಅಲ್ಲಿನ ಆಗುಹೋಗುಗಳನ್ನು ತಿಳಿಯುತ್ತಾನೆ. ಇದಕ್ಕೆಲ್ಲಾ ಕಾರಣ ತನ್ನ ತಾಯಿ ಕೈಕೇಯಿಯೆಂದು ತಿಳಿದು ಆಕೆಯನ್ನು ಹಳಿಯುತ್ತಾನೆ. ಆಗ ಗುರುಗಳಾದ ವಸಿಷ್ಠರು ಅವನನ್ನು ಸಾಂತ್ವನಗೊಳಿಸುತ್ತಾರೆ. ಏನು ಹೇಳಿದರೂ ಸಮಾಧಾನಗೊಳ್ಳದ ಭರತನು ಅಣ್ಣನನ್ನು ಕಾಡಿನಿಂದ ಮರಳಿ ರಾಜ್ಯಕ್ಕೆ ಕರೆತರುತ್ತೇನೆಂದು ಕಾಡಿನತ್ತ ಪ್ರಯಾಣ ಬೆಳೆಸುತ್ತಾನೆ. ಅವನೊಂದಿಗೆ ತಾಯಂದಿರು, ಪುರಜನರು, ಮಂತ್ರಿಗಳು, ಗುರುಗಳು ಜೊತೆಗೂಡುತ್ತಾರೆ. ಆಕಾಶದೆತ್ತರಕ್ಕೆ ಹಾರಲಾರಂಭಿಸಿದ ಧೂಳನ್ನು ಕಂಡು ಶ್ರೀರಾಮನು ಲಕ್ಷ್ಮಣನೊಡನೆ ಇದೇನೆಂದು ಸಮೀಪದ ವೃಕ್ಷವನ್ನೇರಿ ನೋಡಲು ಹೇಳುತ್ತಾನೆ. ವೃಕ್ಷವನ್ನೇರಿದ ಲಕ್ಷ್ಮಣನು ಭರತನು ಬರುವುದನ್ನು ಗಮನಿಸಿ "ಅಣ್ಣಾ, ಭರತನು ಅಧಿಕಾರದ ಅಹಂಕಾರದಿಂದ ಸೈನ್ಯದೊಂದಿಗೆ ಬರುತ್ತಿದ್ದಾನೆ. ನೀನು ಅಪ್ಪಣೆ ಕೊಟ್ಟರೆ ಈ ಕ್ಷಣವೆ ಆತನನ್ನು ಎದುರಿಸುತ್ತೇನೆ" ಎನ್ನುತ್ತಾನೆ. ಆಗ ಶ್ರೀರಾಮನು ಭರತನ ಬಗ್ಗೆ ಈ ರೀತಿಯ ಮನೋಭಾವ ಸಲ್ಲದು, ಎಂದು ಹೇಳುವಷ್ಟರಲ್ಲಿಯೇ ಭರತನು ಅವರ ಕುಟೀರದ ಬಳಿ ಬರುತ್ತಾನೆ. ಬಂದವರನ್ನು ಶ್ರೀರಾಮನು ಸ್ವಾಗತಿಸಿ ಹೀಗೆ ವಿಚಾರಿಸುತ್ತಾನೆ -

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಬಂದೆಯಾ ಇನವಂಶವಾರಿಧಿ । ಚಂದ್ರ ನಾ ಬರುವಾಗ ನಿನ್ನೊಡ । ನೆಂದುದಿಲ್ಲವೆನುತ್ತ ಮನದಲಿ ನೊಂದೆಯೇನೈ ॥೧॥

ಏನು ಮುಖದಲಿ ಕಾಂತಿ ತಗ್ಗಿತು। ನೀನು ಜನನಿಯರೊಡನೆ ನಾನಿಹ। ಕಾನನಾಂತಕೆ ಬಂದುದೇತಕೆ। ಮಾನನಿಧಿಯೆ ॥೨॥



(ಆಗ ಭರತನು ಹೀಗೆ ಉತ್ತರಿಸುತ್ತಾನೆ)

॥ರಾಗ ಬೇಹಾಗ್ ಏಕತಾಳ॥

ಅಣ್ಣಾಶ್ರಿತ ಪೋಷ ಕೇಳು । ನಿನ್ನ ಪಿತ ಕಳುಹಿದ ಮೇಲೆ । ಅನ್ನವುಣ್ಣದೆಂಟು ದಿನಕೆ । ಇನ್ನು ನಾನು ಹೇಳಬೇಕೆ ॥೩॥

ಇನಕುಲಾಧಿಪನಿಂದಿಗೆ । ದಿನ ಮೂರಾಯ್ತು ನೀನಿಲ್ಲದೆ । ಮನ:ಕ್ಲೇಶದಿಂದ ಕರಗಿ । ಅನಿಮಿಷರ ಪುರಕೈದಿದನು ॥೪॥

(ಹೀಗೆ ತಂದೆಯ ಅಗಲಿಕೆಯ ವಾರ್ತೆಯನ್ನು ತಿಳಿದ ಶ್ರೀರಾಮನು ಮೂರ್ಛಿತನಾಗುತ್ತಾನೆ. ಬಳಿಕ ಎಲ್ಲರ ಉಪಚಾರದಿಂದ ಎಚ್ಚೆತ್ತು, ತಂದೆಯ ಮರಣದ ಬಳಿಕ ಮಾಡಬೇಕಾದ ಧಾರ್ಮಿಕ ಕ್ರಿಯೆಗಳನ್ನು ಮಾಡುತ್ತಾನೆ)

॥ವಾರ್ಧಕ॥

ವೇದೋಕ್ತ ಮಂತ್ರದಿಂದಪರ ಕರ್ಮಂಗಳಂ । ಸಾಧಿಸಿಯೆ ದಾನ ದಕ್ಷಿಣೆ ಹೋಮ ನೇಮದಿಂ। ಮೇದಿನೀಶಗೆ ಸ್ವರ್ಗಮಂ ಕೊಡಿಸಿ ಸಕಲ ಪಿತೃಜನರ ಸಂತುಷ್ಟಿ ಪಡಿಸಿ ॥ ಆ ದಿವಸ ಉಪವಾಸದಿಂದಿರ್ದು ಮರುದಿನದೊ । ಳಾ ದಯಾಂಬುಧಿ ರಾಮ ಕೌಸಲ್ಯೆ ಸುಮಿತ್ರೆಯರ । ಪಾದಕೆರಗುತ ಸಕಲ ಮುನಿಜನರ ಮುಂದೆ ಧೈರ್ಯೋದ್ಧಾಮನಿಂತೆಂದನು ॥೫॥

॥ರಾಗ ತೋಡಿ ಏಕತಾಳ॥

ಬಂದುದು ಲೇಸಾಯ್ತು ನೀವು । ಹೀಗಾದ ಮೇಲೆ । ನೊಂದು ಮಾಳ್ಪುದಿನ್ನೇನು ನಾವು ॥ ಎಂದಿಗಾದರೊಂದು ದಿನ ಸಿದ್ಧ । ಈ ದೇಹ ನಾಶ । ಹೊಂದದೇ ನಿಲ್ಲದು ಬದ್ಧ॥೬॥ ತೆರಳಿ ನೀವೆಲ್ಲ ಊರಿಗೆ । ನಾ ಬಹೆನೆಂದು । ವರುಷ ಈರೇಳರ ಮೇಲಲ್ಲಿಗೆ ॥

ಕಂದ ಪೋಗಯೋಧ್ಯಾನಗರಕ್ಕೆ । ಆನೆ ಕುದುರೆ । ಮಂದಿ ರಾಜ್ಯವನಾಳುವುದಕ್ಕೆ । ಅಂದಿನ ದಿನಕೆ ನಾನು ಲಕ್ಷ್ಮಣ । ಜಾನಕಿ ಸಹಿತ । ಬಂದೇನು ಪಟ್ಟಣಕೆ ತಕ್ಷಣ ॥೭॥

॥ರಾಗ ಕೇದಾರಗೌಳ ಅಷ್ಟತಾಳ॥

ನಿರ್ಮಲದಲಿ ಜ್ಯೇಷ್ಠಸುತನಿರಲಾತನ । ತಮ್ಮಗೆ ರಾಜ್ಯವುಂಟೆ ॥ ಸಮ್ಮತವಲ್ಲದಿದ್ದರೆ ನಾನಯೋಧ್ಯೆಗೆ । ಜನ್ಮಾಂತರಕು ಪೋಗೆನು ॥೮॥

॥ರಾಗ ಭೈರವಿ ಝಂಪೆತಾಳ॥

ಪಿತನ ವಾಕ್ಯವ ಮೀರಿ ಪಿಂತೆ ನಡೆದವರುಂಟೆ । ಅತಿರೇಕವಿದು ಲೋಕಕತಿ ಚೋದ್ಯವಯ್ಯ ॥ ೯॥

ಹದಿನಾಲ್ಕು ವತ್ಸರದ ತುದಿಯ ಮರುದಿನ ಬಂದು । ವದಗುವೆನು ಪಟ್ಟಣಕೆ ಇದು ಕಪಟವಲ್ಲ ॥೧೦॥

## ಕವಿ ಪರಿಚಯ



ಪಾರ್ತಿಸುಬ್ಬನು ಪ್ರಸಿದ್ಧ ಯಕ್ಷಗಾನ ಕವಿ. ಕಾಸರಗೋಡು ತಾಲೂಕಿನ ಕುಂಬಳೆಯಲ್ಲಿದ್ದ ಇವನ ಕಾಲ ೧೭೫೦ ರಿಂದ ೧೮೩೦ ಎನ್ನಲಾಗುತ್ತಿದೆ. ಇವನ ತಾಯಿಯ ಹೆಸರು ಪಾರ್ವತಿ. ತಾಯಿಯ ಹೆಸರಿನಿಂದಲೇ ಪಾರ್ತಿಸುಬ್ಬ ಎಂಬ ಹೆಸರು ಬಂದಿದೆ ಎನ್ನಲಾಗುತ್ತಿದೆ. ಈತನ ಎಲ್ಲ ಕೃತಿಗಳಲ್ಲೂ ಕಣ್ವಪುರೇಶನ ಅಂಕಿತವಿದೆ. ಈತ ಭಾಗವತನಾಗಿದ್ದನೆಂದೂ ಬಳಿಕ ಕನ್ನಡ ಯಕ್ಷಗಾನ ಪ್ರಸಂಗಗಳನ್ನು ರಚಿಸಿ ಕಣಿಪುರ ದೇವಸ್ಥಾನದಿಂದ ಸ್ಥಾಪನೆಗೊಂಡ ಕುಂಬಳೆ ದಶಾವತಾರ ಮೇಳದಲ್ಲಿ ಭಾಗವತನಾಗಿದ್ದನೆಂದೂ ಪ್ರತೀತಿ. ಯಕ್ಷಗಾನ ಪ್ರಯೋಗಗಳಿಗೆ ಶಾಸ್ತ್ರೀಯವಾಗಿ ಸಂಸ್ಕಾರ ನೀಡಿ ತೆಂಕುತಿಟ್ಟು ಯಕ್ಷಗಾನ ಪದ್ಧತಿಯನ್ನು ರೂಪಿಸಿದವನು ಪಾರ್ತಿಸುಬ್ಬ ಎಂದು ತಿಳಿಯಲಾಗಿದೆ. ಪುತ್ರಕಾಮೇಷ್ಠಿ, ಸೀತಾಸ್ವಯಂವರ, ಶ್ರೀರಾಮ ಪಟ್ಟಾಭಿಷೇಕ, ಪಂಚವಟಿ-ವಾಲಿಸಂಹಾರ, ಉಂಗುರಸಂಧಿ, ಸೇತುಬಂಧನ, ಅಂಗದ ಸಂಧಾನ, ಕುಂಭಕರ್ಣ ಕಾಳಗ, ಕುಶಲವ ಕಾಳಗ, ಶ್ರೀಕೃಷ್ಣ ಚರಿತೆ (ಶ್ರೀಕೃಷ್ಣ ಬಾಲಲೀಲೆಯಿಂದ ತೊಡಗಿ ಗೋಪಿಕಾ ವಸ್ತ್ರಾಪಹರಣದ ವರೆಗಿನ ಕಥಾಭಾಗ) ಮುಂತಾದುವು ಈತನ ಯಕ್ಷಗಾನ ಕೃತಿಗಳು. ಪ್ರಸ್ತುತ ಪಾಠಭಾಗವನ್ನು 'ಪಾರ್ತಿಸುಬ್ಬ ಕವಿಯ ಯಕ್ಷಗಾನ ಪ್ರಸಂಗಗಳು' ಎಂಬ ಕೃತಿಯಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಭರತನನ್ನು ಕಂಡ ಶ್ರೀರಾಮನು ಆತನಲ್ಲಿ ಏನೆಂದು ಪ್ರಶ್ನಿಸುತ್ತಾನೆ?
2. ಅಣ್ಣನ ಪ್ರಶ್ನೆಗಳಿಗೆ ಭರತನ ಉತ್ತರವೇನು?
3. ಬೇಸರದಿಂದಿರುವ ಭರತನನ್ನು ಶ್ರೀರಾಮನು ಸಮಾಧಾನಪಡಿಸಿದ ಬಗೆ ಹೇಗೆ?
4. ಭರತನಿಗೆ ರಾಮನು ಏನು ನಿರ್ದೇಶಿಸುತ್ತಾನೆ?

## ಅರ್ಥಗಾರಿಕೆ ಬರೆಯಿರಿ

ಕೆಳಗೆ ನೀಡಲಾದ ಪದ್ಯದ ಅರ್ಥವನ್ನು ತಾಳಮದ್ದಳೆಯ ಅರ್ಥಗಾರಿಕೆಯ ರೂಪದಲ್ಲಿ ಬರೆಯಿರಿ.

ಬಂದೆಯಾ ಇನವಂಶವಾರಿಧಿ ...... ....... ಮಾನನಿಧಿಯೆ।

## ಪಾತ್ರಚಿತ್ರಣ ಮಾಡಿರಿ

ಈ ಪಾಠದಲ್ಲಿ ಬರುವ ಭರತನ ಪಾತ್ರ ಚಿತ್ರಣ ಮಾಡಿರಿ.

## ವಿಮರ್ಶಾ ಲೇಖನ ಬರೆಯಿರಿ

'ಯಕ್ಷಗಾನವು ಸಾಹಿತ್ಯ-ಸಂಗೀತ ಮತ್ತು ನೃತ್ಯಗಳನ್ನೊಳಗೊಂಡ ಸರ್ವಾಂಗ ಸುಂದರ ಕಲೆ' - ಈ ಹೇಳಿಕೆಯ ಕುರಿತು ವಿಮರ್ಶಾ ಲೇಖನ ಬರೆಯಿರಿ.

## ತೌಲನಿಕ ಲೇಖನ ಬರೆಯಿರಿ

ಯಕ್ಷಗಾನವನ್ನು ಕಥಕ್ಕಳಿಯೊಂದಿಗೆ ಹೋಲಿಸಿ ತೌಲನಿಕ ಲೇಖನವನ್ನು ಬರೆಯಿರಿ.

## ತಾಳಮದ್ದಳೆ ಮಾಡಿರಿ

'ಭ್ರಾತೃಪ್ರೇಮ' ಪಾಠಭಾಗವನ್ನು ತಾಳಮದ್ದಳೆ ರೂಪದಲ್ಲಿ ತರಗತಿಯಲ್ಲಿ ಪ್ರಸ್ತುತ ಪಡಿಸಿರಿ. ಅದರ ವಿಡಿಯೋ ಚಿತ್ರೀಕರಿಸಿ ಬ್ಲಾಗ್ ನಲ್ಲಿ ಪ್ರದರ್ಶಿಸಿರಿ.

## ಸಮಾಸ ತಿಳಿಯಿರಿ

ಮುಕ್ಕಣ್ಣ - ಮೂರು ಕಣ್ಣು ಉಳ್ಳವನು

ಮೇಲೆ ನೀಡಲಾದ 'ಮುಕ್ಕಣ್ಣ' ಎಂಬ ಪದವನ್ನು 'ಮೂರು ಕಣ್ಣು ಉಳ್ಳವನು' ಎಂದು ವಿಗ್ರಹಿಸಿ ಬರೆಯಬಹುದು. ಇಲ್ಲಿ ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾಗುತ್ತದೆ. ಇದರಲ್ಲಿ ಸೇರುವ ಪದಗಳ ಅರ್ಥವು ಪ್ರಧಾನವಾಗಿರದೆ ಬೇರೊಂದು ಅರ್ಥವು ಪ್ರಧಾನವಾಗಿ ಬರುತ್ತದೆ. ಈ ರೀತಿಯ ಸಮಾಸವನ್ನು ಬಹುವ್ರೀಹಿ ಸಮಾಸ ಎನ್ನುತ್ತಾರೆ.

ಈ ಕೆಳಗೆ ಕೊಡಲಾದ ಪದಗಳನ್ನು ವಿಗ್ರಹಿಸಿ ಬರೆದು ಬಹುವ್ರೀಹಿ ಸಮಾಸವಾಗುವ ಪದಗಳನ್ನು ಗುರುತಿಸಿರಿ.

- ತಂಬೆಳಕು
- ನಾಗಾಭರಣ
- ಇನವಂಶ
- ವೀಣಾಪಾಣಿ
- ಮರಗಿಡಬಳ್ಳಿಗಳು.
- ದಶಾನನ

* * *

# ಕನ್ನಡ ಮತ್ತು ಕರ್ನಾಟಕ ಸಂಗೀತ



ಕರ್ನಾಟಕ ಸಂಗೀತ ಮತ್ತು ಹಿಂದುಸ್ತಾನಿ ಸಂಗೀತಗಳೆಂಬುದು ಭಾರತೀಯ ಸಂಗೀತದ ಎರಡು ಮುಖ್ಯ ಪ್ರಕಾರಗಳು. ಕರ್ಣಾಟಕ ಸಂಗೀತವು ಈಗ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳಗಳಲ್ಲಿ ವಿಶೇಷವಾಗಿ ಪ್ರಚಾರದಲ್ಲಿವೆ. ಗಾಯನ, ವಾದನ, ನಾಟ್ಯ, ನರ್ತನ, ರಸ, ಭಾವ, ಅಲಂಕಾರ, ಛಂದಸ್ಸು ಮೊದಲಾದ ಎಲ್ಲಾ ಅಂಶಗಳೊಡನೆ ಬೆಳೆದಿರುವ ಈ ಸಂಗೀತ ರೂಪಕ್ಕೆ ಕನ್ನಡಿಗರ ಕೊಡುಗೆ ಪ್ರಮುಖವಾದುದು. ಪ್ರಾಚೀನ ಕಾಲದಿಂದಲೇ ಈ ನಾಡಿನಲ್ಲಿ ದೊರೆತ ವಿಶೇಷ ಪ್ರೋತ್ಸಾಹಗಳು ಕರ್ನಾಟಕ ಸಂಗೀತ ರೂಪುಗೊಳ್ಳಲು ಮುಖ್ಯ ಕಾರಣವಾಗಿವೆ. ಇದರಿಂದಲೇ ಈ ಪ್ರಕಾರದೊಂದಿಗೆ ಕರ್ನಾಟಕದ ಹೆಸರು ಜೊತೆಗೂಡಿಕೊಂಡಿದೆ.



ಕರ್ನಾಟಕದಲ್ಲಿ ಬಹು ಹಿಂದಿನಿಂದಲೂ ಸಂಗೀತಕ್ಕೆ ವಿಶೇಷವಾದ ಮನ್ನಣೆ ಇತ್ತೆಂಬುದು ಹಲವು ಶಾಸನಗಳು ಹಾಗೂ ಸಾಹಿತ್ಯಕ ಉಲ್ಲೇಖಗಳಿಂದ ತಿಳಿಯುತ್ತದೆ. ತಾಳಗುಂದದ ಶಾಸನದಲ್ಲಿ ಕದಂಬ ಶಾಂತಿ ವರ್ಮನ ವೈಭವವನ್ನು ವರ್ಣಿಸುತ್ತ ಅವನ ಮನೆ ಸಂಗೀತದ ಧ್ವನಿಯಿಂದ ತುಂಬಿ ಹೋಗಿತ್ತು ಎಂದು ಹೇಳಿದೆ. ಪಟ್ಟದಕಲ್ಲಿನ ದೇವಸ್ಥಾನದ ಕಂಬದ ಮೇಲಿರುವ ಸುಮಾರು ಕ್ರಿ.ಶ 850 ರ ಶಾಸನ ಒಂದರಲ್ಲಿ ಸ್ತ್ರೀಯರ ವಿದ್ಯಾಭ್ಯಾಸದಲ್ಲಿ ಸಂಗೀತ, ನರ್ತನ ಮುಂತಾದ ಕಲೆಗಳಿಗೆ ಹೆಚ್ಚು ಪ್ರಾಧಾನ್ಯವಿದ್ದುದು ತಿಳಿದು ಬರುತ್ತದೆ. ಹೊಯ್ಸಳ ಸಾಮ್ರಾಟ ವಿಷ್ಣುವರ್ಧನನ ಪತ್ನಿ ಶಾಂತಲೆಯನ್ನು ಸಂಗೀತ ವಿದ್ಯಾಸರಸ್ವತಿ, ಗೀತಾ ವಾದ್ಯ ನೃತ್ಯ ಸೂತ್ರಧಾರಿ ಎಂದು ಅನೇಕ ಶಾಸನಗಳು ವರ್ಣಿಸಿವೆ. ಹಲವು ಅಗ್ರಹಾರಗಳ ಮಹಾಜನರು ಸಂಗೀತ ಕಲಾ ನಿಪುಣರಾಗಿದ್ದರೆಂದೂ ಶಾಸನಗಳಲ್ಲಿ ಹೇಳಿವೆ. ಪಂಪ, ಪೊನ್ನ, ರನ್ನ, ಜನ್ನ ಮೊದಲಾದವರು ರಚಿಸಿರುವ ಕನ್ನಡ ಸಾಹಿತ್ಯ ಗ್ರಂಥಗಳಲ್ಲಿ ಸಂಗೀತದ ವರ್ಣನೆಗಳು ಹೇರಳವಾಗಿ ದೊರಕುತ್ತವೆ. ಅಭಿನವ ಪಂಪನ ಮಲ್ಲಿನಾಥ ಪುರಾಣದಲ್ಲಿ ಬರುವ ಶರತ್ಕಾಲದ ವರ್ಣನೆಯಲ್ಲಿ ವೇಣುಗಾನ ಲೋಲನು ಹಾಡಿದಾಗ ಸಭಿಕರು ಮೈಮರೆತು ರಾಗರಸದಲ್ಲಿ ತಲ್ಲಿನರಾದಂತೆ ವರ್ಣಿಸಿದೆ. ಅಗ್ಗಳನ ಚಂದ್ರಪ್ರಭ ಪುರಾಣದಲ್ಲಿ ಗಾನ ವಿದ್ಯಾವಿಶಾರದನೊಬ್ಬ ತಾಳ, ಸ್ವರ ಲಯಗಳಿಗೆ ಅನುಗುಣವಾಗಿ ಹಾಗೂ ವೀಣೆಯ ನಾದಕ್ಕನುಸಾರವಾಗಿ ಕರ್ಣಾನಂದಕರವಾಗಿ ಹಾಡಿದನೆಂಬ ವರ್ಣನೆ



ಇದೆ. ಸಂಗೀತದ ಗಂಧವನ್ನೇ ಅರಿಯದವರು ಸಂಗೀತ ಕಚೇರಿಯನ್ನು ಪ್ರವೇಶಿಸಿದ ಕೂಡಲೇ ತಮಗೂ ಹಾಡುವ ಮನೋಭಾವವನ್ನುಂಟು ಮಾಡುವಂತೆ ಅಲ್ಲಿಯ ಸಂಗೀತವಿತ್ತೆಂದೂ ವಿವರಿಸಿದೆ. ಹೀಗೆ ಪ್ರಾಚೀನ ಕರ್ನಾಟಕದಲ್ಲಿ ಸಂಗೀತ ಜನಪ್ರಿಯವಾಗಿದ್ದು ವಿಶೇಷ ಪ್ರೋತ್ಸಾಹವನ್ನು ಗಳಿಸಿದೆ ಎಂಬುದನ್ನು ಶಾಸನಗಳು ಮತ್ತು ಸಾಹಿತ್ಯದ ಉಲ್ಲೇಖಗಳು ಸೂಚಿಸುತ್ತವೆ.



ವಿಜಯನಗರದ ಅರಸರ ಕಾಲದಲ್ಲಿ ಕರ್ನಾಟಕ ಸಂಗೀತದ ಸ್ಪಷ್ಟ ರೂಪ ರೇಖೆಗಳು ವಿಶಿಷ್ಟ ಆವಿಷ್ಕಾರಗಳೊಡನೆ ರೂಪತಳೆದುವು. ಅವರ ಪ್ರೋತ್ಸಾಹದ ನೆರಳಿನಲ್ಲಿ ಈ ನಾಡಿನ ಸಂಗೀತದ ಶಾಸ್ತ್ರೀಯ ನಿರೂಪಣೆ ಹೆಚ್ಚಿನ ಮಟ್ಟಿಗೆ ಸಾಗಿತು. ಇದೇ ಈ ಸಂಗೀತ ಪ್ರಕಾರಕ್ಕೆ ಕರ್ನಾಟಕ ಸಂಗೀತ ಎಂಬ ಹೆಸರು ಬರಲು ಕಾರಣವಾಗಿರಬೇಕು ಎಂಬ ಊಹೆ ಇದೆ. ಅದರಲ್ಲೂ ಕರ್ನಾಟಕ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ ವಿದ್ಯಾರಣ್ಯರು ದಕ್ಷಿಣಾದಿ ಸಂಗೀತವನ್ನು ಪುನರುತ್ಥಾನ ಮಾಡಿದ ಮಹಾಮಹಿಮರು. ಇವರು ಸಂಗೀತಸಾರವೆಂಬ ಗ್ರಂಥ ಬರೆದಿದ್ದರಂತೆ. ಅದು ಈಗ ಅನುಪಲಬ್ದವಾದರೂ ಅವರು ಕರ್ನಾಟಕ ಸಂಗೀತವೆಂಬ ಹೆಸರಿನಲ್ಲಿ ದಕ್ಷಿಣಾದಿ ಸಂಗೀತ ನೆಲೆಗೊಳ್ಳಲು ಅಂಕುರಾರ್ಪಣ ಮಾಡಿದವರು ಎಂದು ತಿಳಿಯಲಾಗಿದೆ. ಇವರು ಆರಂಭಿಸಿದ ಅಥವಾ ಸ್ಪುಟ ಪಡಿಸಿದ ಸಂಗೀತ ಪದ್ಧತಿಯನ್ನು ಕರ್ನಾಟಕ ಸಂಗೀತವೆಂದು ಜನ ಕರೆದಿದ್ದಿರಬಹುದು ಎಂಬ ಹೇಳಿಕೆಯೂ ಇದೆ.

ಪುರಂದರದಾಸರು ಕರ್ನಾಟಕ ಸಂಗೀತ ಪದ್ಧತಿಯ ಪಿತಾಮಹರು ಎಂದು ಹೆಸರಾದವರು. ಅವರು ಕರ್ನಾಟಕದವರು ಹಾಗೂ ದಾಸ ಪದ್ದತಿಯ ಪ್ರಮುಖರು. ಮುಖ್ಯವಾಗಿ ಪುರಂದರದಾಸ, ಶ್ರೀಪಾದರಾಯರು, ಕನಕದಾಸ, ಜಗನ್ನಾಥದಾಸ ಮೊದಲಾದವರು ಸಂಗೀತದ ಮೂಲಕ ಭಕ್ತಿ ಮಾರ್ಗವನ್ನು ಬೋಧಿಸಿದವರು. ಸಾವಿರಾರು ಕೀರ್ತನೆಗಳನ್ನು ರಚಿಸಿದ ಪುರಂದರದಾಸರ ಸುಮಾರು ಒಂದು ಸಾವಿರ ಕೀರ್ತನೆಗಳು ಇಂದಿಗೂ ಉಳಿದಿವೆ. ಇವರ ಎಲ್ಲಾ ಕೀರ್ತನೆಗಳು ಕನ್ನಡ ಭಾಷೆಯಲ್ಲಿದ್ದು ಭಕ್ತಿ ಮಾರ್ಗವನ್ನು ಜನಸಾಮಾನ್ಯರಿಗೆ ಪರಿಚಯ ಮಾಡಿ ಕೊಡುವ ಉದ್ದೇಶವನ್ನು ಹೊಂದಿವೆ. ಕರ್ನಾಟಕ ಸಂಗೀತದ ಪಠ್ಯಕ್ರಮವನ್ನು ರೂಪಿಸಿದ ಕೀರ್ತಿ ಶ್ರೀ ಪುರಂದರದಾಸರಿಗೆ ಸಲ್ಲುತ್ತದೆ. ಈ ಪಾಠಕ್ರಮವು ಇಂದಿಗೂ ರೂಢಿಯಲ್ಲಿದೆ. ಇವರು ತಮ್ಮ ಸಂಗೀತ ರಚನೆಯ ಮೂಲಕ ಜನಜಾಗೃತಿಯನ್ನು ಮೂಡಿಸಿದವರು. ಪುರಂದರ ದಾಸರು ತನ್ನ ಕೀರ್ತನೆಗಳ ಮೂಲಕ ಲೌಕಿಕ ತತ್ವಗಳನ್ನು ಉಪದೇಶಿಸಿದ್ದಾರೆ. ಆಧ್ಯಾತ್ಮಿಕ ತತ್ವಗಳನ್ನು ನಿರೂಪಿಸಿದ್ದಾರೆ, ಭಾವೈಕ್ಯವನ್ನು ಸಾರಿದ್ದಾರೆ.



ಕರ್ನಾಟಕ ಸಂಗೀತವು ಮನಮುಟ್ಟುವ ಕಲೆಯಾಗಿ ಮೂಡಿದುದರ ಜೊತೆಗೆ ಅದು ಸಂಸ್ಕೃತಿಯ ವಾಹಕವಾಗಿಯೂ ಬೆಳೆದಿದೆ. ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿಯೂ ಪ್ರಧಾನ ಪಾತ್ರವಹಿಸಿದೆ. ಒಟ್ಟಿನಲ್ಲಿ ಕಲೆ, ಸಂಸ್ಕೃತಿ ಹಾಗೂ ಭಾಷೆಗಳು ಪರಸ್ಪರ ಪೂರಕ ವಾಗಿಯೇ ಕರ್ನಾಟಕ ಸಂಗೀತದಿಂದ ಕನ್ನಡ ಭಾಷೆಯೂ ಕನ್ನಡ ಭಾಷೆಯ ಮೂಲಕ ಸಂಸ್ಕೃತಿಯೂ ಸಂಪನ್ನವಾಗಿವೆ.

ಪುರಂದರದಾಸರು ನಿರ್ಮಿಸಿದ ಉತ್ತಮ ನೀತಿ ಬೋಧನೆಯ ಕೀರ್ತನೆಯೊಂದು ಹೀಗಿದೆ.

ಮಾನವ ಜನ್ಮವು ದೊಡ್ಡದು

ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ

ಕಣ್ಣು ಕೈ ಕಾಲ್ಕಿವಿ ನಾಲಿಗೆ ಇರಲಿಕ್ಕೆ

ಮಣ್ಣು ಮುಕ್ಕಿ ಹುಚ್ಚರಾಗುವರೆ

ಕಾಲನ ದೂತರು ಕಾಲ್ಪಿಡಿದೆಳೆವಾಗ

ತಾಳು ತಾಳೆಂದರೆ ತಾಳುವರೆ.

ಧಾಳಿ ಬರುವ ಮುನ್ನ ಧರ್ಮವ ಗಳಿಸಿರೋ

ಹಾಳು ಸಂಸಾರ ಸುಳಿಗೆ ಸಿಕ್ಕಲು ಬೇಡಿ.....

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಭಾರತೀಯ ಸಂಗೀತದ ಎರಡು ಮುಖ್ಯ ಪ್ರಕಾರಗಳು ಯಾವುವು?
2. ಶಾಂತಲೆಯನ್ನು ಶಾಸನಗಳಲ್ಲಿ ಹೇಗೆ ವರ್ಣಿಸಲಾಗಿದೆ?

## ಟಿಪ್ಪಣಿ ಬರೆಯಿರಿ

ಸಂಗೀತಾದಿ ಕಲೆಗಳಿಂದ ದೊರಕುವ ಪ್ರಯೋಜನಗಳ ಕುರಿತು ಟಿಪ್ಪಣಿ ಬರೆಯಿರಿ.

## ಕಿರುಲೇಖನ ಬರೆಯಿರಿ

'ಕಲೆ ಸಂಸ್ಕೃತಿ ಹಾಗೂ ಭಾಷೆಗಳು ಪರಸ್ಪರ ಪೂರಕವಾಗಿವೆ.' ಪಾಠದಲ್ಲಿ ಬಂದಿರುವ ಈ ಮಾತನ್ನು ಸಮರ್ಥಿಸಿ ಕಿರುಲೇಖನ ಬರೆಯಿರಿ.

# ಅಭಯದಾನ

**ಕೆಂಪು ನಾರಾಯಣ**

[ಕಥಾ ಸಂದರ್ಭ - ನಂದರ ಕುತಂತ್ರದಿಂದ ಮೌರ್ಯರೆಲ್ಲರೂ ಮಡಿದು ಚಂದ್ರಗುಪ್ತನೊಬ್ಬನೇ ಕಾರಾಗೃಹದಲ್ಲಿ ಉಳಿಯುವನು. ಈ ಸಂದರ್ಭದಲ್ಲಿ ದೇಶದಲ್ಲಿರುವ ಬುದ್ಧಿವಂತರ ಪರೀಕ್ಷೆಗೆಂದು ಪರ್ವತರಾಜನು ಕೃತಕ ಸಿಂಹ ಪಂಜರವೊಂದನ್ನುನಿರ್ಮಾಣ ಮಾಡಿಸಿ, ಸಂಚಾರಕ್ಕೆ ಕಳುಹಿಸುವನು. ಪಂಜರವು ಪಾಟಲೀ ಪುರವನ್ನುತಲುಪುತ್ತದೆ. ಅದರ ರಹಸ್ಯವನ್ನು ಚಂದ್ರಗುಪ್ತನು ಯಶಸ್ವಿಯಾಗಿ ಭೇದಿಸುತ್ತಾನೆ. ಅದು ಕೃತಕ ಸಿಂಹವೆಂದು ಪತ್ತೆ ಹಚ್ಚುತ್ತಾನೆ. ಬಳಿಕ ನಂದರು ಚಂದ್ರಗುಪ್ತನನ್ನು ಬಂಧ ವಿಮೋಚನೆ ಮಾಡಿ ಅವನ ಅಪೇಕ್ಷೆಯಂತೆ ಅನ್ನ ಸತ್ರಾಧಿಕಾರವನ್ನು ನೀಡುತ್ತಾರೆ. ಆ ಅನ್ನಸತ್ರದ ಮಾರ್ಗವಾಗಿ ಹೋಗುತ್ತಿರುವ ಚಾಣಕ್ಯನನ್ನು ಚಂದ್ರಗುಪ್ತನು ಗಮನಿಸುತ್ತಾನೆ.]

ನಂದರ ಆಜ್ಞಾನುಸಾರವಾಗಿ ಚಂದ್ರಗುಪ್ತನು ಅನ್ನ ಸತ್ರಾಧಿಕಾರವಂ ಮಾಡುತ್ತಾ, ಭಕ್ತಿಯಿಂದ ಬ್ರಾಹ್ಮಣರಂ ಆರಾಧಿಸುತ್ತಿರಲು, ಮತ್ತೆ ಕೆಲವು ದಿನಗಳ ಮೇಲೆ, ಒಂದಾನೊಂದು ಸಮಯದಲ್ಲಿ ದಂಡ ಕೃಷ್ಣಾಜಿನಗಳಂ ಧರಿಸಿ, ಪ್ರಜ್ವಲಿಸುವ ಅಗ್ನಿಯೋ ಎಂಬಂತೆ ಮಹಾತೇಜಸ್ವಿಯಾಗಿ, ಆ ಅನ್ನಸತ್ರ ಮಾರ್ಗದಿಂದ ನೈಮಿಷಾರಣ್ಯ ಮಾರ್ಗದಲ್ಲಿ ಹೋಗುತ್ತಿರುವ ಚಾಣಕ್ಯನೆಂಬ ಬ್ರಾಹ್ಮಣೋತ್ತಮನ ಪಾದಕ್ಕೆ ಮಾರ್ಗದಲ್ಲಿರುವ ಗರುಕೆ ಹಂಬು ಸುತ್ತಿಕೊಳ್ಳಲು, ಮುಂದೆ ನಡೆಯುವ ವೇಗದಿಂದ ಮುಗ್ಗರಿಸಿ ಭೂಮಿಯ ಹಿಡಿಯಲು, ಆತನು ಮಹಾ ಕ್ರುದ್ಧನಾಗಿ ಜಡವಾದ ಗರುಕೆ ಹಂಬು ಮಾರ್ಗನಿರೋಧವಂ ಮಾಡಿದುದರಿಂದ ಇದನ್ನು ಮೂಲೋತ್ಪಾಟನವಂ ಮಾಡಬೇಕೆಂದು ಕಾರ್ಯಾಂತರವಂ ಬಿಟ್ಟು, ತನ್ನ ದಂಡದಿಂದ ಆ ಗರುಕೆಬಳ್ಳಿಯನ್ನು ಸಮೂಲವಾಗಿ ಅಗೆದು ಛೇದಿಸಿ, ತನ್ನ ಮಾರ್ಗ ಹಿಡಿದು ಹೋಗುವ ಆ ಬ್ರಾಹ್ಮಣನಂ ಚಂದ್ರಗುಪ್ತನು ದೂರದಿಂದಲೇ ಕಂಡು, “ಈತನು ಯಾರೋ ಮಹಾತೇಜಸ್ವಿಯಾದವನು, ಕೋಪಿಷ್ಠನು; ಇಂತಹ ಕೋಪವಿದ್ದವರಲ್ಲೇ ಆಶ್ರಿತಾಭಿಮಾನವು ದೃಢವಾಗಿ ಇರುವದು” ಎಂದು ನಿಶ್ಚೈಸಿ, ‘ತನ್ನ ಪುಣ್ಯದಿಂದಲೇ ಈತನು ಅನುಕೂಲನಾದರೆ ಕೇಳುವುದೇನು?’ ಎಂದು ಈತನಂ ಸತ್ಕರಿಸಬೇಕೆಂದು ನಿಶ್ಚೈಸಿ, ಆ ಬ್ರಾಹ್ಮಣನ ಸಮೀಪಕ್ಕೆ ಚಂದ್ರಗುಪ್ತನು ಬಂದು, ಸಾಷ್ಟಾಂಗವಾಗಿ ನಮಸ್ಕರಿಸಿ “ಸ್ವಾಮೀ, ಮಧ್ಯಾಹ್ನ ಮೀರುತ್ತಲಿದೆ. ಈ ನನ್ನ ಗೃಹದಲ್ಲಿ ಮಧುಪರ್ಕಾದಿಗಳಂ ಸ್ವೀಕರಿಸಿ, ವಿಶ್ರಮಿಸಿಕೊಂಡು ಮುಂದೆ ತೆರಳಬಹುದೆಂಬ” ಚಂದ್ರಗುಪ್ತನ ಪ್ರಾರ್ಥನವಂ ಕೇಳಿ. ‘ಹಾಗಾಗಲೆಂದು’ ಆತನಿಳಿದಿದ್ದ ಗೃಹಕ್ಕೆ ಬಂದು, ಅರ್ಘ್ಯಪಾದ್ಯಾದಿ ಪೂಜೆಯಂ ಸ್ವೀಕರಿಸಿ, ವಿಶ್ರಮಿಸಿಕೊಂಡು, ಮುಂದೆ ತೆರಳುವುದಕ್ಕೆ ಯತ್ನವಂ ಮಾಡುವ ಚಾಣಕ್ಯನಂ ಕುರಿತು, ಚಂದ್ರಗುಪ್ತನಿಂತೆಂದನು.

"ಸ್ವಾಮಿ ಮಾರ್ಗಶ್ರಮದಿಂದ ಬಂದ ವಿಪ್ರರು ನನ್ನ ಮೇಲೆ ಕೃಪೆ ಮಾಡಿ ಈ ಗೃಹದಲ್ಲಿ ನಾಲ್ಕು ಮೂರು ದಿನ ವಿಶ್ರಮಿಸಿಕೊಂಡು ನಾನು ಮಾಡುವ ಸ್ವಲ್ಪ ಸೇವೆಯಂ ಒಡಂಬಟ್ಟು ಮುಂದೆ ತೆರಳುತ್ತಲಿದ್ದಾರೆ. ಸ್ವಾಮಿಯವರ ದರ್ಶನದಿಂದ ನನ್ನ ಪಿತೃಗಳೆಲ್ಲರೂ ಧನ್ಯರು. ನಾನೂ ಧನ್ಯನಾದೆನು. ನನ್ನ ಗೃಹ ಪಾವನವಾಯಿತು. ನನ್ನಲ್ಲಿ ಕೃಪೆ ಮಾಡಿ ಒಂದೆರಡು ದಿನವಿಲ್ಲಿದ್ದು ಮುಂದೆ ತೆರಳಬೇಕೆಂ"ಬ ಚಂದ್ರಗುಪ್ತನ ಭಕ್ತಿ ವಿಶ್ವಾಸಮಂ ನೋಡಿ. "ಹಾಗೆ ಆಗಲೆಂದು" ಮೂರು ನಾಲ್ಕು ದಿವಸ ಅಲ್ಲಿ ಇದ್ದು, ಆತನು ಮಾಡುವ ಉಪಚಾರಗಳನ್ನು ಸ್ವೀಕರಿಸಿ ಸುಪ್ರೀತನಾಗಿ ಚಂದ್ರಗುಪ್ತನಂ ಕುರಿತು.

"ಅಯ್ಯಾ ಗೃಹಸ್ಥನೇ, ನೀನು ಯಾರ ಪುತ್ರನು? ನಿನ್ನ ಹೆಸರೇನು? ನಿನಗೆ ಇಲ್ಲಿ ಜೀವನವೇನು? ಎಂದೆನಲು "ಸ್ವಾಮಿ, ನಾನು ಈ ದೇಶಾಧಿಪತಿಯಾದ ಸರ್ವಾರ್ಥಸಿದ್ಧಿರಾಯನ ಪ್ರಿಯಪತ್ನಿಪುತ್ರನಾದ ಮೌರ್ಯನ ಪುತ್ರನು. ನನ್ನಂ ಚಂದ್ರಗುಪ್ತನೆಂದು ಹೇಳುವರು. ನನಗೆ ಬಂದು ಇರುವ ದುರ್ದೆಶೆಯು ಎಷ್ಟೆಂದು ಹೇಳಲಿ? ಬಹುಮಂದಿ ಒಡಹುಟ್ಟಿದವರು ಉಳ್ಳವಗೆ ಬಹುಕ್ಲೇಶವುಂಟೆಂಬ ಲೌಕಿಕ ವ್ಯವಹಾರ ನನ್ನಲ್ಲಿಯೇ ಅನುಭವಕ್ಕೆ ಬಂತು. ನೂರು ಮಂದಿ ಭ್ರಾತೃಗಳ ಸಂಗಡ ಹುಟ್ಟಿದವನಾದರೂ ನನ್ನ ಪಿತೃಸೋದರರುಗಳಲ್ಲಿ ನಾನೊಬ್ಬ ಉಳಿದು ಈ ಕ್ಲೇಶಕ್ಕೆ ಪಾತ್ರನಾದೆನು.

ಅದೇನೆಂದರೆ ನನ್ನ ಪಿತಾಮಹನಾದ ವೃದ್ಧರಾಯನ ಪಟ್ಟ ಮಹಿಷಿಯಲ್ಲಿ ಜನಿಸಿದ ಕುಮಾರರುಗಳೇ ನವನಂದರು. ಆತನ ಪ್ರಿಯ ಪತ್ನಿಯಾದ ಮುರಾದೇವಿಯಲ್ಲಿ ನಮ್ಮ ತಂದೆ ಮೌರ್ಯನೊಬ್ಬನು ಜನಿಸಿದನು. ಆತನಿಗೆ ನೂರು ಮಂದಿ ಕುಮಾರರು ಅಸಹಾಯಶೂರರು. ಜನಿಸಿ ಪ್ರಸಿದ್ಧರಾಗಿ ಇರುವುದನ್ನು ನೋಡಿ ನಂದರು ತಮಗೆ ಜ್ಞಾತಿಗಳಾಗಿ ಶೂರರಾದುದರಿಂದ 'ಮುಂದೆ ಈ ಮೌರ್ಯರು ಶತ್ರುಗಳಾದಾರು' ಎಂಬ ಶಂಕೆಯಿಂದಲೋ,



ಹ್ಯಾಗೋ, ಕಪಟವಂ ಮಾಡಿ ನೆಲಮಾಳಿಗೆಯೊಳಗೆ ನಮ್ಮೆಲ್ಲರಂ ಕೂಡಿ, ಅನ್ನೋದಕವ ಕೊಡದೆ ನಿಷ್ಕಾರಣವಾಗಿ ಸಂಹರಿಸಿದರು. ನಾನು ಮಾತ್ರ ಈ ಕ್ಲೇಶಕ್ಕೆ ಪಾತ್ರನಾಗಿ ಸೆರೆಮನೆಯಲ್ಲಿ ಜೀವಂತನಾಗಿ ಇರಲು, ನಿಮಿತ್ತಾಂತರದಿಂದ ನನ್ನ ಹೊರಗೆ ತೆಗೆದು ಅನ್ನ ಸತ್ರಾಧಿಕಾರವಂ ನೋಡುತ್ತಾ ಬಿದ್ದಿರಲಿ" ಎಂದು ನೇಮಿಸಿದ್ದರಿಂದ, ಅನಾಥನಾಗಿ ಈ ದುರ್ದೆಶೆಗೆ ತಗುಲಿ ಈ ಹೀನವೃತ್ತಿಯಿಂ ಜೀವಿಸುತ್ತ, 'ಯಾವ ವೇಳೆಯಲ್ಲಿ ಈ ಶತ್ರುಗಳಿಂದ ತನಗೆ ಏನು ವಿಪತ್ತು ಸಂಭವಿಸೀತೋ' ಎಂದು ಶಂಕೆ ಬಡುತ, ನವಾರ್ಬುದ ಸಂಖ್ಯಾ ಧನವನ್ನಾರ್ಜಿಸಿ ಬಹು ದೇಶಾಧಿಪತಿಗಳ ಕೈಕಪ್ಪವಂ ಸ್ವೀಕರಿಸುವ ಮಹಾರಾಯನಿಗೆ ನಾನು ಪೌತ್ರನಾಗಿಯೂ ನಮ್ಮ ತಂದೆಯಾದ ಮೌರ್ಯನಿಂ ಪ್ರತಿಷ್ಠಿತವಾದ ವಿರೂಪಾಕ್ಷೇಶನಿಗೆ ನಿತ್ಯದಲ್ಲೂ ಆಗುವ ಆರಾಧನೆಗೆ ವಿಘ್ನತಟ್ಟಿ ನಿಂತು ಹೋದರೆ, ಅಷ್ಟು ಮಾತ್ರ ನಿರ್ವಹಿಸಲಾರದೆ ಧನ ಹೀನನಾಗಿ ಈ ಶತ್ರು ಮಧ್ಯದಲ್ಲಿ ಜೀವಿಸುವುದಕ್ಕಿಂತಲೂ ಮಹಾಪುಣ್ಯಕರವಾದ ಅರಣ್ಯದ ಕಂದಮೂಲಗಳಿಂ ಜೀವಿಸುತ್ತಾ ನಿಮ್ಮಂಥ ಮಹಾನುಭಾವರುಗಳ ಪಾದ ಸೇವೆಯಂ ಮಾಡುತ್ತಾ ಪರಲೋಕ ಗತಿಯನ್ನಾದರೂ ಸಂಪಾದಿಸಿಕೊಂಡೇನು. ಇನ್ನು ಏನು ಪ್ರಯೋಜನಕ್ಕೆ ಇಲ್ಲಿ ಇರಬೇಕು? ಅಪ್ಪಣೆಯಾದರೆ ಸಂಗಡ(ದ)ಲ್ಲೇ ಬರುವೆನು" ಎಂದು ಕಂಬನಿಗಳಂ ತುಂಬಿ ದುಃಖ ಪಡುತ್ತಿರುವ ಚಂದ್ರಗುಪ್ತನ ವ್ಯಸನವಂ, ಆತನ ಸೌಜನ್ಯವಂ ಪ್ರಭುತ್ವ ಲಕ್ಷಣ ಯುಕ್ತವಾದ ಆತನ ಶರೀರವಂ ನೋಡಿ' ಈತನಂ ಪಕ್ಷೀಕರಿಸಿದರೆ ಮುಂದೆ ಪ್ರಭುಪದಕ್ಕೆ ಯೋಗ್ಯನಾದಾನೆಂದು ತಿಳಿದು ಮನಮರುಗಿ ಚಾಣಕ್ಯನಿಂತೆಂದನು:

"ಎಲೈ ಚಂದ್ರಗುಪ್ತನೆ, ನೀನು ಕ್ಷತ್ರಿಯ ವಂಶಜನಾಗಿ, ಯೌವನಶಾಲಿಯಾಗಿ, ಪ್ರಭುತ್ವಕ್ಕೆ ಯೋಗ್ಯವಾದ ಲಕ್ಷಣವುಂಟಾಗಿ ಇರುವ ನಿನಗೆ ವನವಾಸವೂ ಕಂದಮೂಲಾಹಾರವೂ ಯೋಗ್ಯವಲ್ಲ. ಅದು ಬ್ರಾಹ್ಮಣ ಜೀವನವು. ಕ್ಷತ್ರಿಯನು ಧನಹೀನನಾಗಿ ವಿಪತ್ತಿಗೆ ತಗುಲಿದರೆ ಧೈರ್ಯವನ್ನವಲಂಬಿಸಿ ತನ್ನ ಅಭ್ಯುದಯ ಕಾಲವಂ ನಿರೀಕ್ಷಿಸುತ್ತ ಸಮಯವರಿತು, ತನ್ನ ಪೌರುಷ ಬುದ್ಧಿ ಬಲದಿಂದ ಶತ್ರುಗಳಂ ನಿಗ್ರಹಿಸಿ, ಸುಖಿಯಾಗಬೇಕಲ್ಲದೆ ಹೀಗೆ ಧೈರ್ಯಹೀನನಾಗಿ ದೀನಜನದಂತೆ ಹೇಳುವರೇ?" ಎನಲು, ಆ ಮಾತಿಗೆ ಚಂದ್ರಗುಪ್ತನು "ಸ್ವಾಮಿ ಮಹಾನುಭಾವರೆ, ತಂಡುಲ ಮಾತ್ರ ಉಳಿದಿದ್ದ ಅಗ್ನಿ ಕಣವು ವಾಯು ಸಹಾಯದಿಂದ ವನವೆಲ್ಲವಂ ದಹಿಸುವಂತೆ ನಿಮ್ಮ ಕೃಪಾಕಟಾಕ್ಷದಿಂದ ನನ್ನ ಶತ್ರುಗಳೆಲ್ಲರೂ ನಷ್ಟವಾಗಿ ನನ್ನ ಅದೃಷ್ಟವು ಪ್ರಕಾಶಿಸಬೇಕಲ್ಲದೆ ನನ್ನ ಪೌರುಷ ಬಲದಿಂದ ಶತ್ರು ನಿಗ್ರಹವಾಗಬೇಕೆಂಬುದು ಮನುಷ್ಯಯತ್ನದಿಂದ ತೋರುವುದಿಲ್ಲ. ನಿಮ್ಮಂ ಶರಣು ಹೊಕ್ಕೆನು. ಕ್ರೂರಕರ್ಮಿಗಳಾದ ಈ ಶತ್ರುಗಳನ್ನು ನಿಮ್ಮ ತೇಜೋ ಬಲದಿಂದ ನಿಗ್ರಹಿಸಿ, ನನ್ನನ್ನುದ್ಧರಿಸಬೇಕೆಂದು" ಪಾದಗಳಂ ಹಿಡಿದಿರುವ ಚಂದ್ರಗುಪ್ತನಂ ನೋಡಿ,

"ಎಲೈ ಚಂದ್ರಗುಪ್ತನೆ ನಿನ್ನ ಶತ್ರುಗಳಂ ನಿಗ್ರಹಿಸಿ ನಿನಗೆ ರಾಜ್ಯಾಧಿಪತ್ಯವನ್ನುಂಟು ಮಾಡುವುದಕ್ಕೆ ನಾನು ಸಮರ್ಥನಹುದಾದರೂ, ನಿನಗೆ ಮಾತ್ರವೇ ದ್ರೋಹಿಗಳಾಗಿ ಪ್ರಜಾರಕ್ಷಣೆಯಂ ಮಾಡುತ್ತಲಿರುವ ಈ ನಂದರಂ ಆಕಾರಣವಾಗಿ ನಾನು ನಿಗ್ರಹಿಸಿದರೆ, ಪ್ರತ್ಯವಾಯ ಅಪಕೀರ್ತಿಗಳು ಉಂಟಾಗುವದು. ನಮಗೆ ಮಾಡಿದ

ಅಪರಾಧವಂ ತಿಳಿದು ಅವರಂ ನಿಗ್ರಹಿಸಿದರೆ, ಬಾಧಕವಿಲ್ಲ. ನೀನು ಸಜ್ಜನನಾಗಿ ತೋರುತ್ತಲಿರುವೆ. ಅದರಿಂ ದುಷ್ಟರಾದ ಈ ನಂದರಿಗೆ ನನ್ನಲ್ಲಿ ಕೋಪ ಹುಟ್ಟುವಂತೆ ಧರ್ಮ ವಿರುದ್ಧ(ವ)ಲ್ಲದ ಒಂದು ದುಶ್ಚೇಷ್ಟೆಯನ್ನಾಚರಿಸು ತ್ತಲಿದ್ದೇನೆ. ಅದಕ್ಕೆ ಕ್ಷಮಿಸದೆ, ನಿರಾಕರಿಸಿ, ನನಗೆ ಕೋಪವುಂಟಾಗುವಂತೆ ನಂದರು ಮಾಡಿಕೊಂಡರೆ ಆಗ ನಿನ್ನ ಕಾರ್ಯಕ್ಕೆ ಅಭಯವಂ ಕೊಡುವೆನು" ಎಂದು ಚಂದ್ರಗುಪ್ತನಿಗೆ ಹೇಳಿ, ಚಾಣಕ್ಯನು ಮಧ್ಯಾಹ್ನಿಕಕ್ಕೆ ಗಂಗಾನದಿಗೆ ಹೋದನು.

## ಕವಿ ಪರಿಚಯ

ಕೆಂಪು ನಾರಾಯಣ ಕವಿಯು ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಕವಿಯಾಗಿದ್ದನು. ಇವನ ಕಾಲ ಕ್ರಿಸ್ತಶಕ ೧೯ನೇ ಶತಮಾನ. ಸಂಸ್ಕೃತದಲ್ಲಿ ವಿಶಾಖದತ್ತ ಕವಿಯು ಬರೆದ 'ಮುದ್ರಾ ಮಂಜೂಷಾ' ಎಂಬ ನಾಟಕದ ಆಧಾರದಲ್ಲಿ ಕವಿಯು ಈ ಗದ್ಯಕಾವ್ಯವನ್ನು ರಚಿಸಿರುವನು. ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದ ಕನ್ನಡ ಭಾಷಾ ಶೈಲಿಯನ್ನು ತಿಳಿಯಲು ಈ ಗ್ರಂಥವು ಪ್ರಮುಖ ಆಧಾರವಾಗಿದೆ. ಕೆಂಪು ನಾರಾಯಣ ಕವಿಯು ಬರೆದ 'ಮುದ್ರಾಮಂಜೂಷ' ಎಂಬ ಗದ್ಯಕಾವ್ಯದಿಂದ ಈ ಪಾಠವನ್ನು ಆಯ್ದುಕೊಳ್ಳಲಾಗಿದೆ.

## ವಿಶದೀಕರಣ

- **ನೈಮಿಶಾರಣ್ಯ:** ಗೋಮತಿ ನದಿ ತೀರದಲ್ಲಿರುವ ಮಹಾಪವಿತ್ರವಾದ ಒಂದು ವನ. ಈಗ ಇದು ಅಯೋಧ್ಯೆ ಮತ್ತು ರೋಹಿಲ್ ಖಂಡದ ರೈಲು ಮಾರ್ಗದಲ್ಲಿ ಸಾಂಡಿಲಾ ಎಂಬ ರೈಲು ನಿಲ್ದಾಣದಿಂದ ೨೪ ಮೈಲು ದೂರದಲ್ಲಿಯೂ ಸೀತಾಪುರದಿಂದ ೨೦ ಮೈಲು ದೂರದಲ್ಲಿಯೂ ಇದೆ. ಇದನ್ನು ಈಗ ನಿಮ್ಸಾರ್ ಎಂದು ಕರೆಯುತ್ತಾರೆ.
- **ಮಧುಪರ್ಕ:** ಮೊಸರು, ತುಪ್ಪ, ನೀರು, ಜೇನುತುಪ್ಪ, ಸಕ್ಕರೆ ಈ ಐದರ ಮಿಶ್ರಣ. ಇದನ್ನು ಶುಭ ಸಮಾರಂಭದಲ್ಲಿ ಮತ್ತು ವಿಶೇಷ ಅತಿಥಿಗಳು ಬಂದಾಗ ನೀಡುವ ಪದ್ಧತಿ ಇದೆ.
- **ಅರ್ಘ್ಯಪಾದ್ಯ:** ಪೂಜ್ಯರಿಗೆ ಕೈತೊಳೆಯಲು ಕೊಡುವ ಶುದ್ಧೋದಕವನ್ನು ಅರ್ಘ್ಯವೆಂದೂ, ಕಾಲು ತೊಳೆಯಲು ಕೊಡುವ ಶುದ್ಧೋದಕವನ್ನು ಪಾದ್ಯವೆಂದು ಹೇಳುತ್ತಾರೆ.
- **ನವಾರ್ಬುದ :** ೯೦ ಕೋಟಿ (ಅರ್ಬುದ-೧೦ ಕೋಟಿ)
- **ಅಸಹಾಯ ಶೂರ :** ಬೇರೆಯವರ ಸಹಾಯವಿಲ್ಲದೆ ಒಂಟಿಯಾಗಿ ಕಾದುವ ವೀರ.
- **ಅನ್ನಸತ್ರಾಧಿಕಾರ :** ಉಚಿತವಾಗಿ ಆಹಾರ ದಾನ ಮಾಡುವ ಧರ್ಮಶಾಲೆಯ ಅಧಿಕಾರ.

## ಉತ್ತರಿಸಿರಿ

ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಚಾಣಕ್ಯನನ್ನು ಕಂಡಾಗ ಚಂದ್ರಗುಪ್ತನ ಮನದಲ್ಲಿ ಮೂಡಿದ ಆಲೋಚನೆಗಳೇನು?
2. ಚಂದ್ರಗುಪ್ತನು ಚಾಣಕ್ಯನಲ್ಲಿ ಏನೆಂದು ನಿವೇದಿಸಿದನು?
3. ಚಂದ್ರಗುಪ್ತನ ಕಷ್ಟನಿವಾರಣೆಗಾಗಿ ಚಾಣಕ್ಯನು ಹೇಳಿದ ಉಪಾಯವೇನು?
4. ಚಾಣಕ್ಯನು ಚಂದ್ರಗುಪ್ತನಿಗೆ ನೀಡಿದ ಹಿತವಚನವೇನು?

## ಪದವಿಂಗಡಣೆ ಮಾಡಿರಿ

| | | |
|---|---|---|
| ಮೂಲೋತ್ಪಾಟನ | - | ಮೂಲ + ಉತ್ಪಾಟನ |
| ಅನ್ನೋದಕ | - | ಅನ್ನ + ಉದಕ |
| ಧನವನ್ನಾರ್ಜಿಸು | - | ಧನವನ್ನು + ಆರ್ಜಿಸು |
| ರಾಜ್ಯಾಧಿಪತ್ಯ | - | ರಾಜ್ಯ + ಆಧಿಪತ್ಯ |
| ಸತ್ರಾಧಿಕಾರ | - | ಸತ್ರ + ಅಧಿಕಾರ |

ಪಾಠಭಾಗದಿಂದ ಇಂತಹ ಪದಗಳನ್ನು ಹುಡುಕಿ ವಿಂಗಡಿಸಿ ಬರೆಯಿರಿ.

## ಸಂಭಾಷಣೆ ಬರೆಯಿರಿ

ಚಾಣಕ್ಯ ಮತ್ತು ಚಂದ್ರಗುಪ್ತರೊಳಗೆ ನಡೆದ ಮಾತುಗಳನ್ನು ಸಂಭಾಷಣೆ ರೂಪದಲ್ಲಿ ಬರೆಯಿರಿ.

## ಪರಿಚಯ ಲೇಖನ ಬರೆಯಿರಿ

ಪಾಠಭಾಗ ಮತ್ತು ಇನ್ನಿತರ ಮೂಲಗಳಿಂದ ಚಾಣಕ್ಯನ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿ ಪರಿಚಯ ಲೇಖನ ಬರೆಯಿರಿ.

## ಸಂಧಿ ಗುರುತಿಸಿರಿ

ಕೆಳಗೆ ನೀಡಲಾದ ಪದಗಳಲ್ಲಿ ಸವರ್ಣ ದೀರ್ಘ ಸಂಧಿಯಾಗುವ ಪದಗಳನ್ನು ಗುರುತಿಸಿ ಬರೆಯಿರಿ.

- ಆಶ್ರಿತಾಭಿಮಾನ
- ವೀರಗಲ್ಲು
- ಅನ್ನಸತ್ರಾಧಿಕಾರ.
- ಅತ್ಯಂತ

## ತದ್ಭವ ರೂಪ ಬರೆಯಿರಿ

- ಕಾರ್ಯ
- ಭಕ್ತಿ
- ವಿಸ್ತಾರ
- ಸ್ಥಾನ

# 3. ಜೀವನಾದರ್ಶ









ಆಕಸ್ಮಿಕವಾದ ಹುಟ್ಟಿನಿಂದ ಅನಿವಾರ್ಯವಾದ ಮರಣದ ತನಕ ಬದುಕೆಂಬ ಪಯಣದಲ್ಲಿ ಎದುರಾಗುವ ಸವಾಲುಗಳು, ಸಮಸ್ಯೆಗಳು, ಅನುಭವಗಳು ಅಪಾರವಾದುವು. ಅವುಗಳನ್ನು ನಾವು ಧನಾತ್ಮಕವಾಗಿ ಸ್ವೀಕರಿಸಿ ಸಮಾಜಮುಖಿಯಾಗಬೇಕು. ಆ ಮೂಲಕ ನಮ್ಮ ಜೀವನದಲ್ಲಿ ಪ್ರೀತಿ, ವಿಶ್ವಾಸ, ಸಹೋದರತೆ, ಏಕತಾಭಾವನೆಯನ್ನು ರೂಪಿಸಿಕೊಳ್ಳುವ ನಿಜಾರ್ಥದ ನಾಗರಿಕರಾಗಿ ನಾವು ಬೆಳೆಯ ಬೇಕಾಗಿದೆ. ಜೀವನಾದರ್ಶ ಎಂಬ ಈ ಘಟಕದಲ್ಲಿ ಸರ್ವ ಧರ್ಮ ಸಮಭಾವ, ರಾಷ್ಟ್ರೀಯ ಭಾವೈಕ್ಯ, ವಿಶ್ವಮಾನವತೆ ಮುಂತಾದ ಭಾವಗಳಿಗೆ ಪ್ರಾಧಾನ್ಯ ನೀಡಲಾಗಿದೆ.

ಜಾಗತಿಕ ಖ್ಯಾತಿಗಳಿಸಿದ ಮಹಾನುಭಾವರ ಸಂದೇಶನುಡಿಗಳ ಕುರಿತು ಚರ್ಚಿಸಿ ಅಭಿಪ್ರಾಯ ವ್ಯಕ್ತಪಡಿಸುವ ಪ್ರವೇಶ ಚಟುವಟಿಕೆಗಳಿಂದ ಈ ಘಟಕ ತೆರೆದುಕೊಳ್ಳುತ್ತದೆ. ಡಾ. ನಾ .ಮೊಗಸಾಲೆ ಅವರು ಬರೆದ ‘ಆಗು ನೀ ಅನಿಕೇತನ’ ಎಂಬ ಕತೆ, ರಾಷ್ಟ್ರಕವಿ ಗೋವಿಂದ ಪೈಗಳ ‘ವೈಶಾಖಿ’ ಖಂಡ ಕಾವ್ಯದ ಭಾಗ ಹಾಗೂ ‘ಜೈಮಿನಿ ಭಾರತ’ದಿಂದ ಆಯ್ದ ಭಾಗಗಳನ್ನು ಪಠ್ಯ ವಸ್ತುವಾಗಿ ಇಲ್ಲಿ ನೀಡಲಾಗಿದೆ. ಇವುಗಳನ್ನು ಓದುವ ಮೂಲಕ ನಮ್ಮ ಸ್ವಭಾವ, ನಡವಳಿಕೆಗಳ ಕುರಿತು ನಮಗೆ ಮರು ಚಿಂತಿಸುವುದಕ್ಕೆ ಸಾಧ್ಯವಾಗಬಹುದು. ಪಠ್ಯ ಭಾಗಕ್ಕೆ ಪೂರಕವಾಗಿ ಚಟುವಟಿಕೆಗಳನ್ನು ನೀಡಲಾಗಿದ್ದು ಅವು ಭಾಷಾ ಕೌಶಲದ ವೃದ್ಧಿಗೆ ಸಹಾಯಕವಾಗುವುದರ ಜೊತೆಗೆ ಉದ್ದೇಶಿತ ಆಶಯವನ್ನು ಈಡೇರಿಸಲು ಸಫಲವಾಗಬಹುದು. ಮಾಹಿತಿ ತಂತ್ರಜ್ಞಾನದ ಬಳಕೆಯ ಮೂಲಕವೂ ಸಾಹಿತ್ಯ ಚಟುವಟಿಕೆಗಳಿಗೆ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಒಟ್ಟಿನಲ್ಲಿ ಈ ಘಟಕವು ಮೂಲಕ ಉತ್ತಮ ಜೀವನಾದರ್ಶಗಳನ್ನು ರೂಢಿಸಿಕೊಳ್ಳಲು, ಸಾಹಿತ್ಯಾಸಕ್ತಿ ಮತ್ತು ಭಾಷಾ ಕೌಶಲಗಳನ್ನು ಬೆಳೆಸಲು ಸಹಾಯಕವಾಗಬಹುದು.

ಒಂದೇ ಜಾತಿ, ಒಂದೇ ಮತ, ಒಬ್ಬನೇ ದೇವರು

ಶ್ರೀನಾರಾಯಣಗುರು

ಹಿಂಸೆ ಎಂದಿಗೂ ನಮ್ಮ ಗುರಿಯನ್ನು ಸಾಧಿಸಲಾರದು

ಗಾಂಧೀಜಿ

ಎದುರಿಗೆ ಕಾಣದ ಮನುಷ್ಯರನ್ನೇ ಗೌರವಿಸದಿದ್ದರೆ; ಕಾಣದ ದೇವರನ್ನು ಹೇಗೆ ಪ್ರಾರ್ಥಿಸಲು ಸಾಧ್ಯ.

ಮದರ್ ತೆರೇಸಾ

ಒಬ್ಬರನ್ನ ಸೋಲಿಸೋದು ಸುಲಭ, ಆದರೆ ಒಬ್ಬರ ಮನಸ್ಸನ್ನು ಗೆಲ್ಲೋದು ಕಷ್ಟ

ಡಾ.ಅಬ್ದುಲ್ ಕಲಾಂ

- ಈ ಮೇಲಿನ ಹೇಳಿಕೆಗಳ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ತಥಾಗತನಾ ಮಹರ್ದ್ಧಿಕತೆ

**ಮಂಜೇಶ್ವರ ಗೋವಿಂದ ಪೈ**

**ಕಥಾ ಸಂದರ್ಭ:**

ಬೌದ್ಧಮತ ಸ್ಥಾಪಕನಾದ ಬುದ್ಧದೇವನು ವೈಶಾಖ ಮಾಸದ ಪೂರ್ಣಿಮೆಯಂದು ಜನಿಸುತ್ತಾನೆ. ಮುಂದೆ ತನಗೆ ಎಂಬತ್ತು ವರ್ಷ ಸಲ್ಲುವ ವೈಶಾಖ ಮಾಸದ ಪೂರ್ಣಿಮೆಯ ದಿನ ತನ್ನ ಬದುಕಿನ ಪರಿನಿರ್ವಾಣವಾಗುವುದು ಎಂದು ಅರಿಯುತ್ತಾನೆ. ಅದಕ್ಕಾಗಿ ತಾನಿದ್ದ ಪಾವೆಯಿಂದ ಸೂರ್ಯೋದಯದ ಕಾಲಕ್ಕೆ ಹೊರಟು ಕುಶಿನಾರದ ಕಡೆಗೆ ಸಾಗಬೇಕೆಂದು ತನ್ನ ಆಪ್ತ ಶಿಷ್ಯನಾದ ಆನಂದನೊಡನೆ ಹೇಳುತ್ತಾನೆ. ಅಲ್ಲದೆ ಆನಂದನ ಜೊತೆಗಿರುವ ಶಿಷ್ಯರಿಗೆಲ್ಲಾ ಹಿತೋಪದೇಶವನ್ನು ಮಾಡುತ್ತಾನೆ. ವೈಶಾಖ ಪೂರ್ಣಮಿಯ ದಿನದ ಅರುಣೋದಯದ ವೇಳೆ ಹೊರಟು ಕುಶಿನಾರದ ಕಡೆಗೆ ಸಾಗುತ್ತಿರಲು ಸೂರ್ಯೋದಯವಾಗುತ್ತದೆ.

ಇದೊ ನೋಡ ಶುಭ್ರ ಗಗನದ ಪಡು ದಿಗಂತ ದೇ
ಕಾಂತದಲಿ ಮಿಳ್ಮಿಳನೆ ಮಿಟುಕೆ ಸುತ್ತಣ ತಾರೆ
ಗಳ ಬಳಗವಸ್ತಮಿಪ ಪೂರ್ಣಚಂದ್ರಂ ತಥಾ
ಗತನ ಪರಿನಿರ್ವಾಣ ನಾಟಕವನೊಂದಿನಕೆ
ಮುನ್ನ ನಟಿಸುವನೇನೊ! ಮೆಲ್ಲನಿಗೋ ತೀಡುತಿದೆ
ತಂಗಾಳಿ, ಹೂಗಾಳಿ. ಉಲಿಯುತಿದೆ ಒಂದೊಂದೆ ಹಕ್ಕಿ.

ಅರುಣಿಸಿತು ಮೂಡದೆಸೆ ಬಗೆ ಬಗೆಯ ವಿಹಗಗಳ
ಮೇಳವಂ ಪಾಡುತಿದೆ. ಕಾಕಾರವಂ ಸುತ್ತಲಲ್ಲಲ್ಲಿ
ಕರೆಯುತಿದೆ. ತೊರೆಯ ತಡಿಗಾದಪುದು
ನೀರ್ವಕ್ಕಿಗಳ ಕೇಳಿ. ಮನೆಗಳಲ್ಲಲ್ಲಿಂದ
ಹೊಗೆ ತೆಳ್ಳನೇಳುತಿದೆ.
ಅವನೆಲ್ಲ ಕಂಡು ಕಾಣದೆ ಭಿಕ್ಷು ಸಂಘಮೊಡ
ಗೂಡುತ ತಥಾಗತಂ ಮೆಲ್ಲಮೆಲ್ಲನೆ ಕಾಲ



ನಿಡುತ ಹಾದಿಯಿನತ್ತಣೊಂದು ಮರದಡಿಗಯ್ದಿ

ಇಂತೆಂದ 'ಆನಂದ ದಣಿದಿರುವೆ. ನಾಲ್ವಡಿಸಿ

ಹಾಸು ಕಂಥೆಯ, ಕುಳಿತು ದಣುವನಾರಿಸುವೆ.'

ಆನಂದನಂತೆ ಕಂಥೆಯ ಹಾಸೆ ಕುಳಿತಲ್ಲಿ

ಮರಳಿ ಇಂತೆಂದ 'ಆನಂದ ಬಾಯಾರುತಿದೆ,

ಕೊಂಚ ನೀರಂ ತಾರ, ಕುಡಿವೆ ನಾನಾನಂದ'.

ಆನಂದನಾಗ, 'ಭಗವಂತ ಈ ದಾರಿಯಿಂ

ದೀಗ ಹೋದಯ್ನೂರು ಬಂಡಿಗಳ ಗಾಲಿಯಿಂ

ಕದಡಿ ಕೆಸರಾದ ತೊರೆಯೀ ನೀರಪಾನೀಯ.

ಇಲ್ಲೆ ಬಳಿಯಣ ಕಕುತ್ಥಾನದಿಯ ನೀರೆನಿತೊ

ಶೀತಲಂ ನಿರ್ಮಲಂ ಮಧುರಮಾ ನದಿಗಯ್ದಿ

ನೀರ್ಕುಡಿದು ಮೆಯ್ತೊಳೆದುಕೊಳುವೆ' ಎನೆ,

ಮತ್ತೊಮ್ಮೆ ಸುಗತನಿಂತೆಂದ 'ಆನಂದ ಬಾಯಾರುತಿದೆ

ಕೊಂಚ ನೀರಂ ತಾರ, ಕುಡಿವೆ ನಾನಾನಂದ'.

ಆನಂದನಂತೆ ಉತ್ತರವಿತ್ತ, ಬಳಿಕೊಮ್ಮೆ
ಬುದ್ಧನಿಂತೆಂದ 'ಬಾಯಾರುತಿದೆ ಆನಂದ.
ಕೊಂಚ ನೀರಂ ತಾರ, ಕುಡಿವೆ ನಾನಾನಂದ',
ಮೂರನೆಯ ಬಾರಿ ಅಂತೆಂಬುದೆ ತಥಾಗತಂ
ತಟ್ಟನೆ ತಥಾಸ್ತು ಎಂದಾನಂದ ಪಾತ್ರವ
ನ್ನೆತ್ತಿ ತೊರೆಗಯ್ದಿದಂ. ಬಂಡಿಗಳ ಗಾಲಿಯಿಂ
ದೀಗ ತಾಂ ಕದಡಿ ಕೆಸರಾದ ನೀರನಿತರೊಳೆ
ಕಿಲುಬಿಡಿದ ಕನ್ನಡಿಗೆ ಹುಳಿ ಹಿಡಿಸೆ ಹೊಳೆವಂತೆ,
ವಿಸ್ಮರಿಸೆ ದುಃಸ್ವಪ್ನವೆಚ್ಚರಂ ತಿಳಿವಂತೆ
ಗಾಳಿ ಮೋಡವ ಸೋಹೆ ಬೆಳರ್ವ ಚಂದ್ರಿಕೆಯಂತೆ
ಎನಿತಚ್ಛವೆನಿತನಾವಿಲವಾಗೆ ಕಂಡು ನಿ
ಬ್ಬೆರಗಾಗಿ, ಆತನಮಮೇನಚ್ಚರಿಯೊ ತಥಾ
ಗತನಾ ಮಹರ್ದ್ಧಿಕತೆ! ಏನದ್ಭುತವೊ ಅಮಮ
ಸುಗತನ ಮಹಾನುಭಾವತೆ! ಎಂದು ಕೊಂಡಾಡಿ
ನೀರು ತುಂಬಿಸಿ ತಂದ ಪಾತ್ರವ ತಥಾಗತಂ
ಗಿತ್ತು 'ಕುಡಿಯ ಭಗವಂತ'
ಎನಲು ಬುದ್ಧಂ ಪಾತ್ರವಿಸಕೊಂಡು ನೀರ್ಕುಡಿದು
ಸಂಬಾಳಿಸುತ್ತ ಕಣ್ಮುಗಿದು ಪದ್ಮಾಸನದಿ,
ಡಿಂಡೀರ ಪಿಂಡದಿ ಮರಾಲ ಮಂಡಿಸಿದಂತೆ,
ತೆರೆದ ರೆಪ್ಪೆಯಲ್ಲಿ ಕಣ್ಣಿನ ಗೊಂಬೆ ನೆಲತಂತೆ,
ಕುಳಿತಿರಲು ಮೂಡಣದಿ ತಣ್ಮುಗಿಲ ಮರೆಗೆ ವೈ
ಶಾಖ ಪೂರ್ಣಿಮಿಯ ಮಾರ್ತಂಡನುದಯಸಿದಂ

## ಕವಿ ಪರಿಚಯ



ಮಂಜೇಶ್ವರ ಗೋವಿಂದ ಪೈಗಳು ೧೮೮೩ ಮಾರ್ಚ್ ೨೩ರಂದು ಮಂಗಳೂರಿನಲ್ಲಿ ಜನಿಸಿದರು. ತಮ್ಮ ಜೀವಿತದ ಬಹುಭಾಗವನ್ನು ಮಂಜೇಶ್ವರದಲ್ಲಿಯೇ ಕಳೆದುದರಿಂದ ಅವರು ಮಂಜೇಶ್ವರ ಗೋವಿಂದ ಪೈ ಎಂದು ಖ್ಯಾತರು. ಅವರ ಪ್ರಾಥಮಿಕ ಹಾಗೂ ಇಂಟರ್ ಮೀಡಿಯಟ್ ಶಿಕ್ಷಣ ಮಂಗಳೂರಿನಲ್ಲಿ ನಡೆಯಿತು. ಹೆಚ್ಚಿನ ವ್ಯಾಸಂಗಕ್ಕಾಗಿ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಪ್ರವೇಶ ಪಡೆದರು. ಆದರೆ ತಮ್ಮ ತಂದೆಯವರ ಅನಾರೋಗ್ಯದ ಕಾರಣದಿಂದ ವಿದ್ಯಾಭ್ಯಾಸವನ್ನು ಅರ್ಧಕ್ಕೇ ಮೊಟಕುಗೊಳಿಸಬೇಕಾಯಿತು. ಮನೆಯಲ್ಲಿಯೇ ಅನೌಪಚಾರಿಕ ವ್ಯಾಸಂಗವನ್ನು ಮುಂದುವರಿಸಿದರು.ಅವರು ೨೨ ಭಾಷೆಗಳಲ್ಲಿ ಪ್ರಾವೀಣ್ಯ ಹೊಂದಿದ್ದ ಬಹುಭಾಷಾ ಪಂಡಿತರು. ಆದಿಪ್ರಾಸವನ್ನು ಬಿಟ್ಟು ಪದ್ಯ ರಚನೆ ಮಾಡಿ ಕಾವ್ಯ ಕ್ಷೇತ್ರದಲ್ಲಿ ಮಹತ್ವದ ಕ್ರಾಂತಿ ನಡೆಸಿದವರು. ಗಿಳಿವಿಂಡು, ಹೃದಯರಂಗ, ಇಂಗಡಲು, ನಂದಾದೀಪ ಅವರ ಕವನ ಸಂಕಲನಗಳು. ವೈಶಾಖಿ, ಗೊಲ್ಗೊಥಾ, ಪ್ರಭಾಸ, ದೆಹಲಿ ಅವರ ಖಂಡಕಾವ್ಯಗಳು. ಹೆಬ್ಬೆರಳು, ಚಿತ್ರಭಾನು, ತಾಯಿ ಮತ್ತು ನೋ ನಾಟಕಗಳು ಅವರ ನಾಟಕ ಕೃತಿಗಳು. ಸಂಶೋಧನ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಕೊಡುಗೆ ಅಪಾರ. ಮದರಾಸು ಸರಕಾರ ಗೋವಿಂದ ಪೈಗಳಿಗೆ ೧೯೪೯ರಲ್ಲಿ ರಾಷ್ಟ್ರಕವಿ ಬಿರುದು ನೀಡಿ ಗೌರವಿಸಿತು. ಅವರು ಕನ್ನಡದ ಪ್ರಥಮ ರಾಷ್ಟ್ರಕವಿಯೆಂಬ ಮನ್ನಣೆಗೆ ಪಾತ್ರರಾದರು. ಅವರು ೧೯೫೦ರಲ್ಲಿ ಮುಂಬೈಯಲ್ಲಿ ಜರಗಿದ ೨೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ೦೬-೦೯-೧೯೬೩ರಂದು ಮಂಗಳೂರಿನಲ್ಲಿ ಅವರು ಇಹಲೋಕ ತ್ಯಜಿಸಿದರು.

ಈ ಪಾಠಭಾಗವನ್ನು ಅವರ 'ವೈಶಾಖಿ' ಎಂಬ ಖಂಡಕಾವ್ಯದಿಂದ ಆಯ್ದುಕೊಳ್ಳಲಾಗಿದೆ.

## ವಿಶದೀಕರಣ

**ತಥಾಗತ** - ತಥಾಗತ,ಅಮಿತಾಭ, ಭಗವಂತ, ಸುಗತ, ಗೌತಮ ಇವೆಲ್ಲಾ ಬುದ್ಧನ ಪರ್ಯಾಯ ನಾಮಗಳು.

**ಕಿಲುಬಿಡಿದ ಕನ್ನಡಿ** - ಬುದ್ಧನ ಕಾಲದಲ್ಲಿ ಕಂಚಿನ ಕನ್ನಡಿಗಳಿದ್ದು ಅದಕ್ಕೆ ಕಿಲುಬು ಬರುತ್ತಿತ್ತು.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕವಿ ಸೂರ್ಯೋದಯದ ಸಮಯವನ್ನು ಹೇಗೆ ವರ್ಣಿಸಿದ್ದಾರೆ?
2. ಹಾದಿ ಬದಿಯ ಮರದಡಿಗೆ ಬಂದ ತಥಾಗತನು ಆನಂದನೊಡನೆ ಏನೆಂದನು?
3. 'ಬಾಯಾರುತಿದೆ ಕೊಂಚ ನೀರು ತಾ' ಎಂದಾಗ ಆನಂದನು ಏನು ಹೇಳಿದನು?
4. ಕದಡಿ ಕೆಸರಾದ ನೀರು ಶುಭ್ರವಾದುದನ್ನು ಕವಿ ಹೇಗೆ ವರ್ಣಿಸಿದ್ದಾರೆ?

## ಪದ ವಿಂಗಡಿಸಿ ಬರೆಯಿರಿ

ಕೆಳಗೆ ನೀಡಲಾದ ಪದವಿಂಗಡಣೆಯನ್ನು ಗಮನಿಸಿರಿ.

- ನಾನಾನಂದ - ನಾನು + ಆನಂದ
- ನೀರಪಾನೀಯ - ನೀರು + ಅಪಾನೀಯ
- ದು:ಸ್ವಪ್ನವೆಚ್ಚರಂ - ದುಸ್ವಪ್ನ + ಎಚ್ಚರಂ
- ಆತನಮಮೇನಚ್ಚರಿಯೊ - ಆತನು + ಅಮಮ + ಏನು + ಅಚ್ಚರಿಯೊ
- ಮಹರ್ದ್ಧಿ - ಮಹಾ + ಋದ್ಧಿ

ಪದ್ಯಭಾಗದಲ್ಲಿ ಬಂದ ಸಂಧಿ ಪದಗಳನ್ನು ಗುರುತಿಸಿ ಪದ ವಿಂಗಡಿಸಿ ಬರೆಯಿರಿ.

## ಕತೆ ಬರೆಯಿರಿ

"ತಥಾಗತನಾ ಮಹರ್ದ್ಧಿಕತೆ" ಖಂಡಕಾವ್ಯ ಭಾಗದ ಕತೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

## ವರ್ಣನೆ ಬರೆಯಿರಿ

"ತಥಾಗತನಾ ಮಹರ್ದ್ಧಿಕತೆ" ಕಾವ್ಯಭಾಗದಲ್ಲಿ ಬಂದಿರುವ ಸೂರ್ಯೋದಯದ ವರ್ಣನೆಯ ಹಿನ್ನೆಲೆಯಲ್ಲಿ ನೀವು ನೋಡಿದ ಸೂರ್ಯೋದಯದ ಸೊಬಗನ್ನು ವರ್ಣಿಸಿ ಬರೆಯಿರಿ.

## ಲೇಖನ ಬರೆಯಿರಿ

ಬುದ್ಧನ ಅಂತಿಮ ದಿನದ ಕುರಿತು ಓದಿ ತಿಳಿದುಕೊಂಡಿದ್ದೀರಿ. ಈ ಹಿನ್ನೆಲೆಯಲ್ಲಿ ಬುದ್ಧನ ಸಂದೇಶವನ್ನು ಇಂದಿನ ಸಮಾಜದ ವಿದ್ಯಾಮಾನಗಳೊಂದಿಗೆ ಅನ್ವಯಿಸಿ ಒಂದು ಲೇಖನ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ ಕಾವ್ಯದ ಸಾಲುಗಳ ಸ್ವಾರಸ್ಯ ಬರೆಯಿರಿ.

ದಿಂಡೀರ ಪಿಂಡದಿ ಮರಾಲ ಮಂಡಿಸಿದಂತೆ
ತೆರೆದ ರೆಪ್ಪೆಯಲಿ ಕಣ್ಣಿನ ಗೊಂಬೆ ನೆಲತಂತೆ
ಕುಳಿತಿರಲು ಮೂಡಣದಿ ತಣ್ಮುಗಿಲ ಮರೆಗೆ ವೈ
ಶಾಖ ಪೂರ್ಣಿಮಿಯ ಮಾರ್ತಂಡನುದಯಿಸಿದಂ

* * *

# ಆಗು ನೀ ಅನಿಕೇತನ

**ಡಾ. ನಾ. ಮೊಗಸಾಲೆ**

ತುಕ್ಕು ಹಿಡಿದ ಸೈಕಲಿನಲ್ಲಿ ದುರ್ಗಾ ಭವನ ಹೋಟೆಲಿನ ಮುಂದೆ ಬಂದಿಳಿದ ವ್ಯಕ್ತಿಯೊಬ್ಬನು ಅದರ ಮಾಲೀಕ ಕುಪ್ಪಣ್ಣಯ್ಯನವರ ಬಳಿ "ಸ್ವಾಮಿ ಧನಿಗಳೇ; ಸಲಾಂ" ಎಂದು ಬಲಗೈ ಮೇಲೆತ್ತಿದ. ಇವನು ಯಾರು ಎಂದು ಕುಪ್ಪಣ್ಣಯ್ಯನಿಗೆ ಒಂದು ಕ್ಷಣ ತಿಳಿಯದಾಯಿತು. ಗಾಡಿ ಹುಸೇನಿ ಇರಬಹುದೆ? ಎಂಬ ಸಂಶಯವು ಬಂತು. ಹುಸೇನಿ ದಷ್ಟಪುಷ್ಟನಾಗಿದ್ದವನು. ಇವನೋ? ತಾನು ಏರಿ ಬಂದ ಸೈಕಲಿನಷ್ಟು ಬಡವಾಗಿದ್ದ. ಕಣ್ಣುಗಳು ಆಳಕ್ಕೆ ಇಳಿದಿದ್ದವು. ಗಡ್ಡ ಮತ್ತು ತಲೆ ಬೆಳ್ಳಗಾಗಿತ್ತು. ಪ್ರತಿ ಸಲಾಂ ಮಾಡಿದ ಕುಪ್ಪಣ್ಣಯ್ಯ ಆತನ ಗುರುತು ಹಿಡಿದವರಂತೆ ನಟಿಸುತ್ತಾ "ನಿಮ್ಮನ್ನೆಲ್ಲೋ ನೋಡಿದ ಹಾಗಿದೆಯಲ್ಲ?" ಎಂದರು. ಹುಸೇನಿಯಾ ಪೇಲವ ಮುಖದಲ್ಲಿ ಹುಣ್ಣಿಮೆಯ ಚಂದ್ರನಂಥ ನಗು ಬಂತು.

"ನಾನು ಹುಸೇನಿ ಸ್ವಾಮಿ, ಗಾಡಿ ಹುಸೇನಿ" ಎಂದ. ಕುಪ್ಪಣ್ಣಯ್ಯನ ಮುಖವು ಅರಳಿತು. ಅವನ ಬಳಿಗೆ ಬಂದು ಬೆನ್ನಿಗೆ ಕೈ ಹಾಕಿ "ಬನ್ನಿ, ತಿಂಡಿ ತಿನ್ನಿ" ಎಂದು ಒಂದು ಟೇಬಲಿನ ಹಿಂದೆ ಕುಳ್ಳಿರಿಸಿ "ಗೋವಿಂದಯ್ಯ, ಇವರಿಗೆ ಏನು ಬೇಕು ಅದು ಕೊಡು. ನಿನ್ನೆ ಮಾಡಿದ ಬೂಂದಿ ಲಾಡು ಇದ್ದರೆ ಅದನ್ನೂ ಕೊಡು" ಎಂದರು. ಹುಸೇನಿ ಮುಜುಗರದಿಂದ "ಅದೆಲ್ಲಾ ಬೇಡ ಸ್ವಾಮಿ, ಒಂದು ಕಪ್ ಚಹಾ ಸಾಕು" ಎಂದ. "ಅದು ಹೇಗೆ ಆಗುತ್ತದೆ ಹುಸೇನಿಯವರೇ, ಎರಡು ದಶಕಗಳ ಬಳಿಕ ನೀವು ಇಲ್ಲಿಗೆ ಬಂದಿದ್ದೀರಿ. ಆ ದಿನಗಳಲ್ಲಿ ನೀವು ಈ ರಥಬೀದಿಗೆ ಬಂದಷ್ಟು ಸಲ, ನಮ್ಮಲ್ಲಿ ಉಪಾಹಾರ ಮಾಡದೇ ಹೋದದ್ದಿಲ್ಲ. ಎತ್ತುಗಳಿಗೆ ನೀರು ಕುಡಿಸುತ್ತಿದ್ದೀರಿ" ಎಂದು ಕುಪ್ಪಣ್ಣಯ್ಯ ಮುಗುಳ್ನಕ್ಕರು.

ಹುಸೇನಿ ಉಪಾಹಾರದ ನಡುವೆ ಅದು ಇದು ಮಾತನಾಡುತ್ತಿದ್ದ. ಅಪ್ಪಿ ತಪ್ಪಿಯು ತನ್ನ ಸ್ಥಿತಿಗತಿಗಳನ್ನು ಹೇಳಲಿಲ್ಲ. ಆದರೆ ಕುಪ್ಪಣ್ಣಯನಿಗೆ ಅದನ್ನು ಕೇಳುವ ಕುತೂಹಲವಿತ್ತು. ಅವರಾಗಿಯೇ ಮಾತಿನ ನಡುವೆ "ನಿಮಗೆ ಎಷ್ಟು ಮಕ್ಕಳು? ಹೆಂಡತಿ ಹೇಗಿದ್ದಾರೆ?" ಎಂದು ಪ್ರಶ್ನಿಸಿದರು. ಹುಸೇನಿ ಮೊದಲಿಗೆ ಏನೂ ಹೇಳಲಿಲ್ಲ. ಆಮೇಲೆ "ನನಗೆ ಮಕ್ಕಳಿಲ್ಲ" ಎಂದು ಮೌನಿಯಾದ. ಕುಪ್ಪಣ್ಣಯ್ಯನಿಗೆ ಮುಂದೆ ಮಾತನಾಡಲು ಮನಸ್ಸಾಗಲಿಲ್ಲ. ಅವರ ಮುಖದಲ್ಲಿ ಮೂಡಿದ ನಿರಾಶೆಯನ್ನು ಗಮನಿಸಿದ ಹುಸೇನಿ "ಸ್ವಾಮಿ, ನನ್ನ ಹೆಂಡತಿಗೆ ಮಕ್ಕಳಾಗಲಿಲ್ಲ. ದೇವರು ಅವಳಿಗೆ ಆರೋಗ್ಯದ ಸುಖ ಕೊಡಲಿಲ್ಲ. ಈಗ ಆಕೆ ಕ್ಯಾನ್ಸರ್ ರೋಗಿ. ಒಂದು ವರ್ಷದಿಂದ ಚಿಕಿತ್ಸೆ ನಡೆಯುತ್ತಿದೆ. ಅವಳು ಬದುಕುತ್ತಾಳೆ ಎಂದು ಡಾಕ್ಟರ್ ಹೇಳುತ್ತಿದ್ದಾರೆ. ಅವಳು ಅದನ್ನು ನಂಬಿದ್ದಾಳೆ. ಆದರೆ ದಿನವೊಂದಕ್ಕೆ ನೂರಕ್ಕೂ ಮಿಕ್ಕಿ ರೂಪಾಯಿಗಳು ಔಷಧಕ್ಕೆ ಬೇಕಾಗುತ್ತದೆ. ಕರೆಂಟ್ ಚಿಕಿತ್ಸೆಗೆ (ರೇಡಿಯಮ್ ಟ್ರೀಟ್ಮೆಂಟ್) ಲಕ್ಷಕ್ಕೂ ಮಿಕ್ಕಿ ಖರ್ಚು ಮಾಡಿದೆ. ಇನ್ನು ನನ್ನದು ಎನ್ನುವುದು ಏನೂ ಇಲ್ಲ. ನನ್ನ ಬಂಧುಗಳು, ಸಮಾಜದ ಮುಖಂಡರು ನೀಡುವಷ್ಟು ನೀಡಿದ್ದಾರೆ. ಗುಜರಿ ಎತ್ತಿದ್ದರಿಂದ ಬರುವ ಐದು ನೂರು ರೂಪಾಯಿ ಅಥವಾ ವಾರಕ್ಕೊಮ್ಮೆ ಕರಿಬೇವಿನ ಸೊಪ್ಪನ್ನು

ಮಾರುವುದರಿಂದ ಬರುವ ಒಂದು ಒಂದೂವರೆ ಸಾವಿರದಿಂದ ಸುಧಾರಿಸಿಕೊಂಡು ಹೋಗುತ್ತಿದ್ದೇನೆ" ಎಂದವನೇ ಎರಡು ಕೈಗಳನ್ನು ಮುಂಚಾಚಿ "ಅಲ್ಲಾಹುವನ್ನು ದಿನಾ ಬೇಡಿಕೊಳ್ಳುತ್ತಿದ್ದೇನೆ" ಎಂದು ಪ್ರಾರ್ಥನೆ ಮಾಡುವ ಹಾಗೆ ಮಾಡಿ "ಅವ ಕೈಬಿಟ್ಟರೆ, ನಮ್ಮ ಅಪ್ಪನ ಕಾಲದ ಸೂರಿನ ಹಂಚು ತೆಗೆದು ಮಾರಬೇಕಾಗುತ್ತದೆ" ಎನ್ನುತ್ತಿದ್ದಂತೆ ಅವನ ಕೊರಳು ಉಬ್ಬಿ ಬಂದಿತು. ಕುಪ್ಪಣ್ಣಯ್ಯನವರ ಕಣ್ಣುಗಳು ಹನಿಗೂಡಿದವು. ಅವರು ಎದ್ದುನಿಂತು ಹುಸೇನಿಯ ಬಳಿ ಸಾಗಿ "ದೇವರು ಇದ್ದಾನೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ದೇವರು ಇದ್ದಾನೆ ಎಂದು ನಂಬುವವರು ನೀವು. ಆ ನಂಬಿಕೆಯೇ ನಿಮ್ಮನ್ನು ದೇವರಾಗಿ ಕಾಪಾಡುತ್ತದೆ" ಎಂದು ಅವನನ್ನು ಬಿಗಿದಪ್ಪಿ ತನ್ನ ಕಿಸೆಯಲ್ಲಿದ್ದ ಎರಡು ಐನೂರರ ನೋಟುಗಳನ್ನು ತೆಗೆದು, ಮುದ್ದೆ ಮಾಡಿ, ಅವನ ಅಂಗೈಯಲ್ಲಿಟ್ಟು ಬೆರಳುಗಳನ್ನು ಅಮುಕಿದರು.

ಹುಸೇನಿ ನಿಧಾನವಾಗಿ ಬೆಂಚಿನಲ್ಲಿ ಕುಳಿತ. ಕಣ್ಣುಗಳನ್ನು ಒರೆಸುತ್ತಾ ಅಂಗೈ ಬಿಡಿಸಿ ಕೈಯಲ್ಲಿದ್ದ ನೋಟುಗಳನ್ನು ನೋಡಿ, "ನಿಮ್ಮಲ್ಲಿ ಕರಿಬೇವಿನ ಮರಗಳಿವೆಯಂತಲ್ಲ. ನೀವು ಕೊಟ್ಟರೆ ಕೆಲವು ವಾರ ಎರಡೆರಡು ಗೋಣಿಚೀಲದಲ್ಲಿ ಹಾಕಿ ಈ ಸೈಕಲ್ಲಿನಲ್ಲಿ ಕಾರ್ಕಳಕ್ಕೆ ಕೊಂಡು ಹೋಗಬಹುದು ಎಂದುಕೊಂಡು ಬಂದೆ" ಎಂದ. "ಓ! ನೀವು ಅದಕ್ಕಾಗಿ ಬಂದದ್ದೋ? ಒಳ್ಳೇದು. ಯಾವಾಗ ಬೇಕೋ ಆವಾಗ ಬಂದು ಮೂರು ಮರಗಳ ಸೊಪ್ಪುಗಳನ್ನು ಕೊಂಡು ಹೋಗಬಹುದು." ಹುಸೇನಿ ಸಂತುಷ್ಟನಾದ "ಸ್ವಾಮಿ, ನಿಮ್ಮ ಅನುಮತಿ ನನಗೆ ದೇವರು ಕೊಟ್ಟ ವರ ಎಂದುಕೊಂಡಿದ್ದೇನೆ. ಅದರಿಂದ ಕನಿಷ್ಠ ನಾಲ್ಕೈದು ಸಾವಿರ ರೂಪಾಯಿಗಳು ಬರಬಹುದೋ ಏನೋ? ಅಷ್ಟು ಬಂದರೆ ನನ್ನ ಹೆಂಡತಿಯ ಒಂದು ತಿಂಗಳ ಚಿಕಿತ್ಸೆಗೆ ಸಾಕಾಗುತ್ತದೆ. ನಿಮ್ಮ 'ಸೊತ್ತಿಗೆ' (ವಸ್ತುವಿಗೆ)ಎಷ್ಟು ಕೊಡಬೇಕು ಎಂದು ಹೇಳಿ. ದಾಕ್ಷಿಣ್ಯ ಬೇಡ, ವ್ಯವಹಾರ ಅಂದರೆ ವ್ಯವಹಾರ"

"ನಿನ್ನ ಇಷ್ಟದಂತೆ ಕೊಡು ಎಂದು ನಾನು ಹೇಳುವುದೇ ಆಗಿದ್ದರೆ ನಿನಗೆ ಈಗ ಸಾವಿರ ರೂಪಾಯಿ ಕೊಡುತ್ತಿದ್ದೇನೆಯೇ ಹುಸೇನಿ? ಒಂದು ಪೈಸೆಯೂ ಕೊಡುವುದು ಬೇಡ." ಹುಸೇನಿ ಕೈಮುಗಿದ. "ಅದು ಆಗುವುದಿಲ್ಲ ಸ್ವಾಮಿ. ಕನಿಷ್ಠ ಒಂದು ಸಾವಿರವಾದರೂ ಇರಲಿ" ಎನ್ನುತ್ತಾ ಕುಪ್ಪಣ್ಣಯ್ಯ ನೀಡಿದ ಹಣವನ್ನು ಅವರಿಗೆ ಹಿಂದಿರುಗಿಸಲು ಮುಂದಾದ.

"ದೇವರಾಣೆಗೂ ಬೇಡ. ನಿನ್ನ ಆಧಾರ ಕಾರ್ಡಿನಲ್ಲಿ ಇರುವ ಹೆಸರು ಮತ್ತು ವಿಳಾಸವನ್ನು ಮುಂದಿನ ಸಲ ಬರುವಾಗ ತಂದು ಕೊಡು." ಎಂದರು ಕುಪ್ಪಣ್ಣಯ್ಯ.

"ಯಾಕೆ ಸ್ವಾಮಿ ಅದೆಲ್ಲಾ ?" ಹುಸೇನಿ ಆಶ್ಚರ್ಯದಿಂದ ಪ್ರಶ್ನಿಸಿದ.

"ಅದೆಲ್ಲ ನಿನಗೆ ಯಾಕೆ?" ಎಂದು ಕುಪ್ಪಣ್ಣಯ್ಯ ಹುಸೇನಿಯ ಬಾಯಿ ಮುಚ್ಚಿಸಿದರು .

ವಾರದ ಬಳಿಕ ಹುಸೇನಿಯು ಕರಿಬೇವಿನ ಸೊಪ್ಪನ್ನು ಕೊಂಡು ಹೋಗುವುದಕ್ಕಾಗಿ ಕುಪ್ಪಣ್ಣಯ್ಯನವರನ್ನು ಅವರ ಹೋಟೆಲಿನಲ್ಲಿ ಭೇಟಿಯಾದ. "ನಾನೇ ಬರುತ್ತೇನೆ ಮಾರಾಯ, ನಿನ್ನ ಜೊತೆ ನನ್ನ ಮನೆಗೆ" ಎಂದವರೇ

“ನೀನು ನನ್ನ ಸೈಕಲ್ ನಲ್ಲಿ ಎರಡು ಗಾಡಿ ಕರಿಬೇವಿನ ಸೊಪ್ಪು ಕೊಂಡು ಹೋಗುವುದು ಬೇಡ. ಇಲ್ಲಿ ನಾಲ್ಕಾರು ರಿಕ್ಷಾದವರು ಇದ್ದಾರೆ . ಅವರೆಲ್ಲ ನನ್ನ ಬಗ್ಗೆ ಗೌರವ ಇಟ್ಟುಕೊಂಡಿದ್ದಾರೆ. ಅವರಲ್ಲಿ ನಿನ್ನನ್ನೂ, ನಿನ್ನ ಸ್ವತ್ತನ್ನೂ ಒಟ್ಟಿಗೆ ಕಳಿಸುತ್ತೇನೆ” ಎಂದು ಹುಸೇನಿಯಿಂದ ಅವನ ಆಧಾರ ಕಾರ್ಡು ತೆಗೆದುಕೊಂಡು ತನ್ನ ಸ್ಮಾರ್ಟ್ ಫೋನಿನಲ್ಲಿ ಫೋಟೋ ಹೊಡೆದು, “ನಡೆಯಿರಿ” ಎಂದು ಹುಸೇನಿಯನ್ನು ತನ್ನ ಮನೆಗೆ ರಿಕ್ಷಾದಲ್ಲಿ ಕರೆದೊಯ್ದರು .

ಕರಿಬೇವಿನ ಸೊಪ್ಪುಗಳನ್ನುತುಂಬಿಕೊಳ್ಳಲು ಹುಸೇನಿ ಎರಡು ಗೋಣಿ ತಂದಿದ್ದ. ಕುಪ್ಪಣ್ಣಯ್ಯಮನೆಯಲ್ಲಿದ್ದ ಎರಡು ಗೋಣಿಗಳನ್ನು ಅವನಿಗೆ ನೀಡಿ, ಒಟ್ಟು ನಾಲ್ಕು ಗೋಣಿ ತುಂಬಾ ಕರಿಬೇವಿನ ಸೊಪ್ಪಿನೊಂದಿಗೆ ಅವನನ್ನು ರಿಕ್ಷಾದಲ್ಲಿ ಕಾರ್ಕಳಕ್ಕೆ ಕಳುಹಿಸಿದರು. “ನಾಳೆ ಬಂದು ನಿಮ್ಮ ಸೈಕಲ್ ಕೊಂಡು ಹೋಗಿ” ಎಂದೂ ಹೇಳಿದರು.

ಕುಪ್ಪಣ್ಣಯ್ಯ ರಾತ್ರಿ ಮನೆಗೆ ಬಂದಾಗ ದಿನನಿತ್ಯದ ಹಾಗೆ ಅವರನ್ನು ಸ್ವಾಗತಿಸಿದ ಅವರ ಪತ್ನಿ ಪ್ರೇಮಕ್ಕ “ಏನು ನೀವು ಇದ್ದಕ್ಕಿದ್ದ ಹಾಗೆ ಬೆಳಗ್ಗೆ ಆ ಸಾಬಿಯನ್ನು ಕರೆದುಕೊಂಡು ಮನೆಗೆ ಬಂದು, ಆ ಕರಿಬೇವಿನ ಕೊಂಬೆಗಳನ್ನು ಕಡಿಸಿದ್ದು? ನಮ್ಮ ಮಕ್ಕಳ ಹಾಗೆ ಅವು ಬೆಳೆದಿವೆ. ಅವುಗಳ ರೆಂಬೆ ಕತ್ತರಿಸುವಾಗ ನಮ್ಮ ಮಕ್ಕಳ ಕೈ ಕಡಿದ ಹಾಗೆ ಅನಿಸಿತು ನನಗೆ” ಎಂದು ಖೇದ ವ್ಯಕ್ತಪಡಿಸಿದರು. ಕುಪ್ಪಣ್ಣಯ್ಯ ಒಂದು ನಿಮಿಷ ಮಾತನಾಡಲಿಲ್ಲ. ಆಮೇಲೆ ಗಂಭೀರವಾಗಿ “ನೀನು ಇದಕ್ಕೆ ಒಪ್ಪುವುದಿಲ್ಲ ಎಂದು ಗೊತ್ತಿತ್ತು . ಆದರೆ ಒಂದು ಜೀವ ಉಳಿಸಲಿಕ್ಕೆ ಈ ಕರಿಬೇವಿನ ಸೊಪ್ಪು ನೆರವಾಗುವುದಾದರೆ, ಆಗಲಿ ಎಂದು ಕೊಟ್ಟೆ. ಆದರೆ ಮಾರಾಟ ಮಾಡಿಲ್ಲ, ಕ್ಷಮಿಸು” ಎಂದರು. ಸ್ವಲ್ಪ ಹೊತ್ತಿನ ಮೌನದ ಬಳಿಕ ಮೆಲ್ಲಗೆ ಕೇಳಿದರು. “ನಿನಗೆ ಹುಸೇನಿಯ ಕಥೆ ಗೊತ್ತಾ?” “ನನಗೆ ಅವನ ಕಥೆ ಯಾಕೆ ಬೇಕು?” ಎಂದು ಪ್ರೇಮಕ್ಕ ಪ್ರಶ್ನಿಸಿದಾಗ “ಬಾ,ಇಲ್ಲಿ ಕುಳಿತುಕೋ” ಎಂದು ತಾನು ಕುಳಿತ ಮಂಚಕ್ಕೆ ಕರೆದ ಕುಪ್ಪಣ್ಣಯ್ಯ “ನಿನಗೆ ಬಚ್ಚಿರೆ ಬಾಯಿಯ ಹೆಸರು ಗೊತ್ತೋ” ಎಂದು ನಗುತ್ತಾ ಪತ್ನಿಯ ಮುಖ ನೋಡಿದರು. “ವೀಳ್ಯದೆಲೆ ಮಾರಾಟ ಮಾಡುವ ನತ್ತಲಾ ತಾನೇ? ನೀವು ಅನೇಕ ಬಾರಿ ನನ್ನ ಹತ್ತಿರ ಅವಳ ಹೆಸರು ಹೇಳಿದ್ದೀರಿ. ಆಗ ನಾನೇನು ಕುತೂಹಲ ತೋರಿಸಿಲ್ಲ. ಈಗಲೂ ಇಲ್ಲ.” “ಆದರೆ ಆ ಬಚ್ಚಿರೆ ಬಾಯಿ ಜೀವನದಲ್ಲಿ ಎಷ್ಟು ಕಷ್ಟಪಟ್ಟಿದ್ದಾಳೆ ಅಂದರೆ, ನನಗೆ ಅವಳು ತನ್ನ ಗಂಡನ ಕುಡಿತದ ವಿಚಾರ ಹೋಟೇಲಿನಲ್ಲಿ ಬಂದು ಹೇಳುವಾಗ ಕಣ್ಣು ಹನಿಗೂಡುತ್ತಿತ್ತು. ಒಂದು ಕಥೆ ಹೇಳುತ್ತೇನೆ ಕೇಳು.” ಪ್ರೇಮಕ್ಕನಿಗೆ ಕತೆ ಕೇಳಲು ಇಷ್ಟ ಇಲ್ಲದಿದ್ದರೂ ಗಂಡನನ್ನು ನೋಯಿಸಬಾರದೆಂಬಂತೆ ಆಕೆ ‘ಹ್ಞೂಂ’ ಎಂದು ಮೌನವಾದರು.

ಮಿತ್ತೊಟ್ಟು ಇನಾಸ ಪುರ್ಬು ಅಂದರೆ ಸುಮಾರು ಹತ್ತಿಪ್ಪತ್ತು ವರ್ಷಗಳ ಹಿಂದೆ, ಸೀತಾಪುರದ ಬೀದಿಯಲ್ಲಿ ಎಲ್ಲರಿಗೂ ಚಿರಪರಿಚಿತ ವ್ಯಕ್ತಿ. ಆತ ಚಿರಪರಿಚಿತನಾದದ್ದು ಸಮಾಜಮುಖಿ ಕೆಲಸದಿಂದಲ್ಲ. ಮೂಗಿನ ಮೇಲಿನ ತನಕ ಕುಡಿದು ಹಗಲಿರುಳೆನ್ನದೇ ರಸ್ತೆಯ ಉದ್ದಗಲ ಅಳೆಯುತ್ತಾ ಸಿಕ್ಕು ಸಿಕ್ಕವರಿಗೆ ಬಾಯಿಗೆ ಬಂದ ಹಾಗೆ ಬೈಗುಳದ ಮಳೆಗರೆಯುವುದರಿಂದ! ಒಮ್ಮೊಮ್ಮೆ ಅವನು ಆ ರೀತಿ ವರ್ತಿಸಲು ಆಗದೆ ರಥ ಬೀದಿಯ ಮಾವಿನ ಮರದ ಇಲ್ಲವೇ ಅಶ್ವತ್ಥ ಮರದ ನೆರಳಲ್ಲೋ ಬೀಳುತ್ತಿದ್ದ. ನಡುರಾತ್ರಿ ಎಚ್ಚರವಾಗಿ ಮನೆಗೆ ಹೋಗಿ ‘ನೀನು ಯಾಕೆ ನನ್ನನ್ನು

ಕರೆದೊಯ್ಯಲು ರಥ ಬೀದಿಗೆ ಬರಲಿಲ್ಲ' ಎಂದು ಹೆಂಡತಿಗೆ ಹೊಡೆಯುತ್ತಿದ್ದ. ಇದನ್ನೆಲ್ಲಾ ಸಹಿಸಿಕೊಂಡು ಸಂಸಾರ ತೂಗಿಸುತ್ತಿದ್ದ ಬಚ್ಚಿರೆ ಬಾಯಿಗೆ, ಗಂಡನನ್ನು ಬಿಟ್ಟು ತವರಿಗೆ ಹೋಗಲೂ ಅಲ್ಲ, ಇಲ್ಲಿದ್ದು ಬದುಕಲೂ ಅಲ್ಲ ಎಂಬ ಸ್ಥಿತಿ ಇತ್ತು.

ಈ ದಂಪತಿಗೆ ಸಿರಿಲ್ ಎಂಬ ಒಬ್ಬನೇ ಮಗ. ಆಟ ಪಾಠಗಳಲ್ಲಿ ಜಾಣ. ಒಂದು ಸಲ ಕಬಡ್ಡಿ ಆಟವಾಡುವಾಗ ಬಿದ್ದು ಕೈ ಮುರಿದುಕೊಂಡ. ನೋವನ್ನು ಅನುಭವಿಸುತ್ತಾ ಮನೆಗೆ ಬಂದಾಗ ಇನಾಸ ಕುಡಿದಿರಲಿಲ್ಲ. ಕುಡಿಯುವುದಕ್ಕಾಗಿ ಮನೆಯಿಂದ ಯಾವ ವಸ್ತುವನ್ನು ಕೊಂಡೊಯ್ದು ಮಾರಬಹುದು ಎಂಬ ಲೆಕ್ಕಾಚಾರದಲ್ಲಿ ಇದ್ದಂತಿದ್ದ. ಮಗನ ನೋವನ್ನು ಕಂಡ ಇನಾಸನಿಗೆ 'ಅಯ್ಯೋ' ಅನಿಸಿತು. ಕೂಡಲೇ ಕಾರ್ಕಳಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಬೇಕೆಂದರೆ ಕೈಯಲ್ಲಿ ಚಿಕ್ಕಾಸು ಇರಲಿಲ್ಲ "ನಿನ್ನಲ್ಲಿ ಏನಾದರೂ ಇದೆಯಾ ನತ್ತಲಾ?" ಎಂದು ಆತ ಪತ್ನಿಯನ್ನು ಪ್ರಶ್ನಿಸಿದಾಗ ಆಕೆ "ನನ್ನಲ್ಲಿರುವುದು ಬಟ್ಟೆಯಿಂದ ಮಾಡಿರುವ ಕುರೂಸು (ಕ್ರಾಸ್) ಮಾತ್ರ" ಎಂದು ಅತ್ತಳು. ಇನಾಸನಿಗೆ ದುಃಖವಾಯಿತು. ಮಗನನ್ನು ತನ್ನ ಜೊತೆ ಎಬ್ಬಿಸಿ "ನತ್ತಲಾ, ನಾನು ರಥ ಬೀದಿಗೆ ಹೋಗಿ ರಾಮಣ್ಣನವರಲ್ಲಿ ನೂರು ರೂಪಾಯಿ ಸಾಲ ಕೇಳಿ ಬರುತ್ತೇನೆ. ಆದರೆ ಅವರು ಸಾಲ ಕೊಡಬೇಕಾದರೆ, ಕೈ ಮುರಿದ ಇವನನ್ನು ತೋರಿಸಬೇಕಾಗುತ್ತದೆ" ಎಂದ. ರಾಮಣ್ಣನವರು ತನ್ನ ಗಂಡನಿಗೆ ಸಾಲ ಕೊಡುವವರಲ್ಲ ಎಂದು ನತ್ತಲಾಳಿಗೆ ಗೊತ್ತಿತ್ತು. ತಾನು ಹೋಗಿ ಕೇಳಿದರೆ ಕೊಡಬಹುದು ಎಂಬ ಧೈರ್ಯವಿತ್ತು. ಆ ಮಾತನ್ನೇ ಅವಳು ಗಂಡನಿಗೆ ಹೇಳಿದಳು. ಇನಾಸನಿಗೆ ಸಿಟ್ಟು ಬಂತು 'ನಾನು ಅಂತ ಪಡಪೋಸಿ ಎಂದು ಅವರು ಸಾಲ ಕೊಡದಿದ್ದರೆ ಬೇಡ. ಬೇರೆ ಯಾರಾದರೂ ಸಿಕ್ಕಿಯಾರು. ಯೇಸು ನನ್ನ ಜೊತೆ ಇದ್ದಾನೆ' ಎನ್ನುತ್ತಾ ಮಗನೊಟ್ಟಿಗೆ ರಥ ಬೀದಿಗೆ ಬಂದ.



ತಂದೆ ಮಗ ಇಬ್ಬರು ರಥ ಬೀದಿಗೆ ಬರುವಾಗ ಗಾಡಿ ಹುಸೇನಿ ಆಗತಾನೆ ಬಾಲಾಡಿಯಿಂದ ತಂದ ದಿನಸಿ ಸಾಮಾನುಗಳನ್ನು ಗಾಡಿಯಿಂದ ಇಳಿಸುತ್ತಿದ್ದ. ತಾನು ಮೊದಲ ದಿನ ಬಾಲಾಡಿಯ ಕಾಮತರಿಗೆ ಕಳುಹಿಸಿದ್ದ ಜಿನಸಿ ಸಾಮಾನಿನ ಪಟ್ಟಿಗೆ ಈಗ ಬಂದವುಗಳು ಸರಿಯಾಗಿವೆಯೇ ಎಂದು ತಾಳೆ ನೋಡುವುದರಲ್ಲಿ ರಾಮಣ್ಣನವರು ಮಗ್ನರಾಗಿದ್ದರು. ಅವರಿಗೆ ಎಂದೂ ಕೈ ಮುಗಿಯದ ಇನಾಸ ಅವರಿಗೆ ಕೈಮುಗಿದು 'ಸ್ವಾಮಿ ನನ್ನ ಮಗನ ಅವಸ್ಥೆ ನೋಡಿ' ಎಂದು ಗದ್ಗದಿತನಾಗಿ ಹೇಳಿದ. 'ಎಂಥಾ ಆಟವೋ ಏನೋ! ಬಿದ್ದು ಕೈ ಮುರಿದು ಕೊಂಡಿದ್ದಾನೆ. ನಾಳೆ ಕಾರ್ಕಳಕ್ಕೆ ಹೋಗಿ ಚಿಕಿತ್ಸೆ ಕೊಡಿಸಲಿಕ್ಕೆ ನೂರು ರೂಪಾಯಿ ಸಾಲ ಬೇಕಿತ್ತು' ಎಂದು, ಕೈಗೆ ಬಟ್ಟೆ ಸುತ್ತಿಕೊಂಡಿದ್ದ ಮಗನಲ್ಲಿ 'ನಿನ್ನ ಕೈ ತೋರಿಸು' ಎಂದ. ಸಮೀಪಕ್ಕೆ ಬಂದು ಕೈ ತೋರಿಸಿದ ಸಿರಿಲ್ ನನ್ನು ರಾಮಣ್ಣನವರು ಕಂಡೂ ಕಾಣದ ಹಾಗೆ 'ಇಲ್ಲ. ನಯಾ ಪೈಸೆ ಕೊಡುವುದಿಲ್ಲ. ನೀನೇ ಕುಡಿದು ಇವನ ಕೈ ಮುರಿದಿರಬೇಕು' ಎಂದರು. ಇನಾಸ ಮತ್ತೆ ಎರಡು ಕೈಜೋಡಿಸಿ "ನಾನು ಇವನ ಕೈ ಮುರಿದಿಲ್ಲ ಸ್ವಾಮಿ. ಅವನು ಕಬಡ್ಡಿ ಆಡುವಾಗ ಬಿದ್ದು ಕೈ ಮುರಿದುಕೊಂಡ" ಎಂದ. ರಾಮಣ್ಣ ಅವರಿಗೆ ಸಿಟ್ಟು ಬಂದು "ನೀನೊಬ್ಬ ಮೂರ್ಖ. ಒಂದು ದಿನವಾದರೂ ಈ ಮಗುವಿಗಾಗಿ ನಮ್ಮ ಅಂಗಡಿಯಿಂದ ಒಂದು ಬಿಸ್ಕೇಟ್ ಪ್ಯಾಕಾದರೂ ಕೊಂಡು ಹೋದದ್ದಿದೆಯ? ಈಗ ಎಲ್ಲಿಂದ ಬಂತು ಪ್ರೀತಿ? ಎಷ್ಟು ಹೊತ್ತು ನಿಂತರೂ ನಿನಗೆ ಇಲ್ಲಿಂದ ಚಿಕ್ಕಾಸು ಸಿಗದು!" ಎಂದರು. ಇನಾಸನಿಗೆ ಕೋಪ ಬಂತು. ಕುಡಿದಿದ್ದರೆ ಆತ ರಾಮಣ್ಣನವರ ಮೇಲೆ ಏರಿ ಹೋಗುತ್ತಿದ್ದನೋ ಏನೋ! ಆದರೆ ತಾನು ಈಗ ದುಡುಕಿದರೆ, ಭಟ್ಟರ ಅಂಗಡಿಯಲ್ಲಿರುವ ಗ್ರಾಹಕರು ತನ್ನ ಮೇಲೆ ಮುಗಿಬಿದ್ದಾರು ಎಂದುಕೊಂಡು ಹೆಜ್ಜೆ ಹಿಂದಕ್ಕಿಟ್ಟು 'ಮುಂದೇನು?' ಎಂಬಂತೆ ಆಚೀಚೆ ನೋಡತೊಡಗಿದ. ಆಗ ಗಾಡಿ ಹುಸೇನಿ ಅವನನ್ನು ಕೈ ಸನ್ನೆಯಲ್ಲಿ ಕರೆದು ನನ್ನ ಹೋಟೆಲಿಗೆ ಬರಲು ಸೂಚಿಸಿದ. ಆ ಮೇಲೆ 'ಭಟ್ಟರೇ, ನನ್ನ ಬಾಡಿಗೆ ಕೊಟ್ಟು ಬಿಡಿ. ಚಾ ಕುಡಿಯಲು ಹೋಟೇಲಿಗೆ ಹೋಗಬೇಕು' ಎಂದ. ರಾಮಣ್ಣನವರು ಹನ್ನೆರಡು ರೂಪಾಯಿ ಬಾಡಿಗೆ ಕೊಟ್ಟರು. ಅದನ್ನು ಹಿಡಿದುಕೊಂಡು ಹುಸೇನಿ ಕುಪ್ಪಣ್ಣಯ್ಯನವರ ಹೋಟೇಲಿಗೆ ತಂದೆ ಮಗನನ್ನು ಕರೆದೊಯ್ದ. ಇನಾಸ ಕುಡಿಯದೇ ಬಂದದ್ದು, ಅವನ ಮಗ ಕೈಗೆ ಬಟ್ಟೆ ಸುತ್ತಿಕೊಂಡದ್ದು, ಹುಸೇನಿ ಇಬ್ಬರನ್ನೂ ಕರೆದುಕೊಂಡು ಬರುವುದನ್ನು ನೋಡಿ ನಾನು ಗಾಬರಿಯಾದೆ. ಹುಸೇನಿ ನನಗೆ ಎಲ್ಲವನ್ನೂ ವಿವರಿಸಿದ.

ಸಿರಿಲ್ ತೀವ್ರವಾಗಿ ನೋವನುಭವಿಸುತ್ತಿದ್ದ. ಅವನಿಗಿಂತ ಹೆಚ್ಚಿನ ನೋವು ಇನಾಸನಲ್ಲಿತ್ತು. ನಾನು ಅದನ್ನು ಗಮನಿಸಿ 'ನನ್ನ ಹೋಟೇಲಿನಲ್ಲಿ ದಿನಕ್ಕೆ ನೂರೈವತ್ತು, ಇನ್ನೂರು ರೂಪಾಯಿಗಳ ವ್ಯಾಪಾರ ಇದೆ. ಬೆಳಗ್ಗಿನ ವ್ಯಾಪಾರದ ದುಡ್ಡನ್ನು ಮಧ್ಯಾಹ್ನ ಊಟಕ್ಕೆ ಹೋಗುವಾಗ ಮನೆಗೆ ಒಯ್ದಿದ್ದೇನೆ. ಈಗ ಎಷ್ಟಿದೆಯೋ ನೋಡುತ್ತೇನೆ' ಎಂದು ಗಲ್ಲಾ ಪೆಟ್ಟಿಗೆಯಲ್ಲಿದ್ದ ನೋಟು ಮತ್ತು ಚಿಲ್ಲರೆಗಳನ್ನೆಲ್ಲ ಮೇಜಿನ ಮೇಲೆ ಸುರಿದು, ಲೆಕ್ಕ ಮಾಡಿ "ಎಪ್ಪತ್ತಾರು ರೂಪಾಯಿ ಐವತ್ತು ಪೈಸೆ ಇದೆ.ಇಷ್ಟನ್ನೂ ಕೊಡಬಲ್ಲೆ. ಹೆಚ್ಚಿಗೆ ಕೊಡಬೇಕಾದರೆ ಮನೆಗೆ ಹೋಗಿ ತರಬೇಕು" ಎಂದೆ. ಹುಸೇನಿಯ ಮುಖ ಅರಳಿತು! "ನನ್ನಲ್ಲಿ ಬಾಡಿಗೆಯ ಹನ್ನೆರಡು ರೂಪಾಯಿಗಳಿವೆ. ಅದನ್ನು ನಾನು ಇವನಿಗೆ ಕೊಡುತ್ತೇನೆ.

ನಿಮ್ಮದು ನನ್ನದೂ ಸೇರಿ ಎಂಬತ್ತೆಂಟು ರೂಪಾಯಿ ಆಯ್ತಲ್ಲ?" ಎನ್ನುತ್ತಾ ಆತನು ಇನಾಸನ ಮುಖ ನೋಡಿದ. ಅವನು ಗರಬಡಿದಂತೆ ನಿಂತಿದ್ದ. ಹುಸೇನಿ ಆ ದುಡ್ಡನ್ನು ಇನಾಸನ ಕೈಯಲ್ಲಿಡುತ್ತಿದ್ದಂತೆ ಕಣ್ಣು ತುಂಬಿಕೊಂಡು ನಮಗೆ ನಮಸ್ಕರಿಸಿ ಹೊರಟು ಹೋದ.

ಇಷ್ಟು ಹೇಳಿದ ಕುಪ್ಪಣ್ಣಯ್ಯ "ನಾನು ಆ ಹುಸೇನಿಯಷ್ಟು ದೊಡ್ಡ ವ್ಯಕ್ತಿ ಅಲ್ಲ. ಆದರೆ ಅವನಿಗೆ ನೆರವಾಗುವುದು ನನ್ನ ಕರ್ತವ್ಯ. ಈಗ ಇನಾಸ ಸತ್ತಿದ್ದಾನೆ. ಬಚ್ಚಿರೆ ಬಾಯಿ ಬದುಕಿದ್ದಾಳೆ. ರಾಮಣ್ಣನ ಅಂಗಡಿಗೆ ದಿನವೂ ಬಚ್ಚಿರೆ ತಂದು ಕೊಡುತ್ತಾಳೆ. ಅವನ ಮಗ ಸಿರಿಲ್ ದುಬೈಯಲ್ಲಿ ಎಲೆಕ್ಟ್ರೀಶಿಯನ್ ಆಗಿದ್ದಾನಂತೆ. ಕೈತುಂಬಾ ಸಂಪಾದನೆ ಇದೆಯಂತೆ. ನೀನು ಬಚ್ಚಿರೆ ಮಾರುವುದು ಬೇಡ ಎಂದು ಅಮ್ಮನಿಗೆ ಹೇಳುತ್ತಾನಂತೆ. ಆದರೆ ಇವಳು ಕೇಳಬೇಕಲ್ಲ? ನಾಳೆ ನಾನು ಅವಳಿಂದ ಸಿರಿಲನ ಫೋನು ನಂಬ್ರ ತೆಗೆದುಕೊಂಡು ಅವನಿಗೆ ಫೋನ್ ಮಾಡಿ ಹುಸೇನಿಯ ಅವಸ್ಥೆ ಹೇಳುತ್ತೇನೆ. ಅವನಿಗೆ ಆ ಘಟನೆ ನೆನಪಿದ್ದರೆ ಅವನು ಹುಸೇನಿಗೆ ಖಂಡಿತ ನೆರವಾಗುತ್ತಾನೆ" ಎಂದರು.

"ಇದೆಲ್ಲಾ ನನಗೆ ಹೇಗೆ ಗೊತ್ತಾಗಬೇಕು?ನಾವು ಎಷ್ಟಾದರೂ ಮನೆಯೊಳಗೆ ಬಂಧಿಗಳು. ಸರಿ ಹಾಗೆ ಮಾಡಿ ಒಳ್ಳೇದಾಗಲಿ" ಎಂದಳು ಪ್ರೇಮಕ್ಕ.

ಎರಡು ದಿನದ ಮೇಲೆ ಕುಪ್ಪಣ್ಣಯ್ಯ ಬಚ್ಚಿರೆಬಾಯಿಯ ಬಳಿಯಿಂದ ಸಿರಿಲ್‌ನ ಫೋನು ನಂಬರ್ ತೆಗೆದುಕೊಂಡು ಆತನಿಗೆ ಫೋನು ಹಚ್ಚಿದರು. "ನೀನು ಬಿದ್ದು ಕೈ ಮುರಿದುಕೊಂಡಿದ್ದಾಗ ಹುಸೇನಿ ಹೇಗೆ ನಿನಗೆ ಸಹಕರಿಸಿದ್ದರು, ಈಗ ಅದೇ ಹುಸೇನಿಯ ಹೆಂಡತಿಗೆ ಹುಷಾರಿಲ್ಲ ಅವನು ಕಷ್ಟದಲ್ಲಿದ್ದಾನೆ" ಎಂದು ಒತ್ತಿ ಹೇಳಿ ಆತನ ಆಧಾರ್ ಕಾರ್ಡನ್ನು ವಾಟ್ಸಾಪ್ ನಲ್ಲಿ ನಿನಗೆ ಕಳುಹಿಸುತ್ತಿದ್ದೇನೆ ಎಂದು ಅದರ ಫೋಟೋವನ್ನು ವಾಟ್ಸಪ್ ಮೂಲಕ ಕಳುಹಿಸಿದರು. ಸಿರಿಲ್ ಮೌನವಾಗಿ ಕೇಳಿಸಿಕೊಂಡನೇ ಹೊರತು ಮಾತೇ ಆಡಲಿಲ್ಲ. ಕುಪ್ಪಣ್ಣಯ್ಯನಿಗೆ ನಿರಾಶೆಯಾಯಿತು.

ಹದಿನೈದು ದಿನಗಳ ಮೇಲೆ ಸಿರಿಲ್ ನಿಂದ ಕುಪ್ಪಣ್ಣಯ್ಯನಿಗೆ ಒಂದು ರಿಜಿಸ್ಟರ್ಡ್ ಕವರು ಬಂತು.ಅದರಲ್ಲಿ ಒಂದು ಲಕ್ಷದ ಚೆಕ್ ಮತ್ತು ಒಂದು ಸಣ್ಣ ಪತ್ರ ಇತ್ತು. "ನನಗೆ ಒಂದು ಅಪರೂಪದ ಅವಕಾಶ ಕಲ್ಪಿಸಿಕೊಟ್ಟ ನಿಮಗೆ ದೇವರು ಒಳ್ಳೇದು ಮಾಡಲಿ" ಎಂಬ ಒಕ್ಕಣೆಯ ಜೊತೆ ಈ ಚೆಕ್ಕನ್ನು ಹುಸೇನಿಗೆ ನೀವೇ ತಲುಪಿಸಿ ಎಂದು ಆ ಪತ್ರದಲ್ಲಿ ಬರೆದಿತ್ತು.

## ಲೇಖಕರ ಪರಿಚಯ



ಡಾ. ನಾರಾಯಣ ಭಟ್ಟ ಮೊಗಸಾಲೆಯವರು ಮಂಜೇಶ್ವರ ತಾಲೂಕಿನ ಕೋಳ್ಯೂರು ಗ್ರಾಮದ ಮೊಗಸಾಲೆಯಲ್ಲಿ ೨೭ ಆಗಸ್ಟ್ ೧೯೪೪ ರಂದು ಜನಿಸಿದರು. ತಂದೆ ವಿಠಲ ಭಟ್ಟ, ತಾಯಿ ಸರಸ್ವತಿ. ಕನ್ಯಾನದ ಸರಕಾರಿ ಪ್ರೌಢಶಾಲೆಯಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಪೂರೈಸಿ, ಆಯುರ್ವೇದ ಕಾಲೇಜಿನಲ್ಲಿ ಡಿ.ಎಸ್.ಎ.ಸಿ ಡಿಪ್ಲೋಮ ಪದವಿಯನ್ನು ಪಡೆದರು. ವರ್ತಮಾನದ ಮುಖಗಳು, ಪಲ್ಲವಿ, ಪ್ರಭವ, ನೆಲದ ನೆರಳು, ಇಹಪರದ ಕೊಳ, ಕಾಮನೆಯ ಬೆಡಗು, ಪೂರ್ವೋತ್ತರ ಮುಂತಾದವುಗಳು ಇವರ ಪ್ರಮುಖ ಕವನ ಸಂಕಲನಗಳಾಗಿವೆ.

ಮಣ್ಣಿನ ಮಕ್ಕಳು, ಅನಂತ, ಕನಸಿನ ಬಳ್ಳಿ, ಪಲ್ಲಟ, ಪ್ರಕೃತಿ, ನೆಲ ಮುಗಿಲುಗಳ ಮಧ್ಯೆ, ಉಲ್ಲಂಘನೆ, ಮುಖಾಂತರ, ಇದ್ದೂ ಇಲ್ಲದ್ದು, ಭಾರತ ಕಥಾ ಇತ್ಯಾದಿಗಳು ಇವರ ಪ್ರಸಿದ್ಧ ಕಾದಂಬರಿಗಳಾಗಿವೆ. ಆಶಾಂಕುರ, ಹಸಿರುಬಿಸಿಲು, ಸುಂದರಿಯ ಎರಡನೇ ಅವತಾರ, ಸೀತಾಪುರದ ಕಥೆಗಳು, ಸನ್ನಿಧಿಯಲ್ಲಿ ಸೀತಾಪುರ, ಆಗು ನೀ ಅನಿಕೇತನ ಇವುಗಳು ಅವರ ಸಣ್ಣ ಕಥೆಗಳ ಸಂಕಲನಗಳಾಗಿವೆ. ಪುರೂರವ ಎಂಬ ಗೀತಾನಾಟಕವನ್ನೂ ರಚಿಸಿದ್ದಾರೆ. ಮೂರು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಗಳಗನಾಥ ಪ್ರಶಸ್ತಿ ಮಾತ್ರವಲ್ಲದೆ ಇಪ್ಪತ್ತಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಪಡೆದಿರುವ ಇವರು ಕಾರ್ಕಳ ಸಮೀಪದ ಕಾಂತಾವರದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಕತೆಯನ್ನು 'ಆಗು ನೀ ಅನಿಕೇತನ' ಎಂಬ ಕಥಾಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಹುಸೇನಿಯು ಯಾವ ವೃತ್ತಿಯನ್ನು ನಡೆಸುತ್ತಿದ್ದನು?
2. ಸಿರಿಲ್ ಕೈಮುರಿದು ಕೊಂಡಾಗ ಇನಾಸ ಪುರ್ಬು ಏನು ಮಾಡಿದನು?
3. ಕುಪ್ಪಣ್ಣಯ್ಯ ಹಾಗೂ ಹುಸೇನಿಯು ಸಿರಿಲ್ ಗೆ ಯಾವ ರೀತಿಯಲ್ಲಿ ಹಣವನ್ನು ಸಂಗ್ರಹಿಸಿ ನೀಡಿದರು?
4. ಕುಪ್ಪಣ್ಣಯ್ಯನವರು ಹುಸೇನಿಯಲ್ಲಿ ಆತನ ಆಧಾರ ಕಾರ್ಡು ತರಲು ಹೇಳಿದುದು ಯಾಕೆ?

## ಸಂಕ್ಷಿಪ್ತವಾಗಿ ಬರೆಯಿರಿ

ಪಾಠದ ಪ್ರಧಾನ ಘಟನೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

## ಪಾತ್ರ ಚಿತ್ರಣವನ್ನು ಮಾಡಿರಿ

ಈ ಪಾಠದಲ್ಲಿ ಬಂದಿರುವ ಹುಸೇನಿಯ ಪಾತ್ರ ಚಿತ್ರಣವನ್ನು ಮಾಡಿರಿ.

## ಟಿಪ್ಪಣಿ ನೀಡಿರಿ

'ಆಗು ನೀ ಅನಿಕೇತನ' ಎಂಬ ಶೀರ್ಷಿಕೆಯ ಔಚಿತ್ಯವನ್ನು ವಿಶ್ಲೇಷಿಸಿ ಟಿಪ್ಪಣಿ ಬರೆಯಿರಿ.

## ಸಂಭಾಷಣೆ ಬರೆಯಿರಿ

ಹುಸೇನಿಯ ಹೆಂಡತಿಯ ಚಿಕಿತ್ಸೆಗೆ ಬೇಕಾಗಿ ಸಿರಿಲ್ ಒಂದು ಲಕ್ಷದ ಚೆಕ್ ಕಳಿಸಿಕೊಡುತ್ತಾನೆ. ಇದಾದ ಸ್ವಲ್ಪ ಸಮಯದ ಬಳಿಕ ಸಿರಿಲ್ ಊರಿಗೆ ಬಂದು ಹುಸೇನಿಯನ್ನು ಭೇಟಿಯಾಗುತ್ತಾನೆಂದು ಭಾವಿಸಿರಿ. ಆಗ ಅವರೊಳಗೆ ನಡೆಯಬಹುದಾದ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

## ಪ್ರಬಂಧ ಬರೆಯಿರಿ

ಹುಸೇನಿಯು ಇನಾಸನ ಮಗನ ಚಿಕಿತ್ಸೆಗೆ ಧನಸಹಾಯ ಮಾಡಿದ. ಕೊನೆಗೆ ಕುಪ್ಪಣ್ಣಯ್ಯ ಹುಸೇನಿಯ ಹೆಂಡತಿಯ ಚಿಕಿತ್ಸೆಗೆ ಸಹಾಯ ಮಾಡಿದುದಲ್ಲದೆ ಇತರರಿಂದ ಸಹಾಯ ಧನವನ್ನು ಒದಗಿಸಿಕೊಟ್ಟ ವಿಚಾರಗಳನ್ನು ಈ ಪಾಠಭಾಗದಲ್ಲಿ ಓದಿ ತಿಳಿದಿರುವಿರಿ. ಇದರ ಆಧಾರದಲ್ಲಿ 'ಸಮಾಜದಲ್ಲಿ ಸಾಮರಸ್ಯದ ಬದುಕು' ಎಂಬ ವಿಷಯದ ಕುರಿತು ಒಂದು ಪ್ರಬಂಧ ಬರೆಯಿರಿ.

## ವಾಕ್ಯ ರಚಿಸಿರಿ

ಕೆಳಗೆ ನೀಡಲಾದ ವಾಕ್ಯದಲ್ಲಿ ಅಡಿಗೆರೆ ಎಳೆದ ಭಾಷಾ ಪ್ರಯೋಗಗಳನ್ನು ಬಳಸಿ ಬೇರೆ ವಾಕ್ಯಗಳನ್ನು ರಚಿಸಿರಿ.

- ಮರಗಳ ರೆಂಬೆ ಕತ್ತರಿಸುವಾಗ ನಮ್ಮ ಮಕ್ಕಳ ಕೈ ಕಡಿದ ಹಾಗೆ ಎನಿಸಿತು ಎಂದು ಪ್ರೇಮಕ್ಕ ಖೇದ ವ್ಯಕ್ತಪಡಿಸಿದರು.
- ಇನಾಸನು ಮೂಗಿನ ಮೇಲಿನ ತನಕ ಕುಡಿದು ರಸ್ತೆಯ ಉದ್ದಗಲವನ್ನು ಅಳೆಯುತ್ತಿದ್ದನು.
- ನಮ್ಮ ಅಪ್ಪನ ಕಾಲದ ಸೂರಿನ ಹಂಚು ತೆಗೆದು ಮಾರಬೇಕಾಗುತ್ತದೆ ಎನ್ನುತ್ತಿದ್ದಂತೆ ಹುಸೇನಿಯ ಕೊರಳು ಉಬ್ಬಿ ಬಂದಿತು.
- ಹುಸೇನಿಯ ಮಾತುಗಳನ್ನು ಕೇಳಿ ಕುಪ್ಪಣ್ಣಯ್ಯನವರ ಕಣ್ಣುಗಳು ಹನಿಗೂಡಿದವು.

## ಜೋಡುನುಡಿಗಳನ್ನು ಪಟ್ಟಿ ಮಾಡಿರಿ

ಪಾಠದಲ್ಲಿ ಬಂದಿರುವ ಜೋಡುನುಡಿಗಳನ್ನು ಪಟ್ಟಿಮಾಡಿರಿ.

## ಚಿತ್ರಕಥೆ ಬರೆಯಿರಿ

ಈ ಕತೆಯಲ್ಲಿ ನಿಮಗಿಷ್ಟವಾದ ಭಾಗದ ಚಿತ್ರಕಥೆ ಬರೆಯಿರಿ. ಅದನ್ನು ಕಂಪ್ಯೂಟರ್‌ನ ಸಹಾಯದಿಂದ ಚಿತ್ರೀಕರಿಸಿರಿ.

* * *

# ಅಘಂ ಪೋಗಿ ಬಾಳ್ದಪೆ

**ಲಕ್ಷ್ಮೀಶ**

**ಕಥಾ ಸಂದರ್ಭ**

ಜೈಮಿನಿ ಭಾರತದ ಎರಡನೆಯ ಸಂಧಿಯಲ್ಲಿ ಈ ಕಥಾಭಾಗ ಉಲ್ಲೇಖವಾಗಿದೆ. ಕೌರವ ಪಾಂಡವರ ನಡುವೆ ನಡೆದ ಮಹಾಭಾರತ ಯುದ್ಧದಲ್ಲಿ ಕೌರವರು ಸೋತು ಪಾಂಡವರಿಗೆ ಗೆಲುವಾಗುತ್ತದೆ.ಬಳಿಕ ಧರ್ಮರಾಜನು ಅನುಜರೊಡಗೂಡಿ ಹಸ್ತಿನಾಪುರದ ಅಧಿಕಾರವನ್ನು ಹೊಂದುತ್ತಾನೆ. ಅವನು ಪ್ರಜಾನುರಾಗಿಯಾಗಿ ಆದರ್ಶಮಯವಾದ ಆಡಳಿತ ನೀಡುತ್ತಾನೆ. ಆದರೆ ಅವನ ಮನಸ್ಸಿನಲ್ಲಿ ಬಂಧುಗಳನ್ನು ಕೊಂದು ಅಧಿಕಾರ ಪಡೆದಿರುವನೆಂಬ ದು:ಖ ಕಾಡುತ್ತಾ ಇರುತ್ತದೆ. ಹೀಗೆ ಧರ್ಮರಾಜನು ತನ್ನ ಪರಿಶುದ್ಧವಾದ ಆಡಳಿತದ ಮಧ್ಯೆಯೂ ವ್ಯಾಕುಲನಾಗಿರುವಾಗ ಅವನ ಆಸ್ಥಾನಕ್ಕೆ ವ್ಯಾಸಮುನಿಗಳು ಆಗಮಿಸಿ ಅವನ ದು:ಖಕ್ಕೆ ಪರಿಹಾರೋಪಾಯವನ್ನು ಸೂಚಿಸುವುದು ಇಲ್ಲಿನ ಕಥಾಭಾಗವಾಗಿದೆ.

ಕೇಳೆಲೆ ನೃಪಾಲ ಪಾಂಡವರ ಕಥೆಯಿದು ಪುಣ್ಯ
ದೇಳಿಗೆಯಲಾ ಸುಯೋಧನ ಮೇದಿನೀಶನಂ
ಕಾಳಗದೊಳುರೆ ಗೆಲ್ದಬಳಿಕ ವರ ಹಸ್ತಿನಾಪುರದ ನಿಜ ಸಾಮ್ರಾಜ್ಯದ
ಬಾಳಿಕೆಯನನುಜರಿಂದೊಡಗೂಡಿ ಧರ್ಮಜಂ
ತಾಳಿದಂ ಭರತ ನಳ ನಹುಷಾದಿ ರಾಯರಂ
ಪೇಳುವೊಡವರ್ಗಿನಿತು ಗುಣಮಿಲ್ಲಮೆಂದು ಭೂ ಮಂಡಲಂ ಕೊಂಡಾಡಲು || ೧ ||

ಕೊಡೆಯೆಂಬರಾತಪತ್ರವನುದರದೇಶಮಂ
ಪೊಡೆಯೆಂಬರೊಲಿದು ಮಂಥನವ ನೆಸಗೆಂಬುದಂ
ಕಡೆಯೆಂಬರಾರಡಿಯನಳಿಯೆಂಬರುದಕ ಪ್ರವಾಹಮಂ ತೊರೆಯೆಂಬರು
ಮಡಿಯೆಂಬರಂಬರದ ಧೌತಮಂ ಕಬರಿಯಂ
ಮುಡಿಯೆಂಬರೆಡೆವಿಡದೆ ಮುಸುಕಿರ್ದ ಮೇಘಮಂ
ಜಡಿಯೆಂಬರುರು ಶಿಲೆಯನರೆಯೆಂಬರಲ್ಲದಿವ ನುಡಿಯರವನಾಳ್ವಿಳೆಯೊಳು || ೨ ||

ಹರಿಯಂತೆ ಬಲಯುತಂ ಶಿವನಂತೆ ರಾಜಶೇ
ಖರನಬ್ಜಭವನಂತೆಚತುರಾನನಂ ಸರಿ
ದ್ವರನಂತೆ ರತ್ನಾಕರಂ ದಿವಾಕರನಂತೆ ನಿರ್ದೋಷನಿಂದ್ರನಂತೆ
ಪರಿಚಿತ ಸುರಭಿ ರಮ್ಯನಮೃತಾರ್ಚಿಯಂತೆ ವಿ
ಸ್ತರಿತ ಕುವಲಯನೆಂದು ಧರ್ಮಜನ ಧರೆ ಪೊಗಳು
ತಿರೆ ಬಳಿಕ ಹಸ್ತಿನಾವತಿಗೆ ವೇದವ್ಯಾಸನೊಂದು ದಿವಸಂ ಬಂದನು || ೩ ||

ಕಂಡನರಸನ ಭಾವಮಂ ಬಳಿಕ ನಗುತ ಬೆಸ
ಗೊಂಡನಿಂತೆಂದಾ ಮುನೀಂದ್ರನೆಲೆನೃಪತಿ ಭೂ
ಮಂಡಲದ ಸಕಲ ಸಾಮ್ರಾಜ್ಯಮಂ ಪಾಲಿಸುವ ನಿನ್ನ ಸಂತಸದೇಳ್ಗೆಗೆ
ಖಂಡನವ ಮಾಳ್ಪುದಾನನದಿರವು ಸಾಕು ಮನ
ದಂಡಲೆಯ ತೊರೆಯೆನಲ್ವೀಯ ಸಂತಾಪದಿಂ
ಬೆಂಡಾದುದೆನ್ನೊಡಲ್ಸೈರಿಸಲರಿಯೆನೆಂದೊಡಾ ತಪೋನಿಧಿ ನುಡಿದನು || ೪ ||



ಕೆತ್ತ ಬಲ್ಗತ್ತಲೆಗೆ ತರಣಿಮುಂಗಾಣದಿರೆ
ಪೊತ್ತುವೆಳಗಂ ಬೇರೆ ತೋರ್ಪರಾರ್ಬಿಡದೆ ಘ
ರ್ಮೋತ್ತರಕೆ ಮಾರುತಂ ಬೆಮರ್ದೊಡಾರ್ಬೀಸುವರ್ ಬಳಿಕಾಲವಟ್ಟದಿಂದೆ
ಕೃತ್ರಿಮದ ವಿಷದ ಸೋಂಕಿಗೆ ಗರುಡನಳವಳಿಯೆ
ಮತ್ತೆ  ರಕ್ಷೆಗೆ ಮಂತ್ರಿಸುವರಾರು ಭೂಪ ನೀ
ನೊತ್ತುವನುತಾಪಕಡೆಗೊಟ್ಟೊಡಾರ್ ಬಿಡಿಸುವರ್  ಪೇಳೆಂದನಾ ಮುನಿಪನು || ೫ ||

ಎನಲಾ ಮುನೀಂದ್ರನಂ ನೋಡಿ ಬಿಸುಸುಯ್ಯುತೊ
ಯ್ಯನೆ ಮಹೀಪಾಲನಿಂತೆಂದನೆಂತೆನ್ನ ಮನ
ದನುತಾಪಮಂ ಬಿಡುವೆನಕಟ ಶಿಶುತನದಿಂದ ಸಲಹಿದ ಪಿತಾಮಹಂಗೆ
ನೆನೆದೆವನುಚಿತವನಗ್ರಜನೆಂದರಿಯದೆ ಕ
ರ್ಣನನಿರಿದೆವಾಚಾರ್ಯವಧೆಗೆಳಸಿದೆವು ಸುಯೋ
ಧನ ಶಲ್ಯಮುಖ್ಯಬಾಂಧವರನೀಡಾಡಿದೆವು ಬದುಕಲೇಕಿನ್ನಿಳೆಯೊಳು || ೬ ||

ಆಗಳರಸನ ಮಾತಿನಾಸರಂ ಕೇಳ್ದು ತಲೆ
ದೂಗಿ ಮುನಿಪುಂಗವಂ ನುಡಿದನೆಲೆ ಭೂಪ ನಿಗ
ಮಾಗಮ ಪುರಾಣಶಾಸ್ತ್ರಂಗಳ ವಿಚಾರಮಂ ನೀನರಿಯದಪ್ರೌಢನೆ
ಈಗಳನುತಾಪಮೇತಕೆ ನಿಖಿಳ ಸಾಮ್ರಾಜ್ಯ
ಮಾಗಲಿಳೆಯಂ ಧರ್ಮದಿಂಪಾಲಿಸದೆ ಬನಕೆ
ಪೋಗಲಾವುದುಸಿದ್ಧಿ ನಿನಗಪ್ಪುದುಸುರೆನೆ ಧರಾನಾಥನಿಂತೆಂದನು || ೭ ||

ಜೀಯ ಚಿತ್ತೈಸಾದೊಡಿನ್ನ ಖಿಳ ಸಾಮ್ರಾಜ್ಯ
ಮಾಯಿತೆಂಬುತ್ಸವಂ ತನಗಿಲ್ಲ ಕರ್ಣ ಗಾಂ
ಗೇಯ ಗುರು ಶಲ್ಯ ಕೌರವರನುಳಿದೀ ಸಕಲಮೇದಿನೀಮಂಡಲವನು
ವಾಯುಜನೊಳಿರಿಸಿ ನಾಂ ಗೋತ್ರ ವಧೆಗೆಯ್ದಿದೀ
ಕಾಯಮಂ ವನವಾಸಕ್ಕೈದಿಸುವೆನೆನೆ ಬಾದ
ರಾಯಣಂ ಗಹಗಹಿಸಿ ನಗುತೆ ನುಡಿ ನುಡಿ ಮತ್ತೆ ನುಡಿಯೆನ್ನುತಿಂತೆಂದನು || ೮ ||

ಧರ್ಮಸುತ ಮರುಳೆ ನೀನಿಂತಾಡುತಿರ್ದೊಡೆ ಬು
ಧರ್ಮೆಚ್ಚುವರೆ ಸಾಕದಂತಿರಲಿ ಸೋಮಕುಲ
ಜರ್ಮಹಾಕ್ರತುಗಳಂ ಮಾಡಿದಲ್ಲದೆ ಸಲ್ಲರದರಿಂದ ನಿನಗಿಳೆಯೊಳು
ನಿರ್ಮಲಸುಕೀರ್ತಿಯಪ್ಪಂತೆ ಯಜ್ಞಾದಿ ಸ
ತ್ಕರ್ಮಂಗಳಂ ನೆಗಳ್ಚಲ್ಗೋತ್ರವಧೆಗಳಂ
ನಿರ್ಮಿಸಿದಘಂ ಪೋಗಿ ಶುಚಿಯಾಗಿ ಬಾಳ್ದಪೆಯೆನಲ್ ಭೂಪನಿಂತೆಂದನು || ೬ ||

## ಕವಿ ಪರಿಚಯ

ಹದಿನಾರನೇ ಶತಮಾನದ ಕವಿ ಲಕ್ಷ್ಮೀಶನು ನಡುಗನ್ನಡ ಸಾಹಿತ್ಯದ ಜನಪ್ರಿಯ ಕವಿಗಳಲ್ಲೊಬ್ಬನು. ಹಾಸನ ಜಿಲ್ಲೆಯ ಕಡೂರಿನ ದೇವನೂರು ಇವನ ಜನ್ಮಸ್ಥಳವೆಂದು ತಿಳಿದು ಬರುತ್ತದೆ. ವ್ಯಾಸ ಭಾರತದ ಪಾಂಡವಾಶ್ವಮೇಧದ ಕಥೆಯನ್ನು ಜೈಮಿನಿ ಮುನಿಯು ಜನಮೇಜಯ ಮಹಾರಾಜನಿಗೆ ಹೇಳುತ್ತಾನೆ. ಸಂಸ್ಕೃತದ ಜೈಮಿನಿ ಭಾರತವು ಈ ಕಥೆಯನ್ನು ಒಳಗೊಂಡಿದೆ. ಅದನ್ನೇ ಆಕರವಾಗಿಟ್ಟುಕೊಂಡು ರಾಮಾಯಣದ ಉತ್ತರ ಕಾಂಡದ ಕಥೆ ಹಾಗೂ ಇತರ ಉಪಕಥೆಗಳನ್ನು ಒಳಗೊಂಡಂತೆ ವಾರ್ಧಕ ಷಟ್ಪದಿಯಲ್ಲಿ ಕನ್ನಡ ಜೈಮಿನಿ ಭಾರತವನ್ನು ಕವಿ ಲಕ್ಷ್ಮೀಶನು ರಚಿಸಿದ್ದಾನೆ. ಈ ಕಾವ್ಯದಲ್ಲಿ ಬರುವ ಶಬ್ದಾಲಂಕಾರ, ಅರ್ಥಾಲಂಕಾರ, ರಮ್ಯವರ್ಣನೆ ಮುಂತಾದವು ಕವಿಯ ಪ್ರತಿಭೆಗೆ ಸಾಕ್ಷಿಯಾಗಿವೆ. ಕಾವ್ಯ ಶೈಲಿಯ ಮನೋಹರತೆಯಿಂದಾಗಿ ಲಕ್ಷ್ಮೀಶನಿಗೆ 'ಕರ್ನಾಟ ಕವಿಚೂತವನ ಚೈತ್ರ' 'ಉಪಮಾಲೋಲ' 'ನಾದಲೋಲ' ಮುಂತಾದ ಬಿರುದುಗಳು ಸಂದಿವೆ. ಈ ಕಾವ್ಯಭಾಗವನ್ನು ಕನ್ನಡ ಜೈಮಿನಿ ಭಾರತದ ಎರಡನೆಯ ಸಂಧಿಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಅನುಜರೊಡಗೂಡಿ ಆಡಳಿತ ಮಾಡುತ್ತಿದ್ದ ಧರ್ಮರಾಜನನ್ನು ಭೂಮಂಡಲವು ಹೇಗೆ ಕೊಂಡಾಡುತ್ತಿತ್ತು?
2. ಪ್ರಜೆಗಳು ಧರ್ಮರಾಜನ ಸ್ವಭಾವವನ್ನು ಯಾವುದಕ್ಕೆಲ್ಲಾ ಹೋಲಿಸಿ ಹೊಗಳುತ್ತಿದ್ದರು?
3. ವ್ಯಾಸಮುನಿಗಳೊಡನೆ ಧರ್ಮರಾಜನು ಏನೆಂದು ತನ್ನ ದು:ಖವನ್ನು ತೋಡಿಕೊಂಡನು?
4. ಅರಸನ ದು:ಖಕ್ಕೆ ವ್ಯಾಸಮುನಿಯು ಸೂಚಿಸಿದ ಪರಿಹಾರೋಪಾಯವೇನು?

## ಪದವಿಂಗಡಿಸಿ ಬರೆಯಿರಿ

ಕಾವ್ಯಭಾಗದಲ್ಲಿ ಬಂದಿರುವ ಸಂಧಿ ಪದಗಳನ್ನು ಗುರುತಿಸಿ ವಿಂಗಡಿಸಿ ಬರೆಯಿರಿ.

- ಬಾಳಿಕೆಯನನುಜರಿಂದೊಡಗೂಡಿ - ಬಾಳಿಕೆಯನು + ಅನುಜರಿಂದ + ಒಡ + ಕೂಡಿ
- ಪೇಳುವೊಡವರ್ಗಿನಿತು - ಪೇಳುವೊಡೆ + ಅವರ್ಗೆ + ಇನಿತು
- ಪೊಡೆಯೆಂಬರೊಲಿದು - ಪೊಡೆ + ಎಂಬರು + ಒಲಿದು
- ರಾಜಶೇಖರನಬ್ಜಭವನಂತೆ - ರಾಜಶೇಖರನು + ಅಬ್ಜಭವನಂತೆ
- ಬೆಂಡಾದುದೆನ್ನೊಡಲ್ಸೈರಿಸಲರಿಯೆನೆಂದೊಡಾ - ಬೆಂಡಾದುದು + ಎನ್ನ + ಒಡಲ್ + ಸೈರಿಸಲು + ಅರಿಯೆನು + ಎಂದೊಡೆ + ಆ
- ...............................
- ...............................
- ...............................

## ವಿಶ್ಲೇಷಣ ಟಿಪ್ಪಣಿ ಬರೆಯಿರಿ

ಪಾಠದ ಕಾವ್ಯಭಾಗದೊಂದಿಗೆ ಕೆಳಗಿನ ಕವನದ ಆಶಯವನ್ನು ವಿಶ್ಲೇಷಿಸಿ ಟಿಪ್ಪಣಿ ಬರೆಯಿರಿ.

ದ್ವೇಷ ಹಿಂಸೆಗಳಾಚೆ ಭಯ ಸಹಾನುಭೂತಿಗಳಾಚೆ
ಬಾಂಧವ್ಯದರಿವು ಪಡಿ ಮೂಡಿದಾಗ;
ಪರಿಪೂರ್ಣವಾಗಬಲ್ಲುದು ಇಲ್ಲಿನೀ ಬದುಕು
ಪ್ರೀತಿಸುವುದನ್ನು ತಿಳಿ, ಬದುಕಲು ಕಲಿ.
ಕೊಲ್ಲುವುದು ಮನುಷ್ಯ ಲಕ್ಷಣವಲ್ಲ, ಹೆಚ್ಚಳವಲ್ಲವೇ ಅಲ್ಲ,
ಬದುಕುವುದು, ಬದುಕ ಬಿಡುವುದು, ಬೆಳೆವುದು-
ಮಾನವತ್ವದ ಮಹತ್ವ ಇಲ್ಲಿ ಇದೆ ತಿಳಿಯೋಣ:
ಒಂದು ಅಳಿದರೆ ಉಳಿದುದೆಲ್ಲ ಮುಕ್ಕು.

**ಎಂ. ಗೋಪಾಲಕೃಷ್ಣ ಅಡಿಗ**

## ಆಶಯ ಬರೆಯಿರಿ

ಕಾವ್ಯಭಾಗದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ ಕಾವ್ಯಭಾಗದ ಸಾಲುಗಳ ಸ್ವಾರಸ್ಯ ಬರೆಯಿರಿ.

ಕೊಡೆಯೆಂಬರಾತಪತ್ರವನುದರದೇಶಮಂ
ಪೊಡೆಯೆಂಬರೊಲಿದು ಮಂಥನವನೆಸಗೆಂಬುದಂ
ಕಡೆಯೆಂಬರಾರಡಿಯನಳಿಯೆಂಬರುದಕ ಪ್ರವಾಹಮಂ ತೊರೆಯೆಂಬರು
ಮಡಿಯೆಂಬರಂಬರದ ಧೌತಮಂ ಕಬರಿಯಂ
ಮುಡಿಯೆಂಬರೆಡೆವಿಡದೆ ಮುಸುಕಿರ್ದ ಮೇಘಮಂ
ಜಡಿಯೆಂಬರುರುಶಿಲೆಯನರೆಯೆಂಬರಲ್ಲದಿವ ನುಡಿಯರವನಾಳ್ವಿಳೆಯೊಳು

## ಲೇಖನ ಬರೆಯಿರಿ

ಧರ್ಮರಾಜನಲ್ಲಿ ಮೂಡಿದ ಸಹೋದರಹತ್ಯೆಯ ಕುರಿತಾದ ಮಾನಸಿಕ ತಲ್ಲಣ ಮತ್ತು ಧರ್ಮ ಜಿಜ್ಞಾಸೆಗಳನ್ನು ವಿಶ್ಲೇಷಿಸಿ ಕಿರುಲೇಖನ ಬರೆಯಿರಿ.

## ವಾಚನ ಪ್ರವಚನ ನಡೆಸಿರಿ

ಕಾವ್ಯಭಾಗದ ವಾಚನ ಹಾಗೂ ಪ್ರವಚನಗಳನ್ನು ನಡೆಸಿ ಶಾಲಾ ಬ್ಲಾಗ್ ನಲ್ಲಿ ಲಭ್ಯವಾಗುವಂತೆ ಮಾಡಿರಿ.

## ಅಲಂಕಾರ ತಿಳಿಯಿರಿ

ಕಾವ್ಯಗಳಲ್ಲಿ ವಿಷಯವನ್ನು ಮನದಟ್ಟು ಮಾಡಲು, ಆಕರ್ಷಕವಾಗುವಂತೆ ಮಾಡಲು ಮತ್ತು ವಿಶೇಷವಾದ ಅರ್ಥಗಳನ್ನು ಹೊರಹೊಮ್ಮಿಸಲು ಬಳಸುವ ಚಮತ್ಕಾರದ ಪ್ರಯೋಗಗಳನ್ನು ಅಲಂಕಾರಗಳು ಎನ್ನುವರು. ಅಲಂಕಾರಗಳಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳೆಂದು ಎರಡು ಬಗೆಗಳಿವೆ. ಅರ್ಥಾಲಂಕಾರದಲ್ಲಿ ಉಪಮಾಲಂಕಾರ ಮತ್ತು ರೂಪಕಾಲಂಕಾರಗಳು ಹೆಚ್ಚು ಬಳಕೆಯಲ್ಲಿರುವವುಗಳು.

## ಉಪಮಾಲಂಕಾರ

ಉಪಮಾ ಎಂದರೆ ಹೋಲಿಕೆ ಎಂದರ್ಥ. ಎರಡು ವಸ್ತುಗಳ ನಡುವಿನ ಪರಸ್ಪರ ಹೋಲಿಕೆಯ ಸಂಬಂಧವನ್ನು ಹೇಳುವುದೇ ಉಪಮಾಲಂಕಾರ. ಯಾವುದನ್ನು ವರ್ಣಿಸಲಾಗಿದೆಯೋ ಅದು ಉಪಮೇಯ ಮತ್ತು ಯಾವುದಕ್ಕೆ ಹೋಲಿಸಲಾಗಿದೆಯೋ ಅದನ್ನು ಉಪಮಾನ ಎಂದೂ ಕರೆಯಲಾಗುತ್ತದೆ.

ಉದಾಹರಣೆ:

- ಹರಿಯಂತೆ ಬಲಯುತಂ ಧರ್ಮಜಂ
- ಶಿವನಂತೆ ರಾಜಶೇಖರನು ಧರ್ಮಜಂ

## ಪ್ರಸ್ತಾರ ಹಾಕಿರಿ

ಕೆಳಗೆ ನೀಡಲಾದ ವಾರ್ಧಕ ಛಂದಸ್ಸಿನಲ್ಲಿರುವ ಕಾವ್ಯಭಾಗದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿರಿ.

ಜೀಯ ಚಿತ್ತೈಸಾದೊಡಿನ್ನಖಿಳ ಸಾಮ್ರಾಜ್ಯ

ಮಾಯಿತೆಂಬುತ್ಸವಂ ತನಗಿಲ್ಲ ಕರ್ಣ ಗಾಂ

ಗೇಯ ಗುರು ಶಲ್ಯ ಕೌರವರನುಳಿದೀ ಸಕಲಮೇದಿನೀಮಂಡಲವನು

* * *

# ಪದಕೋಶ

| | | |
|---|---|---|
| ಅಂಚು | - | ಬದಿ |
| ಅಂಜಿಕೆ | - | ಅಳುಕು, ಹೆದರಿಕೆ |
| ಅಂಬರ | - | ಬಟ್ಟೆ, ಆಕಾಶ, ಗಗನ |
| ಅಂಬಿಕೆ | - | ತಾಯಿ |
| ಅಗ್ನಿ ಕಣ | - | ಬೆಂಕಿಯ ಕಿಡಿ |
| ಅಘಂ | - | ಪಾಪ |
| ಅಘಮರ್ಷಣ ಮಂತ್ರ | - | ಪಾಪನಿವಾರಕ ಸ್ನಾನ ಮಂತ್ರ |
| ಅಚ್ಛ | - | ನಿರ್ಮಲ |
| ಅಡರ್ವುದು | - | ಏರುವುದು |
| ಅತ್ತರು | - | ಸುಗಂಧ ದ್ರವ್ಯ |
| ಅನಾವಿಲ | - | ಸ್ವಚ್ಛ |
| ಅನಿಮಿಷ | - | ರೆಪ್ಪೆಯಿಲ್ಲದ, ದೇವತೆ |
| ಅನಿವಾರಿತ | - | ತಡೆಯಿಲ್ಲದ |
| ಅನುಜ | - | ಒಡಹುಟ್ಟಿದವ, ತಮ್ಮ |
| ಅನ್ಯ | - | ಬೇರೆ |
| ಅಪಾನೀಯ | - | ಕುಡಿಯಲು ಯೋಗ್ಯವಲ್ಲದ |
| ಅಪ್ಪೈಸು | - | ಒಪ್ಪಿಸು |
| ಅಬದ್ಧ | - | ಅಸಮರ್ಪಕ |
| ಅಬ್ಜಭವ | - | ತಾವರೆಯಲ್ಲಿ ಜನಿಸಿದವ, ಬ್ರಹ್ಮ |
| ಅಬ್ಬೆ | - | ತಾಯಿ, ಅಮ್ಮ |
| ಅಭ್ಯುದಯ | - | ಏಳಿಗೆ , ಅಭಿವೃದ್ಧಿ |
| ಅಮೃತಾರ್ಚಿ | - | ಅಮೃತ ಕಿರಣಗಳುಳ್ಳವ, ಚಂದ್ರ |
| ಅರವಿಂದ | - | ತಾವರೆ, ಕಮಲ |
| ಅರಸ | - | ರಾಜ |
| ಅರ್ಘ್ಯ | - | ದೇವತೆಗಳಿಗೂ ಪೂಜ್ಯರಿಗೂ ಕೈತೊಳೆಯಲು ಕೊಡುವ ನೀರು |

| | | |
|---|---|---|
| ಅಳವಳಿ | - | ಶಕ್ತಿಗುಂದು |
| ಅಳವು | - | ಶಕ್ತಿ, ಪರಾಕ್ರಮ |
| ಅೞಿವೆನ್ | - | ನಾಶವಾಗುವೆನು, ಮರಣಹೊಂದುವೆನು |
| ಅಱ್ಕಿಱಿಂದ | - | ಅಕ್ಕರೆಯಿಂದ, ಪ್ರೀತಿಯಿಂದ |
| ಆದಿತ್ಯತೇಜನ್ | - | ಸೂರ್ಯನಂತೆ ತೇಜಸ್ಸುಳ್ಳವನು |
| ಆಧೇಯನ್ | - | ಆಶ್ರಯ, ಆಧಾರ |
| ಆರಡಿ | - | ಭ್ರಮರ, ದುಂಬಿ |
| ಆಲವಟ್ಟಿ | - | ಬಟ್ಟೆ ಅಥವಾ ತಾಳೆಗರಿಯ ಬೀಸಣಿಗೆ |
| ಆವರ್ಜಿಸು | - | ಪಡೆಯು, ಒಲಿಸಿಕೊಳ್ಳು, ಸೆಳೆದುಕೊಳ್ಳು |
| ಆಶ್ರಿತಾಭಿಮಾನ | - | ಆಶಯ ಕೋರಿ ಬಂದವರ ವಿಷಯದಲ್ಲಿ ಅಭಿಮಾನ |
| ಆಸರು | - | ಬಾಯಾರಿಕೆ |
| ಆಸು | - | ಅಷ್ಟೂ |
| ಇಚ್ಛೆ | - | ಅಪೇಕ್ಷೆ, ಬಯಕೆ |
| ಇಟ್ಟಾಂಗ | - | ಇಟ್ಟ ಹಾಗೆ |
| ಇನವಂಶ | - | ಸೂರ್ಯವಂಶ |
| ಇಸಕೊಂಡು | - | ಪಡಕೊಂಡು |
| ಇಳೆ | - | ಭೂಮಿ |
| ಈಡಾಡು | - | ತೊರೆಯು, ಕಿತ್ತು ಎಸೆ |
| ಉದಕ | - | ನೀರು |
| ಉದ್ದಿಮೆ | - | ಉದ್ಯಮ, ಉದ್ಯೋಗ |
| ಉನ್ಮಾದ | - | ಹುಚ್ಚು |
| ಉರುವಲು | - | ಸೌದೆ |
| ಉರೆ | - | ವಿಶೇಷವಾಗಿ, ಅತಿಶಯವಾಗಿ |
| ಉಱದೆ | - | ಲೆಕ್ಕಿಸದೆ |
| ಋದ್ಧಿ | - | ಸಂಪತ್ತು |
| ಎಡೆಮಡಗದೆ | - | ನಡುವೆ ಇಟ್ಟುಕೊಳ್ಳದೆ |
| ಎತ್ತೇನೋ | - | ಎದ್ದಿತೇನೋ |
| ಎದಿ | - | ಎದೆ |

| | | |
|---|---|---|
| ಎಲಿ | - | ಎಲೆ |
| ಎಱಕ | - | ಪ್ರೀತಿ, ಅನುರಾಗ |
| ಏರ್ದೊಡಂ | - | ಯುದ್ಧ ಮಾಡಿದರೂ |
| ಒಡಂಬಡು | - | ಒಪ್ಪು, ತೃಪ್ತಿಪಡು |
| ಒಡರಿಸು | - | ಪ್ರಯತ್ನ ಪಡು |
| ಒಸಿ | - | ಸ್ವಲ್ಪ |
| ಒಳ್ಪಿಂಗೆ | - | ಒಳಿತಿಗೆ, ಸದ್ಗುಣಕ್ಕೆ |
| ಕಂಥೆ | - | ತುಂಡುಬಟ್ಟೆಗಳನ್ನು ಕೂಡಿಸಿ ಹೊಲಿದ ಹಚ್ಚಡ |
| ಕಂದಮೂಲ | - | ಗಡ್ಡೆಗೆಣಸು |
| ಕಟ್ಟಲೆ | - | ನಿಯಮ, ಕಟ್ಟುಪಾಡು |
| ಕಬರಿ | - | ಕೂದಲು |
| ಕರ | - | ಕೈ |
| ಕರಣಿಕ | - | ಗುಮಾಸ್ತ, ಲೆಕ್ಕಪತ್ರಾಧಿಕಾರಿ |
| ಕಲುಷಿತ | - | ಮಲಿನ |
| ಕಲ್ಪಾಂತರಸ್ಥಾಯಿ | - | ಬಹುಕಾಲದಿಂದ ಸ್ಥಿರವಾಗಿರುವ |
| ಕಲ್ಯಾಣ | - | ಮದುವೆ |
| ಕಳಸ | - | ಕಲಶ, ಪೂಜೆಯಲ್ಲಿ ನೀರು ತುಂಬಿಡುವ ಬಿಂದಿಗೆ |
| ಕಳಸ | - | ದೇವಸ್ಥಾನದ ಗರ್ಭಗುಡಿಯ ಮೇಲ್ಛಾವಣಿಯ ಮೇಲೆ ಇರುವ ಧಾತುವಿನ ಗೋಪುರ |
| ಕಾಕಾರವಂ | - | ಕಾಗೆಯ ಧ್ವನಿ |
| ಕಾಯಕ | - | ಕೆಲಸ |
| ಕಾರುಬಾರು | - | ವ್ಯವಹಾರ |
| ಕಿರುವಳ್ಳ | - | ಸಣ್ಣ ಹಳ್ಳ |
| ಕಿಸುರ್ | - | ಕಲಹ, ಅಸಹನೆ |
| ಕುರುಡು | - | ಅಂಧತ್ವ, ಕಣ್ಣು ಕಾಣದಿರುವಿಕೆ |
| ಕುರುಳು | - | ಕೂದಲು |
| ಕೃಷ್ಣಾಜಿನ | - | ಕೃಷ್ಣಮೃಗದ ಚರ್ಮ |

| | | |
|---|---|---|
| ಕೆಯ್ಯಡೆ | - | ನ್ಯಾಸ, ರಕ್ಷಣೆ ಮಾಡಿ ಇಟ್ಟುಕೊಳ್ಳುಲು ಕೊಟ್ಟ ವಸ್ತು |
| ಕೇಳಿ | - | ಆಟ |
| ಕೈಸಾಲೆ | - | ಚಾವಡಿ, ಹೊರಜಗಲಿ |
| ಕೊರಕಲು | - | ಆಳವಾದ ಕಮರಿ, ನದೀಕಂದರ |
| ಕೋದು | - | ಹೆಣೆದು |
| ಕ್ಲೇಶ | - | ತೊಂದರೆ |
| ಕ್ಷಾಮ | - | ಅಭಾವ, ಬರಗಾಲ |
| ಗಂಗಾಂಗನೆ | - | ಗಂಗೆ ಎಂಬ ಸ್ತ್ರೀ, ಗಂಗಾನದಿ |
| ಗಂಗಾವಾರಿ | - | ಗಂಗಾ ನದಿಯ ನೀರು |
| ಗಣಮೇಳಾಪ | - | ಶಿವಶರಣರ ಸಹವಾಸ |
| ಗತ್ಯಂತರ | - | ಬೇರೆ ದಾರಿ, ಅನ್ಯಮಾರ್ಗ, ನಿರ್ವಾಹ |
| ಗರಿಕೆ | - | ಕರಿಕೆ ಹುಲ್ಲು |
| ಗಾದಿ | - | ಸಿಂಹಾಸನ, ಗದ್ದುಗೆ |
| ಗುಲ್ಲು | - | ಗಲಾಟೆ |
| ಗೆಣೆಯ | - | ಗೆಳೆಯ , ಸ್ನೇಹಿತ |
| ಘರ್ಮ | - | ಬಿಸಿಯಾದ, ಬಿಸಿಲು |
| ಚಲ | - | ಹಠ, ಸ್ಥಿರಸಂಕಲ್ಪ, ದೃಢತೆ |
| ಚವರ | - | ಚಾಮರ |
| ಚವರಿ | - | ಜೋಳದ ಒಂದು ಪ್ರಕಾರ |
| ಚಾಗ | - | ತ್ಯಾಗ, ದಾನ |
| ಚಾವಡಿ | - | ಪಡಸಾಲೆ |
| ಚಾವಣಿ | - | ಮಾಡು |
| ಚುರುಕು | - | ಚಾಲಾಕು, ಚಾಕಚಕ್ಯತೆ |
| ಚೆಮ್ಮಾಯಿ | - | ಚೆನ್ನಾಗಿ |
| ಚೋದ್ಯ | - | ಪ್ರಶ್ನೆ |
| ಚೌಳು | - | ಉಪ್ಪಿನ ರುಚಿಯುಳ್ಳದ್ದು |
| ಜಂಗಮ | - | ಚಲಿಸುತ್ತಿರುವ |

| | | |
|---|---|---|
| ಜಮಖಾನ | - | ನೆಲದ ಮೇಲೆ ಹಾಸುವ ಗಟ್ಟಿ ನೂಲಿನ ಚಾಪೆ |
| ಜರ | - | ಜರತಾರಿ |
| ಜ್ಞಾತಿಗಳು | - | ಅಣ್ಣತಮ್ಮಂದಿರ ಮಕ್ಕಳು,ಮೊಮ್ಮಕ್ಕಳು, ದಾಯಾದಿಗಳು |
| ಝರಿ | - | ಬೆಟ್ಟದಿಂದ ಹರಿದು ಬರುವ ಪ್ರವಾಹ |
| ತಕ್ಕ | - | ಪ್ರಾಂತ್ಯದ ಮುಖ್ಯಸ್ಥ |
| ತನೂಜ | - | ಮಗ, ಪುತ್ರ |
| ತರಂಗ | - | ಅಲೆ, ತೆರೆ |
| ತರಣಿ | - | ಸೂರ್ಯ |
| ತರಳೆ | - | ಹುಡುಗಿ |
| ತಳೆದು | - | ಸಿಂಪಡಿಸಿ |
| ತಾಂಬಾಳ | - | ಲೋಹದಿಂದ ಮಾಡಿದ ತಟ್ಟೆ |
| ತಾವು | - | ಎಡೆ, ಸ್ಥಳ |
| ತಿಂಗಳ | - | ಚಂದ್ರ |
| ತಿರುಪೆ | - | ಭಿಕ್ಷೆ , ಯಾಚನೆ |
| ತೀವಿದ | - | ತುಂಬಿರುವ , ಭರ್ತಿಯಾಗಿರುವ |
| ತುಂಡುಲ ಮಾತ್ರ | - | ಅಕ್ಕಿಯ ಕಾಳಿನಷ್ಟು ಮಾತ್ರ |
| ತೆಕ್ಕನೆ | - | ಹೆಚ್ಚಾಗು, ಅಧಿಕವಾಗಿ |
| ತೊಯ್ಯು | - | ಒದ್ದೆಯಾಗು |
| ತೊಱ್ತುವೆಸನಂ | - | ಊಳಿಗ, ಸೇವೆ |
| ತೋಪು | - | ಮರಗಳ ಗುಂಪು |
| ದಾರ್ಷ್ಟ್ಯ | - | ಉದ್ಧಟತನ |
| ದಿಂಡೀರ | - | ನೊರೆ |
| ದಿನಪ | - | ಸೂರ್ಯ |
| ದಿನಾಧಿಪ | - | ದಿನಕರ, ಸೂರ್ಯ |
| ದೀಪ್ತಿ | - | ಪ್ರಕಾಶ |
| ದುರ್ದೆಶೆ | - | ಕೆಟ್ಟ ಸ್ಥಿತಿ |
| ದೈನಂದಿನ | - | ದಿನ ನಿತ್ಯದ |

| | | |
|---|---|---|
| ಧೌತ | - | ತೊಳೆದ,ಸ್ವಚ್ಛಗೊಳಿಸಿದ |
| ಧ್ವಂಸ | - | ನಾಶ |
| ನಂದನ | - | ಮಗ, ಪುತ್ರ |
| ನಗಿ | - | ನಗು |
| ನನ್ನಿ | - | ಸತ್ಯ |
| ನುಡಿಗಡಣ | - | ಮಾತುಗಳ ಸಮೂಹ |
| ನೆಗಳ್ | - | ರಚಿಸು, ನಿರ್ಮಾಣ ಮಾಡು |
| ನೇಸ್ತ | - | ಸ್ನೇಹಿತ, ಗೆಳೆಯ |
| ನೊಸಲು | - | ಹಣೆ, ಲಲಾಟ |
| ಪಡಿ | - | ದಾನವಾಗಿ ಕೊಡುವ ಆಹಾರ ಸಾಮಗ್ರಿ |
| ಪಡು | - | ಪಶ್ಚಿಮ |
| ಪರಸಿ | - | ಹರಸಿ, ಆಶೀರ್ವಾದ ಮಾಡಿ |
| ಪಾಚಿ | - | ಹಾವಸೆ |
| ಪಾದ | - | ಅಡಿ, ಚರಣ |
| ಪಾರ್ವ | - | ಬ್ರಾಹ್ಮಣ |
| ಪಾೞಿ | - | ಕ್ರಮ, ರೀತಿ |
| ಪಿಂಡ | - | ರಾಶಿ |
| ಪುತ್ಥಳಿ | - | ಬೊಂಬೆ, ವಿಗ್ರಹ |
| ಪುರಾತನರು | - | ಶಿವಶರಣರು |
| ಪುರಿಗಣೆ | - | ಅತಿಶಯವಾದ ಶಕ್ತಿಯಿಂದ ಕೂಡಿದ ಬಾಣ |
| ಪುಷ್ಪ | - | ಹೂವು, ಕುಸುಮ |
| ಪೂಣ್ದು | - | ಪ್ರತಿಜ್ಞೆ ಮಾಡಿ |
| ಪೂಸು | - | ಲೇಪಿಸು, ಸವರು |
| ಪೆಡಸರ | - | ಸೊಕ್ಕು |
| ಪೆರ್ಜಸ | - | ಹಿರಿದಾದ ಕೀರ್ತಿ |
| ಪೇಲವ | - | ನೀರಸವಾದ,ಸತ್ವವಿಲ್ಲದ |
| ಪೊಡಮಟ್ಟು | - | ನಮಸ್ಕರಿಸಿ |
| ಪೊಡೆವಡು | - | ನಮಸ್ಕರಿಸು, ವಂದಿಸು |

| | | |
|---|---|---|
| ಪೌತ್ರ | - | ಮಗನ ಮಗ ,ಮೊಮ್ಮಗ |
| ಪ್ರತ್ಯವಾಯ | - | ಪಾಪ, ದೋಷ |
| ಪ್ರಭುಪದ | - | ರಾಜತ್ವ |
| ಪ್ರಮಾಣಿ | - | ಯಥಾರ್ಥ, ಸತ್ಯ |
| ಫರ್ನ್ | - | ಜರೀಗಿಡ |
| ಬಾತೆ | - | ಬಾಳುವೆ, ಜೀವನ |
| ಬಿಂಬ | - | ಸೂರ್ಯ ಅಥವಾ ಚಂದ್ರನ ಸುತ್ತಲೂ ಇರುವ ಪ್ರಭಾವಲಯ |
| ಬಿತ್ತೇನೋ | - | ಬಿದ್ದಿತ್ತೇನೋ |
| ಬೆಸಗೊಂಬೋರು | - | ವಿಚಾರಿಸುವವರು, ಕೇಳುವವರು |
| ಬೆಸಸು | - | ಆಜ್ಞಾಪಿಸು, ಅಪ್ಪಣೆಕೊಡು |
| ಭಂಗಿ | - | ರೀತಿ |
| ಭತ್ಯ | - | ಉದ್ಯೋಗಿಗಳಿಗೆ ಕೊಡುವ ವಿಶೇಷ ಸಂಭಾವನೆ |
| ಭ್ರಮರ | - | ದುಂಬಿ |
| ಮಂಥನ | - | ಕಡೆಯು |
| ಮಣಿಯು | - | ನಮಸ್ಕರಿಸು |
| ಮಧ್ಯಾಹ್ನಿಕ | - | ಮಧ್ಯಾಹ್ನ ಕಾಲದ ಸಂಧ್ಯಾವಂದನೆ |
| ಮನ:ಕ್ಲೇಶ | - | ಮನಸ್ಸಿನ ನೋವು |
| ಮನ್ವಂತರ | - | ಪರಿವರ್ತನೆಯ ಕಾಲ, ಹೊಸಯುಗ |
| ಮರಾಲ | - | ಹಂಸ |
| ಮರ್ತ್ಯಲೋಕ | - | ಭೂಲೋಕ |
| ಮಲ್ಲಾಡಕೆ | - | ಮಲೆನಾಡಿಗೆ |
| ಮಹರ್ದ್ಧಿಕತೆ | - | ತುಂಬಾ ಪ್ರಭಾವವುಳ್ಳ |
| ಮಾನನಿಧಿ | - | ಮಾನವೇ ನಿಧಿಯಾಗಿ ಉಳ್ಳವ |
| ಮಾರ್ಗ ನಿರೋಧ | - | ದಾರಿಗೆ ಅಡ್ಡಿ |
| ಮಾರ್ತಂಡ | - | ಸೂರ್ಯ |
| ಮಿಗ | - | ಮೃಗ |
| ಮಿಥ್ಯ | - | ಸುಳ್ಳು |
| ಮುಂಗಾಣದೆ | - | ದಾರಿ ತೋರದೆ,ಮುಂದೇನು ಮಾಡಬೇಕು ತಿಳಿಯದೆ |

| | | |
|---|---|---|
| ಮುಖರೇದ | - | ಮಾತುಗುಳಿ |
| ಮುಗುಳು | - | ಮೊಗ್ಗು |
| ಮುಸುಕು | - | ಹೊದಿಕೆ, ಹಬ್ಬು, ದಟ್ಟವಾಗಿರು |
| ಮೂಡು | - | ಪೂರ್ವ |
| ಮೂಲೋತ್ಪಾಟನ | - | ಬೇರು ಸಹಿತ ಕಿತ್ತೆ ಸೆಯುವುದು |
| ಮೇಘ | - | ಮುಗಿಲು |
| ಮೇದಿನೀಶ | - | ಭೂಮಿಯ ಒಡೆಯ, ರಾಜ |
| ಮೈ | - | ದೇಹ |
| ಮೊರಡಿ | - | ಗುಡ್ಡ, ಬೆಟ್ಟ |
| ಮೋರೆ | - | ಮುಖ |
| ರಣ | - | ಯುದ್ಧ, ಕಾಳಗ |
| ರಾಧೇಯನ್ | - | ರಾಧೇಯ, ಮಗ, ಕರ್ಣ |
| ಲಲ್ಲೈಸು | - | ಮುದ್ದಿಸು, ಪ್ರೀತಿಸು |
| ಲೆಂಕ | - | ಸೇವಕ |
| ವಚನ | - | ಮಾತು |
| ವಾರಿಧಿ | - | ಸಮುದ್ರ |
| ವೃಷ್ಟಿ | - | ಮಳೆ |
| ವ್ಯತಿರಿಕ್ತ | - | ಭಿನ್ನವಾದ |
| ಶಾವೆ | - | ಸೇವೆ |
| ಸಂಗತ | - | ಒಟ್ಟಾದ, ಯೋಗ್ಯವಾದ |
| ಸಂಗಳಿಸು | - | ಒಟ್ಟುಸೇರು |
| ಸಂಜಿ | - | ಸಂಜೆ |
| ಸಂದಣಿ | - | ಗುಂಪು |
| ಸಂದರ | - | ಸಮುದ್ರ |
| ಸಖ | - | ಗೆಳೆಯ, ಮಿತ್ರ |
| ಸಜ್ಜೆ | - | ಉಪ್ಪರಿಗೆಯ ಮೊಗಸಾಲೆ |
| ಸತ್ಕೃತ | - | ಉಪಕಾರ |
| ಸಯ್ಪು | - | ಪುಣ್ಯ, ಅದೃಷ್ಟ, ಸೌಭಾಗ್ಯ |

| | | |
|---|---|---|
| ಸರ | - | ಸ್ವರ |
| ಸರಬರಾಜು | - | ಪೂರೈಕೆ |
| ಸಾಷ್ಟಾಂಗಮೆರಗು | - | ದೇಹದ ಎಂಟು ಅಂಗಗಳನ್ನು ನೆಲಕ್ಕೆ ತಾಗಿಸಿ ಮಾಡುವ ನಮಸ್ಕಾರ |
| ಸುಗೀತ | - | ಹಾಡುಗಳು |
| ಸುರದ್ಯತ್ತ ಸುರದಾವ | - | ಸುರಿದರೂ ಸುರಿದೀತು |
| ಸೂರ್ಯಜ | - | ಸೂರ್ಯ ಪುತ್ರ, ಕರ್ಣ |
| ಸೆರಿಗ್ಗೆ | - | ಸೆರಗಿಗೆ |
| ಸೇಸೆ | - | ಮಂತ್ರಾಕ್ಷತೆ |
| ಸೊಲ್ಲು | - | ಮಾತು |
| ಸೋಹು | - | ಅಟ್ಟು, ಓಡಿಸು |
| ಸ್ಥಾವರ | - | ಸ್ಥಿರವಾದ |
| ಸ್ಥಾಣು | - | ಕಂಬ |
| ಸ್ಥೂಲ | - | ನಿಖರವಲ್ಲದ, ಸರಿಸುಮಾರಾದ |
| ಹಂಬು | - | ಬಳ್ಳಿ |
| ಹಚ್ಚಡ | - | ದುಪ್ಪಟಿ , ಬಟ್ಟೆ, ವಸ್ತ್ರ, ಹೊದಿಕೆ |
| ಹಡದಿ | - | ಅಗಸನು ಒಗೆದು ಕೊಟ್ಟ ಬಟ್ಟೆ |
| ಹಣಿಗೆ | - | ಬಾಚಣಿಗೆ |
| ಹರದಾರಿ | - | ಕಾಲು ಯೋಜನ, ಸುಮಾರು ಮೂರು ಮೈಲಿ |
| ಹರದಾವ | - | ಹರಿದು ಹೋದವು |
| ಹಳು | - | ಕಾಡು |
| ಹಾಂಗ | - | ಹಾಗೆ |
| ಹಾಸು | - | ಹರಡು |
| ಹಾಹಾಕಾರ | - | ಪರದಾಟ, ಗೋಳಾಟ |
| ಹೀನ ವೃತ್ತಿ | - | ವ್ಯಕ್ತಿಯ ಘನತೆಗೆ ತಕ್ಕದಲ್ಲದ ಕೆಲಸ |
| ಹೆರಳು | - | ಕೂದಲನ್ನು ಒಟ್ಟಾಗಿ ಸೇರಿಸಿ ಹೆಣೆದುದು, ಜಡೆ |
| ಹೈದ | - | ಹುಡುಗ, ಬಾಲಕ |
| ಹೊಗರಿಸು | - | ಸೂಸು, ಹೊಳೆ |

# ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರುಗಳು

| | ಸ್ಥಳ | ಅಧ್ಯಕ್ಷರು | ವರ್ಷ |
|---|---|---|---|
| 1. | ಬೆಂಗಳೂರು | ಎಚ್.ವಿ. ನಂಜುಂಡಯ್ಯ | 1915 ಮೇ 3, 4, 5, 6 |
| 2. | ಬೆಂಗಳೂರು | ಎಚ್.ವಿ. ನಂಜುಂಡಯ್ಯ | 1916 ಮೇ 6, 7, 8 |
| 3. | ಮೈಸೂರು | ಎಚ್.ವಿ. ನಂಜುಂಡಯ್ಯ | 1917 ಜೂನ್ 8, 9, 10 |
| 4. | ಧಾರವಾಡ | ಆರ್. ನರಸಿಂಹಾಚಾರ್ | 1918 ಮೇ 11, 12, 13 |
| 5. | ಹಾಸನ | ಕರ್ಪೂರ ಶ್ರೀನಿವಾಸರಾವ್ | 1919 ಮೇ 6, 7, 8 |
| 6. | ಹೊಸಪೇಟೆ | ರೊದ್ದ ಶ್ರೀನಿವಾಸರಾಯ | 1920 ಜೂನ್ 20, 21 |
| 7. | ಚಿಕ್ಕಮಗಳೂರು | ಕೆ.ಪಿ. ಪುಟ್ಟಣ್ಣಶೆಟ್ಟಿ | 1921 ಮೇ 19, 20, 21 |
| 8. | ದಾವಣಗೆರೆ | ಎಂ. ವೆಂಕಟಕೃಷ್ಣಯ್ಯ | 1922 ಮೇ 12, 13 |
| 9. | ವಿಜಾಪುರ | ಸಿದ್ಧಾಂತಿ ಶಿವಶಂಕರಶಾಸ್ತ್ರಿ | 1923 ಮೇ 21, 22, 23 |
| 10. | ಕೋಲಾರ | ಹೊಸಕೋಟೆ ಕೃಷ್ಣಶಾಸ್ತ್ರಿ | 1924 ಮೇ 16, 17, 18 |
| 11. | ಬೆಳಗಾವಿ | ಬೆನಗಲ್ ರಾಮರಾವ್ | 1925 ಮೇ 9, 10, 11 |
| 12. | ಬಳ್ಳಾರಿ | ಫ.ಗು. ಹಳಕಟ್ಟಿ | 1926 ಮೇ 22, 23, 24 |
| 13. | ಮಂಗಳೂರು | ಆರ್. ತಾತಾಚಾರ್ಯ | 1927 ಮೇ 19, 20, 21 |
| 14. | ಕಲಬುರ್ಗಿ | ಬಿ.ಎಂ. ಶ್ರೀಕಂಠಯ್ಯ | 1928 ಜೂನ್ 1, 2, 3 |
| 15. | ಬೆಳಗಾವಿ | ಮಾಸ್ತಿ ವೆಂಕಟೇಶ ಅಯ್ಯಂಗಾರ್ | 1929 ಮೇ 12, 13, 14 |
| 16. | ಮೈಸೂರು | ಆಲೂರು ವೆಂಕಟರಾಯರು | 1930 ಅಕ್ಟೋಬರ್ 5, 6, 7 |
| 17. | ಕಾರವಾರ | ಮುಳಿಯ ತಿಮ್ಮಪ್ಪಯ್ಯ | 1931 ಡಿಸೆಂಬರ್ 28, 29, 30 |
| 18. | ಮಡಿಕೇರಿ | ಡಿ.ವಿ. ಗುಂಡಪ್ಪ | 1932 ಡಿಸೆಂಬರ್ 28, 29, 30 |
| 19. | ಹುಬ್ಬಳ್ಳಿ | ವೈ. ನಾಗೇಶಶಾಸ್ತ್ರಿ | 1933 ಡಿಸೆಂಬರ್ 29, 30, 31 |
| 20. | ರಾಯಚೂರು | ಪಂಜೆ ಮಂಗೇಶರಾಯರು | 1934 ಡಿಸೆಂಬರ್ 28, 29, 30 |

| | | | |
|---|---|---|---|
| 21. | ಮುಂಬಯಿ | ಎನ್.ಎಸ್. ಸುಬ್ಬರಾವ್ | 1935 ಡಿಸೆಂಬರ್ 26, 27, 38 |
| 22. | ಜಮಖಂಡಿ | ಬೆಳ್ಳಾವೆ ವೆಂಕಟನಾರಣಪ್ಪ | 1937 ಡಿಸೆಂಬರ್ 29, 30, 31 |
| 23. | ಬಳ್ಳಾರಿ | ರಂ.ರಾ. ದಿವಾಕರ | 1938 ಡಿಸೆಂಬರ್ 29, 30, 31 |
| 24. | ಬೆಳಗಾವಿ | ಮುದುವೀಡು ಕೃಷ್ಣರಾಯರು | 1939 ಡಿಸೆಂಬರ್ 25, 26, 27, 28 |
| 25. | ಧಾರವಾಡ | ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿ | 1940 ಡಿಸೆಂಬರ್ 29 ರಿಂದ ಜನವರಿ 1, 1941 |
| 26. | ಹೈದ್ರಾಬಾದ | ಎ.ಆರ್. ಕೃಷ್ಣಶಾಸ್ತ್ರಿ | 1941 ಡಿಸೆಂಬರ್ 27, 28, 29 |
| 27. | ಶಿವಮೊಗ್ಗ | ದ.ರಾ. ಬೇಂದ್ರೆ | 1943 ಡಿಸೆಂಬರ್ 26, 27, 28 |
| 28. | ರಬಕವಿ | ಶಿ.ಶಿ. ಬಸವನಾಳ | 1944 ಡಿಸೆಂಬರ್ 28, 29, 30 |
| 29. | ಮದರಾಸು | ಟಿ.ಪಿ. ಕೈಲಾಸಂ | 1945 ಡಿಸೆಂಬರ್ 26, 27, 28 |
| 30. | ಹರಪನಹಳ್ಳಿ | ಸಿ.ಕೆ. ವೆಂಕಟರಾಮಯ್ಯ | 1946 ಮೇ 07, 08, 09 |
| 31. | ಕಾಸರಗೋಡು | ತಿ.ತಾ. ಶರ್ಮ | 1948 ಡಿಸೆಂಬರ್ 29, 30, 31 |
| 32. | ಕಲಬುರ್ಗಿ | ರೆವರೆಂಡ್ ಉತ್ತಂಗಿ ಚೆನ್ನಪ್ಪ | 1949 ಮಾರ್ಚ್ 5, 6, 7 |
| 33. | ಸೊಲ್ಲಾಪುರ | ಎಂ.ಆರ್. ಶ್ರೀನಿವಾಸಮೂರ್ತಿ | 1950 ಮೇ 24, 25, 26 |
| 34. | ಮುಂಬಯಿ | ಎಂ. ಗೋವಿಂದ ಪೈ | 1951 ಡಿಸೆಂಬರ್ 26, 27, 28 |
| 35. | ಬೇಲೂರು | ಸಿ.ಚೆ. ನಂದಿಮಠ | 1952 ಮೇ 16, 17, 18 |
| 36. | ಕುಮಟಾ | ವಿ. ಸೀತಾರಾಮಯ್ಯ | 1954 ಡಿಸೆಂಬರ್ 26, 27, 28 |
| 37. | ಮೈಸೂರು | ಕೋಟ ಶಿವರಾಮ ಕಾರಂತ | 1955 ಜೂನ್ 10, 11, 12 |
| 38. | ರಾಯಚೂರು | ಆದ್ಯ ರಂಗಾಚಾರ್ಯ | 1955 ಡಿಸೆಂಬರ್ 25, 26, 27 |
| 39. | ಧಾರವಾಡ | ಕೆ.ವಿ. ಪುಟ್ಟಪ್ಪ | 1957 ಮೇ 07, 08, 09 |
| 40. | ಬಳ್ಳಾರಿ | ವಿ.ಕೃ. ಗೋಕಾಕ | 1958 ಜನವರಿ 18, 19, 20 |
| 41. | ಬೀದರ | ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ | 1960 ಫೆಬ್ರವರಿ 11, 12, 13 |
| 42. | ಮಣಿಪಾಲ | ಅ.ನ. ಕೃಷ್ಣರಾಯ | 1960 ಡಿಸೆಂಬರ್ 27, 28, 29 |
| 43. | ಗದಗ | ಕೆ.ಜಿ. ಕುಂದಣಗಾರ | 1961 ಡಿಸೆಂಬರ್ 27, 28, 29 |

| | | | |
|---|---|---|---|
| 44. | ತುಮಕೂರು | ರಂ.ಶ್ರೀ. ಮುಗಳಿ | 1963 ಡಿಸೆಂಬರ್ 28, 29, 30 |
| 45. | ಕಾರವಾರ | ಕಡೆಂಗೊಡ್ಲು ಶಂಕರಭಟ್ಟ | 1965 ಮೇ 10, 11, 12 |
| 46. | ಶ್ರವಣಬೆಳಗೊಳ | ಆ.ನೇ. ಉಪಾಧ್ಯೆ | 1967 ಮೇ 26, 27, 28 |
| 47. | ಬೆಂಗಳೂರು | ದೇ. ಜವರೇಗೌಡ | 1970 ಡಿಸೆಂಬರ್ 27, 28, 29 |
| 48. | ಮಂಡ್ಯ | ಜಯದೇವಿತಾಯಿ ಲಿಗಾಡೆ | 1974 ಮೇ 31, ಜೂನ್ 1, 2, |
| 49. | ಶಿವಮೊಗ್ಗ | ಎಸ್.ವಿ. ರಂಗಣ್ಣ | 1976 ಡಿಸೆಂಬರ್ 11, 12, 13 |
| 50. | ನವದೆಹಲಿ | ಜಿ.ಪಿ. ರಾಜರತ್ನಂ | 1978 ಏಪ್ರಿಲ್ 23, 24, 25 |
| 51. | ಧರ್ಮಸ್ಥಳ | ಎಂ. ಗೋಪಾಲಕೃಷ್ಣ ಅಡಿಗ | 1979 ಮಾರ್ಚ್ 09, 10, 11 |
| 52. | ಬೆಳಗಾವಿ | ಬಸವರಾಜ ಕಟ್ಟೀಮನಿ | 1980 ಫೆಬ್ರವರಿ 07, 08, 09, 10 |
| 53. | ಚಿಕ್ಕಮಗಳೂರು | ಪು.ತಿ. ನರಸಿಂಹಾಚಾರ್ | 1981 ಮಾರ್ಚ್ 13, 14, 15 |
| 54. | ಮಡಿಕೇರಿ | ಶಂ.ಬಾ. ಜೋಶಿ | 1981 ನವೆಂಬರ್ 27, 28, 29, 30 |
| 55. | ಶಿರಸಿ | ಗೊರೂರು ರಾಮಸ್ವಾಮಿ ಅಯ್ಯಂಗಾರ್ | 1982 ಡಿಸೆಂಬರ್ 23, 24, 25, 26 |
| 56. | ಕೈವಾರ | ಎ.ಎನ್. ಮೂರ್ತಿರಾವ್ | 1984 ಮಾರ್ಚ್ 23, 24, 25 |
| 57. | ಬೀದರ | ಹಾ.ಮಾ. ನಾಯಕ | 1985 ಏಪ್ರಿಲ್ 05, 06, 07 |
| 58. | ಕಲಬುರಗಿ | ಸಿದ್ಧಯ್ಯ ಪುರಾಣಿಕ | 1987 ಅಕ್ಟೋಬರ್ 29, 30,31 |
| 59. | ಹುಬ್ಬಳ್ಳಿ | ಆರ್.ಸಿ. ಹಿರೇಮಠ | 1990 ಫೆಬ್ರವರಿ 16, 17, 18 |
| 60. | ಮೈಸೂರು | ಕೆ.ಎಸ್. ನರಸಿಂಹಸ್ವಾಮಿ | 1990 ಡಿಸೆಂಬರ್ 28, 29, 30 |
| 61. | ದಾವಣಗೆರೆ | ಜಿ.ಎಸ್. ಶಿವರುದ್ರಪ್ಪ | 1992 ಜನವರಿ 09, 10, 11, 12 |
| 62. | ಕೊಪ್ಪಳ | ಸಿಂಪಿ ಲಿಂಗಣ್ಣ | 1993 ಫೆಬ್ರವರಿ 05, 06, 07 |
| 63. | ಮಂಡ್ಯ | ಚದುರಂಗ | 1994 ಫೆಬ್ರವರಿ 11, 12, 13 |
| 64. | ಮುಧೋಳ | ಎಚ್.ಎಲ್. ನಾಗೇಗೌಡ | 1995 ಜೂನ್ 03, 04, 05 |
| 65. | ಹಾಸನ | ಚೆನ್ನವೀರ ಕಣವಿ | 1996 ಡಿಸೆಂಬರ್ 21, 22, 23, 24 |
| 66. | ಮಂಗಳೂರು | ಕಯ್ಯಾರ ಕಿಞ್ಞಣ್ಣ ರೈ | 1997 ಡಿಸೆಂಬರ್ 11, 12, 13, 14 |

| | | | |
|---|---|---|---|
| 67. | ಕನಕಪುರ | ಎಸ್.ಎಲ್. ಭೈರಪ್ಪ | 1999 ಫೆಬ್ರವರಿ 26, 27, 28 |
| 68. | ಬಾಗಲಕೋಟೆ | ಶಾಂತಾದೇವಿ ಮಾಳವಾಡ | 2000 ಜೂನ್ 24, 25, 26 |
| 69. | ತುಮಕೂರು | ಯು.ಆರ್. ಅನಂತಮೂರ್ತಿ | 2002 ಫೆಬ್ರವರಿ 15, 16, 17 |
| 70. | ಬೆಳಗಾವಿ | ಪಾಟೀಲ ಪುಟ್ಟಪ್ಪ | 2003 ಮಾರ್ಚ್ 07, 08, 09 |
| 71. | ಮೂಡಬಿದರೆ | ಕಮಲಾ ಹಂಪನಾ | 2003 ಡಿಸೆಂಬರ್ 18, 19, 20, 21 |
| 72. | ಬೀದರ | ಶಾಂತರಸ | 2004 ಜನವರಿ 27, 28, 29 |
| 73. | ಶಿವಮೊಗ್ಗ | ಕೆ.ಎಸ್. ನಿಸಾರ್ ಅಹಮ್ಮದ್ | 2006 ಡಿಸೆಂಬರ್ 20, 21, 22, 23 |
| 74. | ಉಡುಪಿ | ಎಲ್.ಎಸ್. ಶೇಷಗಿರಿರಾವ್ | 2007 ಡಿಸೆಂಬರ್ 12, 13, 14, 15 |
| 75. | ಚಿತ್ರದುರ್ಗ | ಎಲ್. ಬಸವರಾಜು | 2009 ಜನವರಿ 29, 30, 31, ಫೆಬ್ರವರಿ 01 |
| 76. | ಗದಗ | ಗೀತಾ ನಾಗಭೂಷಣ | 2010 ಫೆಬ್ರವರಿ 19, 20, 21 |
| 77. | ಬೆಂಗಳೂರು | ಜಿ. ವೆಂಕಟಸುಬ್ಬಯ್ಯ | 2011 ಫೆಬ್ರವರಿ 04, 05, 06 |
| 78. | ಗಂಗಾವತಿ | ಸಿ.ಪಿ. ಕೃಷ್ಣಕುಮಾರ | 2011 ಡಿಸೆಂಬರ್ 09, 10, 11 |
| 79. | ವಿಜಾಪುರ | ಕೋ. ಚನ್ನಬಸಪ್ಪ | 2013 ಫೆಬ್ರವರಿ 09, 10, 11 |
| 80. | ಮಡಿಕೇರಿ | ನಾ. ಡಿಸೋಜ | 2014 ಜನವರಿ 07,08,09 |
| 81. | ಶ್ರವಣಬೆಳಗೊಳ | ಡಾ. ಸಿದ್ಧಲಿಂಗಯ್ಯ | 2015 ಜನವರಿ 31, ಫೆಬ್ರವರಿ 1, 2, 3 |
| 82. | ರಾಯಚೂರು | ಬರಗೂರು ರಾಮಚಂದ್ರಪ್ಪ | 2016 ಡಿಸೆಂಬರ್ 2, 3, 4 |
| 83. | ಮೈಸೂರು | ಚಂದ್ರಶೇಖರ ಪಾಟೀಲ | 2017 ನವೆಂಬರ್ 24, 25, 26 |
| 84. | ಧಾರವಾಡ | ಚಂದ್ರಶೇಖರ ಕಂಬಾರ | 2019 ಜನವರಿ 4, 5, 6 |
| 85. | ಕಲಬುರಗಿ | ಎಚ್.ಎಸ್. ವೆಂಕಟೇಶ ಮೂರ್ತಿ | 2020 ಫೆಬ್ರವರಿ 5, 6, 7 |
| 86. | ಹಾವೇರಿ | ಡಾ. ದೊಡ್ಡರಂಗೇಗೌಡ | 2023 ಜನವರಿ 6, 7, 8 |
| 87. | ಮಂಡ್ಯ | ನಾಡೋಜ ಡಾ. ಗೊ.ರು. ಚೆನ್ನಬಸಪ್ಪ | 2024 ಡಿಸೆಂಬರ್ 20, 21, 22 |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in